ಪ್ರಕಟಣೆ- ೨

ಇನ್ನು ಗ್ರಾಮೀಣಾಭಿವೃದ್ಧಿ, ಪಂಚಾಯಿತ್ ರಾಜ್ ಮತ್ತು ವಕ್ಫ್ ಮಂತ್ರಿಯವರು ಅನಾರೋಗ್ಯದ ನಿಮಿತ್ತ ತಮ್ಮ ಗೈರು ಹಾಜರಿಯಲ್ಲಿ ಸದನದಲ್ಲಿ ತಮ್ಮ ಇಲಾಖೆಗೆ ಸಂಬಂಧಪಟ್ಟ ವಿಷಯಗಳನ್ನು ನೋಡಿಕೊಳ್ಳಲು ಮಾನ್ಯ ವಾರ್ತೆ ಮತ್ತು ಪ್ರವಾಸೋದ್ಯಮ ಮಂತ್ರಿಯವರಾದ ಶ್ರೀ ಎಂ. ಪಿ. ಪ್ರಕಾಶ್ ಅವರನ್ನು ವಿನಂತಿಸಿದ್ದಾರೆಂದು ನನಗೆ ದಿನಾಂಕ ೨-೧೦-೮೮ರಂದು ಪತ್ರ ಬರೆದಿರುತ್ತಾರೆ. ಈ ವಿಷಯವನ್ನು ಸಭೆಯ ಗಮನಕ್ಕೆ ತರ ಬಯಸುತ್ತೇನೆ. ಈಗ ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಪೋರ್ಟ್‌ಫೋಲಿಯೋ ಹಂಚಿದ್ದೀರಾ ಇಲ್ಲವೇ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಮಾತ್ರ ಹಂಚಿದ್ದೀರಾ.

ಅಧ್ಯಕ್ಷರು.—ಉತ್ತರ ಕೊಡುವುದಕ್ಕೆ ಅಷ್ಟೆ. ಇವತ್ತು ೩ ಅಡ್ಜರ್ನ್‌ಮೆಂಟ್ ಮೋಷನ್‌ಗಳಿವೆ. ಮಾನ್ಯ ಕೃಷ್ಣನ್‌ರವರು, ಮಾನ್ಯ ವೆಂಕಟರಾಮಯ್ಯನವರು ಹಾಗೂ ಶ್ರೀಮತಿ ನಾಗರತ್ನಮ್ಮನವರು ಮಾತನಾಡಲಿ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಪ್ರಿವಿಲೇಜ್ ಮೋಷನ್‌ಗೆ ಕಳಿಸಿದ್ದೇನೆ.

ಅಧ್ಯಕ್ಷರು.—ಮೊದಲು ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ತೆಗೆದುಕೊಳ್ಳೋಣ ಪ್ರಿವಿಲೇಜ್ ಮೋಷನ್ ಅನ್ನು ನಾನು ನೋಡುತ್ತೇನೆ.

(ಗೊಂದಲ)

ಶ್ರೀ ಮೊಹಮದ್ ಲೈಕುದ್ದೀನ್.—ಮಾನ್ಯ ಅಧ್ಯಕ್ಷರೇ,......

ಒಬ್ಬ ಮಾನ್ಯ ಸದಸ್ಯರು.—ಅವರು ಬೀದರ್ ಜಿಲ್ಲೆ ಶಾಸಕರು, ಅವರಿಗೆ ಮೊದಲು ಅವಕಾಶ ಕೊಡಬೇಕು.

ಅಧ್ಯಕ್ಷರು.—ತಾವು ಅವರಬಗ್ಗೆ ವಕಾಲತ್ತು ಮಾಡುವುದು ಬೇಡ. ಮುಂದೆ ಇದು ಸ್ಪೆಷಲ್ ಕೇಸ್ ಎಂದು ಪರಿಗಣಿಸಿ ಅವರಿಗೂ ಅವಕಾಶ ಕೊಡೋಣ.

ನಿಲುವಳಿ ಸೂಚನೆ ಪ್ರಸ್ತಾಪ

ಬೀದರ್‌ನಲ್ಲಿ ನಡೆದ ಮತೀಯ ಗಲಭೆಯ ಬಗ್ಗೆ.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧ ಪಕ್ಷ ನಾಯಕಿಯವರು).—ಮಾನ್ಯ ಅಧ್ಯಕ್ಷರೇ, ಬೀದರ್ ಬಹಳ ಬ್ಯಾಕ್‌ವರ್ಡ್ ಏರಿಯಾ ಆದರೂ it is a peace loving district. ಅಲ್ಲಿಯ ಜನ ಬಹಳ ಮೃದು. ಅವರುಗಳಿಗೆ ಯಾವ ತರಹದ ಗಲಾಟೆ ಆಗಬಾರದು, ನಾವು ಶಾಂತಿಯುತವಾಗಿ ಬಾಳಬೇಕು ಎಂದು ಹೇಳುವಂಥ ಶಾಂತಿ ಪ್ರಿಯ ಜನಗಳು ಅವರು. ಅಲ್ಲಿ ೧೪, ೧೫ ಮತ್ತು ೧೬ ರಂದು ಆದಂಥ ಅವಾಂತರ ಮತ್ತು ಅಲ್ಲಿ ಆದಂಥ ಅಮಾನುಷವಾದ ಘಟನೆಗಳನ್ನು ನೋಡಿದರೆ ಮಾನವೀಯತೆ ಇಲ್ಲದೇ ಇಂಥ ಘಟನೆಗಳು ನಡೆದಿರುವುದು ಬಹಳ ದುರದುಷ್ಟಕರ. ಈ ಘಟನೆಯಲ್ಲಿ ಆರು ಜನ ವಿದ್ಯಾರ್ಥಿಗಳು ಸತ್ತು ಹೋಗಿದ್ದಾರೆ. ಇದರ ಬಗ್ಗೆ ೪೦ ಜನರನ್ನು ಅರೆಸ್ಟ್ ಕೂಡಾ ಮಾಡಿದ್ದಾರೆ. ಮತ್ತು ಇದರ ವಿಚಾರವಾಗಿ ಸಿ. ಒ. ಡಿ. ತನಿಖೆಯನ್ನು ಮಾಡುತ್ತೇವೆ ಎಂದು ಹೇಳಿ ಈಗ ಜುಡಿಸಿಯಲ್ ಎನ್‌ಕ್ವೈರಿಗೂ ಕೂಡಾ ಹಾಕಿದ್ದಾರೆ ಎಂದು ಈಗ ನಮಗೆಲ್ಲಾ ಗೊತ್ತಾಗಿದೆ. ಇದು ನಡೆದಾದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಗವರ್ನರ್ ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ. ನಮ್ಮ ಪಕ್ಷದಿಂದ ಜಾಫರ್ ಷರೀಫ್ ಅವರು ಮತ್ತು ಅರೋರಾ ಎಂ. ಪಿ. ಅವರೂ ಕೂಡಾ ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ. ಅಲ್ಲಿಗೆ ಭೇಟಿ ಕೊಟ್ಟು ಅಲ್ಲಿ ನಡೆದಂಥ ಎಲ್ಲಾ ದುರದೃಷ್ಟ ಕೃತ್ಯಗಳನ್ನು ಮತ್ತು ಅಲ್ಲಿ ನಡೆದಿರತಕ್ಕಂಥದ್ದೆಲ್ಲವನ್ನು ನೋಡಿ ಮನಸ್ಸಿಗೆ ಬಹಳ ಬೇಜಾರು ಪಟ್ಟುಕೊಂಡು ಎಲ್ಲರೂ ಬಂದಿದ್ದಾರೆ. ಇದಾದನಂತರ ಹೈಪವರ್ ಕಮಿಟಿಯನ್ನು ಮಾಡಿ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಮ್ಮ ಪ್ರಧಾನ ಮಂತ್ರಿಗಳು ನಮ್ಮನ್ನೆಲ್ಲಾ ಕಳುಹಿಸಿಕೊಟ್ಟರು. ಅದರಲ್ಲಿ ಸಂತೋಷ್ ಮೋಹನ್ ದೇವ್, ಕೇಂದ್ರದ ರಾಜ್ಯ ಗೃಹಖಾತೆಮಂತ್ರಿಯವರ ನೇತೃತ್ವದಲ್ಲಿ ಪಹಾಡಿಯಾ, ವೀರೇಂದ್ರ ಪಾಟೀಲ್, ದರ್ಬಾರ್ ಸಿಂಗ್, ಮತ್ತು ಪೂಜಾರಿ, ಸೂರ್ಯವಂಶಿ ಮತ್ತು ನಾನು ಹೀಗೆ ಐದಾರು ಜನರನ್ನು ಅಲ್ಲಿಗೆ ಕಳುಹಿಸಿ ಕೊಟ್ಟರು. ನಾವೆಲ್ಲಾ ಅಲ್ಲಿಗೆ ಹೋಗಿ ನೋಡಿದಾಗ ಅಲ್ಲಿ ಏಕ್‌ದಂ ಈ ಗಲಾಟೆ ಶುರುವಾಗಿಲ್ಲ, ಈ ಗಲಾಟೆ ಆಗಬೇಕಾದರೆ ಅನೇಕ ದಿವಸಗಳಿಂದ ಇದಕ್ಕೆ ಅನೇಕ ಕಾರಣಗಳು ಇದ್ದಿರಬಹುದು. ಅಲ್ಲಿಗೆ ಭೇಟಿ ನೀಡಿದಾಗ ಹಾಗೆಂದು ಕಂಡು ಬರುತ್ತದೆ. ಈ ಅನೇಕ ಕಾರಣಗಳಲ್ಲಿ ಅಲ್ಲಿ ಕೆಲವು ಹೆಣ್ಣು ಮಕ್ಕಳನ್ನು ಬೇರೆ ಕಡೆಗೆ ಕರೆದುಕೊಂಡು ನಮಗೆ ತೋರಿಸಿದರು. ಅವರ ಮೇಲೆ ನಡೆದಿರತಕ್ಕಂಥ ಅತ್ಯಾಚಾರ ಅವರ ಮೇಲೆ ನಡೆದಿರತಕ್ಕಂತ ಅನ್ಯಾಯ ಇವೆಲ್ಲವನ್ನು ನನ್ನ ಮುಂದೆ ಹೇಳಿದರು. ನಾನು ಅವರನ್ನೆಲ್ಲಾ ಕೇಳಿದೆ, ಇಷ್ಟೆಲ್ಲಾ ನಡೆಯುತ್ತಿದ್ದರೂ ಕಂಪ್ಲೇಂಟನ್ನು ಕೊಟ್ಟಿಲ್ಲವೇ ಮತ್ತು ನೀವು ಇದನ್ನು ಪೋಲೀಸ್ ನವರಿಗೆ ಹೇಳಲಿಲ್ಲವೇ ಎಂದು ಒಂದು ಅರ್ಜಿಯನ್ನು ಕೂಡ ಬರೆಯಲಿಲ್ಲವೇ ಎಂದು ಕೇಳಿದೆ ನಾವೆಲ್ಲಾ ಇದ್ದೇವೆ, ನೀವು ಏತಕ್ಕೆ ಒಂದು ಅರ್ಜಿಯನ್ನು ಬರೆಯಲಿಲ್ಲ ? ನೀವು ಮಾನ್ಯ ಮುಖ್ಯಮಂತ್ರಿಗಳಿಗೂ ಒಂದು ಅರ್ಜಿಯನ್ನು ಬರೆಯಲಿಲ್ಲವೇ ? ಗೃಹ ಮಂತ್ರಿಯವರಿಗೂ ಒಂದು ಅರ್ಜಿಯನ್ನು ಬರೆಯಲಿಲ್ಲವೇ ? ಎಂದು ನಾನು ಅವರನ್ನು ಕೇಳಿದೆ. ಪಾಪ, ಅವರು ಹೇಳಿ ಕೇಳಿ ಬಹಳ ಹಿಂದುಳಿದ ಜನ. ಅಷ್ಟರಮಟ್ಟಿಗೆ ಅವರಿಗೆ ಬುದ್ಧಿ ತೋರಲಿಲ್ಲ ಎಂದು ಕಾಣುತ್ತದೆ. ನಮಗೆ ಗೊತ್ತಾಗಲಿಲ್ಲ ಅವ್ವ ಅವರೇ ಎಂದು ಹೇಳಿದರು. ಅದರ ಜೊತೆಗೆ ನಾವು ಏನು ಕೊಟ್ಟರೂ ಅದಕ್ಕೆ ಮಾನ್ಯತೆ ಇರಲಿಲ್ಲ, ನಾವು ಕೊಟ್ಟಂಥ ಅರ್ಜಿಯನ್ನು ತೆಗೆದುಕೊಳ್ಳುತ್ತಿರಲಿಲ್ಲ, ನಮ್ಮ ಸಹಾಯಕ್ಕೆ ಯಾರೂ ಬರುತ್ತಿರಲಿಲ್ಲ, ನಾವು ಹೀಗೆಯೇ ಕಷ್ಟಪಡುತ್ತಾ ಬಂದಿದ್ದೇವೆ ಎಂದು ಹೇಳಿದರು. ಈಗ ವಿನಾಯಕ ಮೂರ್ತಿ, ವಿನಾಯಕನ ಹಬ್ಬ ಇದಕ್ಕೆ ಕಾರಣ ಆಗಿರಬಹುದೇ ಹೊರತು ಇದರ ಹಿಂದೆ ಬೇಕಾದಷ್ಟು ಅಕೃತ್ಯಗಳು ಇದ್ದಾವೆ ಎಂದು ನನಗಾದರೂ ಭಾಸವಾಗುತ್ತದೆ. ನಾವೆಲ್ಲಾ ನೋಡಿಕೊಂಡು ಹಾಗೆಯೇ ಗುರುದ್ವಾರದ ಬಳಿ ಹೋದೆವು. ಜೋಗ ಸಿಂಗ್ ಅವರು ಮೀಟಿಂಗ್‌ನ್ನು ಕರೆದು ಅಲ್ಲಿ ನಡೆದಂಥ ಅಕೃತ್ಯಗಳನ್ನು ವಿವರಿಸಿ ಅವರು ಕೂಡಾ ಬಹಳ ಹೇಳಿದರು. ಆ ಸಮಯದಲ್ಲಿ ಭೀಮಣ್ಣ ಖಂಡ್ರೆಯವರು ಮಾಡಿದಂಥ ಸಹಾಯವನ್ನು ನಾವು ಹೊಗಳುವುದಕ್ಕೆ ಹತ್ತು ಬಾಯಿಯಾದರೂ ಸಾಲುವುದಿಲ್ಲ, ಅಷ್ಟರಮಟ್ಟಿಗೆ ನಮಗೆಲ್ಲಾ ದುಡ್ಡು ಕೊಟ್ಟು ವಾಪಸ್ಸು ಮನೆಗೆ ಕಳುಹಿಸಿಕೊಟ್ಟರು, ಅದಕ್ಕಾಗಿ ನಾವುಗಳೆಲ್ಲ ಅವರಿಗೆ ಅಭಾರಿಯಾಗಿದ್ದೇವೆ ಎಂದು ಹೇಳಿ ಅವರ ವಿಚಾರದಲ್ಲಿ ಬಹಳವಾಗಿ ಕೊಂಡಾಡಿದರು. ಇದನ್ನೆಲ್ಲಾ ನೋಡುತ್ತ ಬಂದರೆ ಅಲ್ಲಿ ಅಡ್ಮಿನಿಸ್ಟ್ರೇಷನ್ ಏನೂ ಇರಲಿಲ್ಲ, ಅಲ್ಲಿ ಅಡ್ಮಿನಿಸ್ಟ್ರೇಷನ್ನೇ ಕೊಲಾಪ್ಸ್ ಆಗಿತ್ತೋ ಏನೋ ಎನ್ನುವ ಭಾವನೆ ನನಗೆ ಬರುತ್ತದೆ. ಆರು ಮಕ್ಕಳು ಸತ್ತು ಹೋಗಿರುವುದು ಹುಡುಗಾಟವೇನಲ್ಲ. ಓದುವುದಕ್ಕೆಂದು ಬಂದ ಆರು ಮಕ್ಕಳ ಕೊಲೆಯಾಗಿದೆ. ಅಲ್ಲಿ ಬೇಕಾದಷ್ಟು ಜನರಿಗೆ ೪೦–೫೦ ಜನರಿಗೆ ಗಾಯವಾಗಿ ಅವರುಗಳಿಗೆಲ್ಲಾ ತೊಂದರೆಯಾಗಿದೆ. '' ಭೋಗ್ ಸೆರೆಮನಿ '' ಆಗಬೇಕು ಎಂದು ಹೇಳಿ ಅಲ್ಲಿ ಎಲ್ಲಾ ತರಹದ ವ್ಯವಸ್ಥೆಯು ನಡೆದಿತ್ತು. ಅಲ್ಲಿಯೂ ಬೇಕಾದಷ್ಟು ಪ್ರಿಕಾಷನ್ ಕೊಟ್ಟು ಸೆಕ್ಯುರಿಟಿಯನ್ನು ಕೊಟ್ಟಿದ್ದರು ಎಂದು ನಮಗೆ ಕಾಣುತ್ತಿತ್ತು. ಅಲ್ಲಿಂದ ಸೆಂಟ್ರಲ್‌ನಿಂದ ಬಂದಿದ್ದ ಹೋಂ ಮಿನಿಷ್ಟರ್ ಅವರೇ ಅಲ್ಲಿಗೆ ಬಂದು ಮಾನ್ಯ ಮುಖ್ಯಮಂತ್ರಿಗಳಿಗೆ ಅಲ್ಲಿಂದ ನೋಡಿಕೊಂಡು ಬಂದಮೇಲೆ ಪ್ಯಾರಾ ಮಿಲಿಟರಿ ಫೋರ್ಸ್‌ನ್ನು ನಿಮ್ಮ ಸಹಾಯಕ್ಕೆ ಕೊಡುತ್ತೇವೆ ಎಂದು ಅವರು ಹೇಳಿದರು ಆ ಮೇಲೆ ಬಂದ ಸುದ್ದಿಪ್ರಕಾರ ಸನ್ಮಾನ್ಯ ಮುಖ್ಯಮಂತ್ರಿಗಳು ಕೇಂದ್ರದ ಸಹಾಯ ಬೇಕಾಗಿಲ್ಲ, ನಾವೇ ಮ್ಯಾನೇಜ್ ಮಾಡುತ್ತೇವೆಂದು ಹೇಳಿದ ಹಾಗೆ, ನಮಗೆ ಅವಶ್ಯಕ ಎನಿಸಿದರೆ ನಾವು ಕೇಳುತ್ತೇವೆಂದು ಹೇಳಿದ ಹಾಗೆ ನಮಗೆ ಸುದ್ದಿ ಬಂತು. ನನಗೆ ತಿಳಿದಹಾಗೆ ಟೈಮಲಿ ಆಕ್ಷನ್ ಇವರು ತೆಗೆದುಕೊಂಡಿದ್ದರೆ ಇಂತಹ ಇನ್ಸಿಡೆಂಟ್ಸ್ ಆಗುತ್ತಾ ಇರಲಿಲ್ಲ. ಇಷ್ಟು ಕಿರುಕುಳವೂ ಇರುತ್ತಿರಲಿಲ್ಲ. ಮಕ್ಕಳು ಮಕ್ಕಳೇ, ಯಾವ ಮಕ್ಕಳೇ ಆದರೂ ಸರಿಯೇ, ಚೇಷ್ಟೆ ಮಾಡುವುದು ರ್‍ಯಾಂಗಿಂಗ್ ಮಾಡುವುದು ಇವೆಲ್ಲಾ ಅವರಿಗೆ ಅಭ್ಯಾಸವಾಗಿ ಬಂದಿದೆ. ಅದು ವಿಕೋಪಕ್ಕೆ ಹೋಗುವಾಗ, ಆದತೊಂದರೆ ಆಗುವಾಗ ಸರ್ಕಾರ ಟೈಮಲಿ ಅಕ್ಷನ್ ತೆಗೆದುಕೊಳ್ಳಲಿಲ್ಲ. ಈ ವಿಚಾರದಲ್ಲಿ ಸರ್ಕಾರ ಮನಸ್ಸು ಮಾಡಿಲ್ಲ. ಸರ್ಕಾರದವರು ಅದಕ್ಕೆ ಸಾಕಾದಷ್ಟು ಮನಸ್ಸುಕೊಟ್ಟು, ಕೆಲಸ ಮಾಡಿದರೆ ಈ ತರಹ ಎಪಿಸೋಡ್ ಆಗುತ್ತಾ ಇರಲಿಲ್ಲ. ಬೀದರ್ ಜಿಲ್ಲೆಯ ಜನಗಳು ತುಂಬಾ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಕಾಲಕ್ಕೆ ಸರಿಯಾಗಿ ಆಕ್ಷನ್ ತೆಗೆದುಕೊಳ್ಳದಿದ್ದರೆ ಆ ಜನಗಳಿಗೆ ಕಷ್ಟವಾಗುತ್ತದೆ. ಈ ಬೀದರ್ ಜಿಲ್ಲೆಯಿಂದ ಬಂದಂತಹ ಶಾಸಕರು ಈ ವಿಷಯದ ಬಗ್ಗೆ ಮಾತನಾಡುವವರು ಬಹಳ ಜನ ಇದ್ದಾರೆ. ಈ ವಿಚಾರದಲ್ಲಿ ಪೇಪರ್ ಕಟಿಂಗ್ಸ್ ಕೂಡ ಇದೆ. ಆದ್ದರಿಂದ ದಯವಿಟ್ಟು ಇದರ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ (ಗುರುಮಿಠಕಲ್).—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ವಿರೋಧ ಪಕ್ಷದ ನಾಯಕಿಯವರು ತಂದಂತಹ ನಿಳುವಳಿ ಸೂಚನೆಗೆ ನಾನು ಬೆಂಬಲವನ್ನು ಸೂಚಿಸುತ್ತಾ ಬೀದರ್‌ನಲ್ಲಿ ನಡೆದಂತಹ ಘಟನೆ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಬೀದರ್‌ನಲ್ಲಿ ನಡೆದಂತಹ ಘಟನೆ ಚಿಕ್ಕದು ಎಂದು ಕಂಡು ಬಂದರೂ ಕೂಡ ಇದು ರಾಷ್ಟ್ರ ಮಟ್ಟದಲ್ಲಿ ಬಹಳ ಮಹತ್ವವಾದ ಚರ್ಚೆಗೆ ಅವಕಾಶ ಮಾಡಿಕೊಟ್ಟಂತಹ ಘಟನೆ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲಿ ಆರು ವಿದಾರ್ಥಿಗಳ ಕೊಲೆ ಆಗಿದೆ. ಇದಕ್ಕೆ ನಾವು ಹೆಚ್ಚಿನ ಮಹತ್ವ ನೀಡಬಾರದು ಮತ್ತು ಈ ವಿಷಯದಲ್ಲಿ ಎಷ್ಟು ಅವಶ್ಯಕತೆ ಆಗಕ್ಕಿಂ ತಲೂ ಹೆಚ್ಚಿನ ಪ್ರಚಾರ ಇದಕ್ಕೆ ಸಿಗಬಾರದೆಂದು ಕೆಲವು ಜನರು ಹೇಳುತ್ತಿದ್ದಾರೆ. ಇಲ್ಲಿ ಒಂದು ದುಃಖದ ಸಂಗತಿ ಏನೆಂದರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಈ ಘಟನೆ ಬಗ್ಗೆ ಕೊಟ್ಟಂತಹ ' ಪ್ರೆಸ್ ಸ್ಟೇಟ್‌ಮೆಂಟ್ ' ನಿಜವಾಗಲೂ ಈ ಘಟನೆ ಆಗಬೇಕಾಗಿದ್ದರೆ ಇದಕ್ಕೆ ಕಾರಣಕರ್ತರು ಯಾರು ಎನ್ನುವುದನ್ನು ನಾವು ಮೊದಲು ಪತ್ತೆ ಹಚ್ಚಬೇಕಾಗಿದೆ. ಕಾರಣ ಕರ್ತರು ಯಾರು ಎಂದು ತಿಳಿದಮೇಲೆ ಅವರ ಮೇಲೆ ಯಾವ ಕ್ರಮವನ್ನು ಸರ್ಕಾರದವರು ತೆಗೆದು ಕೊಂಡಿದ್ದಾರೆ ಎನ್ನುವುದು ಎರಡನೇ ಪ್ರಶ್ನೆ. ಮೂರನೆಯ ಪ್ರಶ್ನೆ ಎಂದರೆ ಈ ಒಂದು ಘಟನೆ ಯಾವ ವಾತಾವರಣದಲ್ಲಿ ಅಲ್ಲಿ ನಡೆಯಿತು ಮತ್ತು ಈ ಘಟನೆಯಲ್ಲಿ ಯಾವ ಯಾವ ಸಂಘಟನೆಗಳು ಏನೇನು ಪಾತ್ರವನ್ನು ವಹಿಸಿದೆ ಎನ್ನತಕ್ಕದ್ದು ಕೂಡ ಬಹಳ ಮಹತ್ವವಾದುದು. ೧೪ನೇ ತಾರೀಖು ರಾತ್ರಿ ೧೧ ಗಂಟೆಗೆ ಕೆಲವು ಸಿಖ್ ವಿದ್ಯಾರ್ಥಿಗಳು ಗಾಂಧೀ ಗಂಜ್‌ನ ಗಣೇಶ್ ಮಂಟಪ್‌ಗೆ ಹೋಗಿ ಅದರ ಎದುರುಗಡೆ ನಿಂತರು. ಆಗ ಕೆಲವು ಜನರ ಗುಂಪು ಬಂದು ಚಂದಾ ಕೇಳಿದರು ಎನ್ನುವ ಅಪಾದನೆ ಇದೆ. ಚಂದಾ ಕೇಳಿದ ಮೇಲೆ ಆ ಗುಂಪಿನವರಿಗೂ ಮತ್ತು ಸಿಖ್ ವಿದ್ಯಾರ್ಥಿಗಳ ನಡುವೆ ಘರ್ಷಣೆ ಆಯಿತು. ಇದೇ ಒಂದು ವಿಷಯ ಜಗಳಕ್ಕೆ ಕಾರಣವಾಯಿತೆಂದು ಹೇಳಲಾಗಿದೆ. ಅಲ್ಲಿ ಜಗಳ ಆಗಿದೆ ಯೆಂದು ಅಲ್ಲಿನ ಎಸ್.ಪಿ. ಯವರಿಗೆ, ಡಿ.ವೈ.ಎಸ್.ಪಿ. ಯವರಿಗೆ, ಸರ್ಕಲ್ ಇನ್ಸ್‌ಪೆಕ್ಟರ್‌ರವರಿಗೆ, ಸಬ್ ಇನ್ಸ್‌ಪೆಕ್ಟರ್‌ರವರಿಗೆ ಎಲ್ಲಾ ಪೋಲೀಸ್ ಅಧಿಕಾರಿಗಳಿಗೆ ಗೊತ್ತಾಯಿತು. ರಾತ್ರಿ ೧೧ ಗಂಟೆಗೆ ಆದಂತಹ ಘಟನೆ ಬಗ್ಗೆ ಇಡೀ ರಾತ್ರಿ ಬೀದರ್ ನಗರದಲ್ಲಿ ಇದರ ಬಗ್ಗೆ ಚರ್ಚೆ ನಡೆಯಿತು. ಅನೇಕ ಕಡೆ ಇದರ ಬಗ್ಗೆ ಗುಸು ಗುಸು ಮಾತುಕತೆ ಆಗಿದ್ದು ಸಹ ಪೋಲೀಸ್‌ನವರಿಗೆ ಗೊತ್ತಿದೆ. ಸಿ.ಓ.ಡಿ. ಪೋಲೀಸ್‌ನವರಿಗೂ ಸಹ ಗೊತ್ತಿದೆ. ಬಹುಶಃ ಇದರ ಬಗ್ಗೆ ಇಂಟಲಿಜೆನ್ಸ್ ಪೋಲೀಸ್‌ನವರಿಗೆ ಮಾಹಿತಿ ಇರಬೇಕು, ಇರುತ್ತದೆ. ಅಲ್ಲಿ ಆರ್ಮಿ ಇದೆ, ಏರ್‌ಫೋರ್ಸ್ ಕೂಡ ಸಮೀಪದಲ್ಲಿರುವ ಕಾರಣ ಸೆಂಟ್ರಲ್ ಇಂಟಲಿಜೆನ್ಸ್, ಸ್ಟೇಟ್ ಇಂಟಲಿಜೆನ್ಸ್‌ನವರೂ ಇರುತ್ತಾರೆ. ಅಲ್ಲಿ ಡೆಪ್ಯುಟಿ ಕಮೀಷನರ್ ವಾಸ ಮಾಡುವ ಕಾರಣ ಅವರಿಗೆ ಇದರ ಮಾಹಿತಿ ಸಿಗುವುದಕ್ಕೆ ಏನೂ ತೊಂದರೆ ಆಗುತ್ತಾ ಇರಲಿಲ್ಲ. ರಾತ್ರಿ ೧೧ ಗಂಟೆಗೆ ಈ ಘಟನೆ ಆದಮೇಲೆ ಅಲ್ಲಿನ ಪೋಲೀಸರು ಕೂಡಲೇ ಎಚ್ಚರ ವಹಿಸಿ ಕ್ರಮ ತೆಗೆದುಕೊಳ್ಳಲಿಲ್ಲ ? ನಂತರ ೧೫ನೇ ತಾರೀಕು ಪುನಃ ಸುಮಾರು ನೂರು ಜನ ಸಿಕ್ ವಿದ್ಯಾರ್ಥಿಗಳು ತಮಗೆ ಕೊಟ್ಟ ತೊಂದರೆಯ ಬಗ್ಗೆ ಸೇಡನ್ನು ತೀರಿಸಿಕೊಳ್ಳಬೇಕೆಂದು ಲಾಠಿ, ಕತ್ತಿ ಹಾಗೂ ತಳವಾರ ಗಳನ್ನು ಹಿಡಿದುಕೊಂಡು ಮೆರವಣಿಗೆಯಲ್ಲಿ ಗಾಂಧಿಗಂಜ್‌ಗೆ ಬಂದು ಅಲ್ಲಿದ್ದ ಅನೇಕ ಜನರನ್ನು ಹೆದರಿಸಿ ದ್ದಾರೆಂದು ಹಾಗೂ ಬಸ್ ಮತ್ತು ಲಾರಿಗಳಿಗೆ ಕಲ್ಲುಗಳನ್ನು ಎಸೆದರೆಂದು ವರದಿ ಆಗಿದೆ. ಗಾಂಧಿ ಗಂಜ್, ಮೋತಿನಗರ್ ಮುಂತಾದ ಕಡೆ ಈ ಘಟನೆ ನಡೆದ ಮೇಲೆ ಅಲ್ಲಿದ್ದ ಪೋಲೀಸರು ಕೂಡಲೇ ಎಚ್ಚರ ವಹಿಸಿ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ? ಈ ಘಟನೆಗೆ ಹೆಚ್ಚಿನ ಆದ್ಯತೆ ಕೊಟ್ಟು ಅಲ್ಲಿ ಹೆಚ್ಚಿನ ಪೋಲೀಸ್ ಫೋರ್ಸ್‌ನ್ನು ಏತಕ್ಕೆ ಇಡಲಿಲ್ಲ ? ಮೆರವಣಿಗೆಯಲ್ಲಿ ಬಂದ ವಿದ್ಯಾರ್ಥಿಗಳ ಮೇಲೆ ಪೋಲೀಸರು ಲಾಠಿ ಚಾರ್ಜ್ ಮಾಡಿದರು ಹಾಗೂ ಟಿಯರ್-ಗ್ಯಾಸ್‌ನ್ನು ಬಳಸಿದರು ಎಂದು ಹಾಗೂ ಪರಿಸ್ಥಿತಿ ಸ್ವಲ್ಪ ಶಾಂತವಾದ ಮೇಲೆ ಆ ವಿದ್ಯಾರ್ಥಿಗಳನ್ನು ಪೋಲೀಸರೇ ಅವರ ಕ್ಯಾಂಪಸ್‌ಗೆ ಕರೆದು ಕೊಂಡು ಹೋಗಿ ಬಿಟ್ಟರೆಂದು ವರದಿ ಆಗಿದೆ, ಈ ರೀತಿ ಅವರನ್ನು ಅವರ ಕ್ಯಾಂಪಸ್‌ಗೆ ಕರೆದುಕೊಂಡು ಹೋಗಿ ಬಿಟ್ಟ ಮೇಲೆ ಆ ನಗರದಲ್ಲಿ ವಾತಾವರಣ ಶಾಂತವಾಗಬೇಕಾಗಿತ್ತು. ಸಿಕ್ ವಿದ್ಯಾರ್ಥಿಗಳ ಗಲಾಟೆಯನ್ನು ಕಂಟ್ರೋಲ್ ಮಾಡಿದ ಮೇಲೆ ಮತ್ತು ಅವರು ತಮ್ಮ ಕ್ಯಾಂಪಸ್‌ಗೆ ಹೋದ ಮೇಲೆ ಪುನಃ ಗಲಾಟೆ ಆಗುವ ಸಂದರ್ಭವೇ ಇರಲಿಲ್ಲ, ಆದರೂ ಇದು ನಡೆದಿದೆ, ಇದಕ್ಕೆ ಕಾರಣವೆಂದರೆ, ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಬಂದಾಗ ಅಲ್ಲಿನ ಎಸ್.ಪಿ. ಅವರ ಕೈಗೆ ಯಾರೋ ಕಟ್ಟಿಗೆಯಿಂದ ಪೆಟ್ಟು ಕೊಟ್ಟರೆಂದು, ಇದೇ ಕಾರಣದಿಂದ ಆ ಎಸ್.ಪಿ. ಅವರು ಮುಂದಿನ ಕ್ರಮ ತೆಗೆದುಕೊಳ್ಳದೆ ನಿರ್ಲಕ್ಷ್ಯತನ ತೋರಿಸಿದರೆಂಬ ಕಾರಣದಿಂದ ಅಲ್ಲಿ ಗಲಾಟೆ ಪ್ರಾರಂಭವಾಯಿತು ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅವರ ಒಂದು ನಿರ್ಲಕ್ಷ್ಯತನದಿಂದ ಅವರ ಒಂದು ನೆಗ್ಲಿಜೆನ್ಸ್‌ನಿಂದಾಗಿ ಈ ಗಲಾಟೆ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಡೆಯಿತು. ಈ ಬಗ್ಗೆ ಹೈಕೋರ್ಟಿನ ಜಡ್ಜ್ ಅವರ ಮೂಲಕ ನ್ಯಾಯಾಂಗ ತನಿಖೆ ನಡೆಸುವುದಾಗಿ ತಾವು ಈಗಾಗಲೇ ಹೇಳಿದ್ದೀರಿ. ಅದರ ಪ್ರಕಾರ ಅವರು ತನಿಖೆ ಮಾಡುತ್ತಾರೆ. ತನಿಖೆಯಲ್ಲಿ ಯಾರು ಯಾರು ಏನೇನು ತಪ್ಪುಗಳನ್ನು ಮಾಡಿದ್ದಾರೆಂಬ ವಿವರ ಮುಂದೆ ಬರಲಿ. ಆದರೆ ಮೇಲ್ನೋಟಕ್ಕೆ ನಮಗೆ ಏನು ಕಾಣುತ್ತದೆಂದರೆ, ಅಲ್ಲಿ ೧೫ನೇ ತಾರೀಖು ಆದ ಘಟನೆ ನೋಡಿದಾಗ, ಅಲ್ಲಿನ ಪೋಲೀಸ್ ಅಧಿಕಾರಿಗಳು ಮತ್ತು ಸರ್ಕಾರ ಇದನ್ನು ತಡೆಗಟ್ಟಲು ಎಚ್ಚರ ವಹಿಸಲಿಲ್ಲವೆಂದು, ಈ ಕಾರಣದಿಂದ ಈ ಒಂದು ಘಟನೆ ನಡೆಯಿತು ಎಂದು ಕಾಣುತ್ತದೆ. ಈ ಒಂದು ಗಲಾಟೆ ನಡೆದಾಗ ಆ ಸ್ಥಳದಲ್ಲಿಯೇ ಇದ್ದ ಶಾಸಕರಾದ ಶ್ರೀ ಲೈಕುದ್ದೀನ್ ಅವರು ಲೋಕಸಭಾ ಸದಸ್ಯರಾದ ಶ್ರೀ ಸೂರ್ಯವಂಶಿ ಅವರು ಹಾಗೂ ಮಾಜಿ ಸದಸ್ಯರಾದ ಶ್ರೀ ವೀರಶೆಟ್ಟಿ ಕುಸನೂರ್ ಅವರು ಪೋಲೀಸ್ ಅಧಿಕಾರಿಗಳ ಜೊತೆ ಮಾತನಾಡಲು ಪ್ರಯತ್ನ ಮಾಡಿದ್ದಾರೆ. ಗಾಂಧಿಗಂಜ್, ಮೋತಿನಗರ್ ಹಾಗೂ ವಿದ್ಯಾ ನಗರ ಮುಂತಾದ ಕಡೆಗಳಲ್ಲಿ ಬಹಳಷ್ಟು ಗಲಾಟೆ ನಡೆದಿರುವ ಕಾರಣ ಹೆಚ್ಚಿನ ಪೋಲೀಸರನ್ನು ಕಳುಹಿಸಿ ಕೊಡಬೇಕು, ಇಲ್ಲದಿದ್ದರೆ ಪರಿಸ್ಥಿತಿ ಮತ್ತಷ್ಟು ವಿಕೋಪಕ್ಕೆ ಹೋಗುತ್ತದೆಂದು ತಿಳಿಸಿದರೂ ಸಹ ಅವರು ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಪೋಲೀಸರು ನಿಷ್ಕ್ರಿಯರಾದ ಕಾರಣ ಅಲ್ಲಿನ ಗೂಂಡಾಗಳು ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ಅಲ್ಲಿನ ಇಂಜಿನಿಯರಿಂಗ್ ಕಾಲೇಜ್ ವಿದ್ಯಾರ್ಥಿಗಳ ಮೇಲೆ ಕೈ ಮಾಡಿದರು ಮತ್ತು ಅನೇಕ ಜನರ ಆಸ್ತಿಗಳನ್ನು ಹಾಳು ಮಾಡಿದರು. ಈ ಒಂದು ಗಲಾಟೆ ಮಧ್ಯಾಹ್ನ ೨ ರಿಂದ ರಾತ್ರಿ ೭ ಗಂಟೆಯವರೆಗೆ ನಡೆದಿದೆ. ೬ ಗಂಟೆಯ ಸಮಯದಲ್ಲಿ ಡಿ.ಐ.ಜಿ. ಅವರು ಗುಲ್ಬರ್ಗದಿಂದ ಬರುತ್ತಾರೆ. ಈ ಮಧ್ಯೆ ಅಲ್ಲಿನ ಶಾಸಕರು ಮತ್ತು ಲೋಕಸಭಾ ಸದಸ್ಯರು ಮುಖ್ಯಮಂತ್ರಿಗಳ ಜೊತೆ ಮಾತನಾಡಲು ಪ್ರಯತ್ನ ಮಾಡಿದ್ದಾರೆ. ಆದರೆ ಆ ಸಮಯದಲ್ಲಿ ಮುಖ್ಯಮಂತ್ರಿಗಳು ಯಾವುದೋ ಮೀಟಿಂಗ್‌ನಲ್ಲಿದ್ದ ಕಾರಣ ಅವರ ಜೊತೆ ನೇರವಾಗಿ ಮಾತನಾಡಲು ಅವರಿಗೆ ಸಾಧ್ಯವಾಗಲಿಲ್ಲ. ಹೀಗೆ ಅವರಿಗೆ ಪೋಲೀಸ್ ಅಧಿಕಾರಿಗಳು ಮತ್ತು ಮುಖ್ಯಮಂತ್ರಿಗಳು ಮಾತನಾಡಲು ಸಿಗದಿದ್ದಾಗ ಅವರು ಕೇಂದ್ರ ಸರ್ಕಾರದ ಗೃಹ ಕಾರ್ಯದರ್ಶಿ ಆದಂಥ ಶ್ರೀ ಸೋಮಯ್ಯನವರನ್ನು ಕಾಂಟ್ಯಾಕ್ಟ್ ಮಾಡಿದ್ದಾರೆ. ನಂತರ ಅವರುಗಳು ತಿರುಗಿ ಮುಖ್ಯಮಂತ್ರಿಗಳನ್ನು ಕಂಟ್ಯಾಕ್ಟ್ ಮಾಡಿದಾಗ ಮುಖ್ಯಮಂತ್ರಿಗಳು ನೇರವಾಗಿ ಅವರ ಜೊತೆಯಲ್ಲಿ ಮಾತನಾಡಿದರೆಂಬ ಸುದ್ದಿ ನಮಗೆ ಬಂದಿದೆ. ಒಂದು ದಿವಸ ಕಂಪ್ಲೀಟ್ ಆಗಿದ್ದರೂ ಇದರ ಕಡೆ ಯಾರು ಗಮನ ಕೊಟ್ಟಿಲ್ಲ. ಆದ್ದರಿಂದ ಇವತ್ತು ಇದರ ಸಂಪೂರ್ಣವಾದ ಜವಾಬ್ದಾರಿ ಪೋಲೀಸಿನವರದ್ದು, ಆಗಿದೆ. ಪೋಲಿಸಿನವರು ಮಾಡಿಲ್ಲವೆಂದರೆ ಇದು Administrative lapse ಆಗುತ್ತದೆ. ತಾವು ಈ ಬಗ್ಗೆ ಏನಾದರೂ ತಕ್ಷಣ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಇವತ್ತು ಅವರನ್ನು ವರ್ಗಾವಣೆ ಮಾಡುವುದಷ್ಟೇ ಅಲ್ಲ ಅವರನ್ನು ಸಸ್ಪೆಂಡ್‌ನಲ್ಲಿ ಇಟ್ಟು ಇನ್‌ಕ್ವೈರಿ ಮಾಡಬೇಕು. We demand that he should suspended immediately. ಯಾರಿಗೂ ದಾಕ್ಷಿಣ್ಯ ತೋರಿಸತಕ್ಕದ್ದಲ್ಲ. ಒಳ್ಳೆಯವರು ಕೆಟ್ಟವರು ಎಂಬ ಪ್ರಶ್ನೆ ಅಲ್ಲ. ಇದರಿಂದ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಮತ್ತು ಇಲ್ಲಿರತಕ್ಕ ಜನತೆಗೆ ಒಂದು ಮಸಿ ಬಳಿಯತಕ್ಕ ಕೆಲಸವನ್ನು ಈ ಡಿಪಾರ್ಟ್‌ಮೆಂಟ್ ಮಾಡಿದೆ. ಇದು ಸಣ್ಣದಾಗಿದ್ದರೂ ಸಹ ರಾಷ್ಟ್ರಮಟ್ಟದಲ್ಲಿ ನಾವು ತಲೆ ಎತ್ತಿ ಓಡಾಡುವ ರೀತಿಯಲ್ಲಿ ಇಲ್ಲ. ಯಾರು ತಪ್ಪು ಮಾಡಿದ್ದರೆ ಅವರ ಮೇಲೆ ಕೇಸ್ ಹಾಕಬೇಕಾಗಿತ್ತು. ಅವರಿಗೆ ಶಿಕ್ಷೆ ಕೊಡಬೇಕಾಗಿತ್ತು. ಅದನ್ನು ಬಿಟ್ಟು ಕಾನೂನನ್ನು ನಿಮ್ಮ ಕೈಯಲ್ಲಿ ತೆಗೆದುಕೊಂಡಂತಹ ಜನರಿಗೆ ಪ್ರೋತ್ಸಾಹ ನೀಡಿ, ೬-೭ ಗಂಟೆಯವರೆಗೆ ನೀವು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲವೆಂದರೆ ಇದರ ಹಿಂದೆ ಯಾರ ಕೈವಾಡ ಇದೆ ? ಯಾವ ಸಂಸ್ಥೆ ಇದನ್ನು ಮಾಡಿದೆ ಎಂದು ಸರ್ಕಾರಕ್ಕೆ ಗೊತ್ತಿರಲಿಲ್ಲವೇ ? ಅಲ್ಲಿ ಶಿಕ್ಕರು ಮೆಡಿಕಲ್ ಕಾಲೇಜನ್ನು ಕೇಳಿರುವುದು ನಿಮಗೆ ಗೊತ್ತಿದೆ. ಹಿಂದೆ ಆ ಸ್ಥಳದಲ್ಲಿರತಕ್ಕ ಅನೇಕ ಸಂಘ ಸಂಸ್ಥೆಗಳು ಇವರ ವಿರುದ್ಧ ಪ್ರೋಸೆಷನ್ ತೆಗೆದುಕೊಂಡು ಹೋಗಿದ್ದಾರೆಂಬುದು ನಿಮಗೆ ಗೊತ್ತಿದೆ. ಮೆಡಿಕಲ್ ಕಾಲೇಜನ್ನು ಕೊಡಬಾರದೆಂದು ಬೀದರ್ ಬಂದ್ ಆಗಿತ್ತು. ಇಂತಹ ಒಂದು ಪರಿಸ್ಥಿತಿಯಲ್ಲಿ ಪೋಲೀಸಿನವರು ಎಷ್ಟರಮಟ್ಟಿಗೆ ಎಚ್ಚರಿಕೆ ವಹಿಸಬೇಕಾಗಿತ್ತೋ ಅಷ್ಟರಮಟ್ಟಿಗೆ ವಹಿಸಲಿಲ್ಲ. ಇದರಲ್ಲಿ ಲ್ಯಾಪ್ಸ್ ಆಗಿದೆ. ಇವತ್ತಿನ ದಿವಸ ಸರ್ಕಾರದವರು ಅಂತಹವರಿಗೆ ಬೆಂಬಲ ಕೊಡುತ್ತಾ ಬಂದಿದ್ದಾರೆ. ೧೫ನೇ ತಾರೀಖು ೬ ಗಂಟೆಗೆ ಡಿ. ಐ. ಜಿ. ಯವರು ಅಲ್ಲಿಗೆ ಬಂದು ನೇರವಾಗಿ ಅವರು ಮುಖಂಡರಿಗೆ, ಶಾಸಕರಿಗೆ, ಎಂ. ಪಿ. ಯವರಿಗೆ ಭೇಟಿಯಾಗಲಿಲ್ಲ. ಯಾರ ವಿರುದ್ಧ ನಾವು ಹೋಗಬೇಕಾಗಿತ್ತೋ ಅವರೇ ಇವರನ್ನು ಭೇಟಿ ಆದರು. ಅವರು ನೇರವಾಗಿ ಎಸ್. ಪಿ. ಯವರ ಬಳಿಹೋಗಿ ಭೇಟಿಯಾದರು. ಎಸ್. ಪಿ. ಯವರು ಘಟನೆಯ ಬಗ್ಗೆ ಸವಿಸ್ತಾರವಾಗಿ ತಿಳಿಸಿ, ಇಲ್ಲಿ situation ಕಂಟ್ರೋಲ್ ಆಗಿದೆ. ತಾವು ಏನು ಗಾಬರಿ ಪಟ್ಟುಕೊಳ್ಳಬೇಡಿ ಎಂದು ಅವರಿಗೆ ಒಪ್ಪಿಸಿದರು. ಇವರು ಪಬ್ಲಿಕ್ ರೆಪ್ರೆಸೆಂಟ್‌ಟೀವ್‌ಗಳನ್ನು contact ಮಾಡಲಿಲ್ಲ. ಕೊನೆಗೆ ೧೬ನೇ ತಾರೀಖು ಕೂಡ ಇದೇ ರೀತಿ ಲೂಟಿ ಪ್ರಾರಂಭವಾಯಿತು. ಮೆಡಿಕಲ್ ಷಾಪ್, ಹೋಟಲ್‌ಗಳು, ಸೈಕಲುಗಳನ್ನು ಸ್ಕೂಟರುಗಳನ್ನು ಸುಟ್ಟು ಭಸ್ಮ

ಮಾಡುವಂತಹ ಕೆಲಸಗಳನ್ನು ಪ್ರಾರಂಭ ಮಾಡಿದರು. ೧೪ ಮತ್ತು ೧೫ ರಂದು ಆದಂತಹ ಘಟನೆಯನ್ನು ಕಂಟ್ರೋಲ್ ಮಾಡಲಿಕ್ಕೆ ಆಗಲಿಲ್ಲ. ಅಂದರೆ ಇದರ ಅರ್ಥ ಏನು ಅಂದರೆ police Intentionslly wanted to create this type of situation. ಒಂದು ವೇಳೆ ಸರ್ಕಾರದ ಮೇಲೆ ಪ್ರೀತಿ ಇದ್ದಿದ್ದರೆ ಕಾನೂನು ಪಾಲನೆ ಮಾಡಬೇಕೆಂದು ತಕ್ಷಣ ಜನರ ಪ್ರಾಪರ್ಟಿಯನ್ನು ರಕ್ಷಣೆ ಮಾಡಿ ಶಾಂತಿಯನ್ನು ಕಾಪಾಡತಕ್ಕ ಕೆಲಸ ಮಾಡಬೇಕಾಗಿತ್ತು. ಆದರೆ ಅದನ್ನು ಪೋಲೀಸರು ಮಾಡಿಲ್ಲ. ಇದರಲ್ಲಿ ಸಂಪೂರ್ಣವಾಗಿ ಪೋಲೀಸರು ವಿಫಲರಾಗಿದ್ದಾರೆ. ಸುಮಾರು ಮೂರು ದಿವಸ ಗಲಾಟೆ ಆಗಿದ್ದು ಇವರ ಗಮನಕ್ಕೆ ಬಂದಮೇಲೆ ಮುಖ್ಯಮಂತ್ರಿಗಳು, ನಮ್ಮ ನಾಯಕರು ಅಲ್ಲಿಗೆ ಹೋಗಿದ್ದರು, ಪ್ರಾಪರ್ಟಿಯನ್ನು ಸುಡುವಾಗ ಎಲ್ಲೆಲ್ಲಿ ಸಿಖ್ಖ್ ವಿದ್ಯಾರ್ಥಿಗಳು ಹಿಂದೂ ಜನರ ಮನೆಯಲ್ಲಿ ಇದ್ದಾರೆ ಅವರ ಪ್ರಾಪರ್ಟಿಯನ್ನು ಹೊರಗಡೆತಂದು ಅವರ ಮನೆಯನ್ನು ಸುಟ್ಟಿದ್ದಾರೆ. ಮುಸ್ಲಿಂ ಮತ್ತು ಕ್ರಿಶ್ಚಿಯನ್‌ರವರ ಮನೆಯಲ್ಲಿ ಸಿಖ್ಖರು ಇದ್ದರು, ಅಂತಹ ಪ್ರಾಪರ್ಟಿ ಮನೆಯನ್ನು ಸಹಿತ ಸುಟ್ಟಿದ್ದಾರೆ. ಈ ಕೆಲಸವನ್ನು ಮಾಡುವವರು ಯಾರು ಎಂಬುದನ್ನು ಪೋಲೀಸಿನವರಿಗೆ ಕಂಡು ಹಿಡಿಯಲಿಕ್ಕೆ ಆಗಲಿಲ್ಲ. ಏತಕ್ಕೆ ಪೋಲೀಸರು ಇಷ್ಟು ನಿಷ್ಕ್ರಿಯತೆಯನ್ನು ತೋರಿಸಿದರು ಎಂದರೆ ಅಲ್ಲಿ ಒಂದು ಜಾತಿಯ ಆಧಾರದಮೇಲೆ ಕೋಮು ಗಲಭೆಯನ್ನು ನಡೆಸಬೇಕೆಂದು ಕೆಲವು ರಾಜಕಾರಣಿಗಳಿರಬಹುದು. ಯಾರೇ ಇರಬಹುದು ಇದನ್ನು ಮಾಡಲು ಸಾಧ್ಯವಿರಬಹುದು. ಇದನ್ನು ಇವತ್ತು dispassionate ಆಗಿ ನೋಡಬೇಕು. ಇಲ್ಲದಿದ್ದರೆ ಅವರಿಗೆ ಬೆಂಬಲ ಕೊಡುವಂತಹ ಕೆಲಸ ಮಾಡಿದ್ದಾರೆ ಎನ್ನುವ ಸಂಶಯ ಬರುತ್ತದೆ. ಇವತ್ತು ಶಿವಸೇನೆ, ಆರ್. ಎಸ್. ಎಸ್. ರವರ ಹೆಸರು ಬಂದಿದೆ. ಎಲೆಕ್ಷನ್ ಬಂದರೆ ಇಂತಹ ಕೋಮುಗಲಭೆ ನಡೆಸಿದರೆ ಮುಂದೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಇವತ್ತು ಆರ್. ಎಸ್. ಎಸ್. ಕೈವಾಡ ಅಥವಾ ಶಿವಾಸೇವಾ ಕೈವಾಡ ಏನಾದರೂ ಇದೆಯೋ ಇಲ್ಲವೇ ಎಂಬುದನ್ನು ತಿಳಿಸಬೇಕು. ಒಂದುವೇಳೆ ಅವರಿಗೆ ಮನೆಗಳನ್ನು ಸುಡಬೇಕು ಎಂಬ ಉದ್ದೇಶವಿದ್ದಿದ್ದರೆ ಎಲ್ಲರ ಮನೆಗಳನ್ನೂ ಸುಡುತ್ತಿದ್ದರು. ಆದರೆ ಪಿಕ್ ಅಂಡ್ ಚೂಸ್ ಮಾಡಿ ಕೆಲವೇ ಜನರ ಮನೆಗಳನ್ನು ಸುಡಬೇಕು, ಕೆಲವೇ ಜನರ ಪ್ರಾಪರ್ಟಿಯನ್ನು ಸುಡಬೇಕು, ಕೆಲವು ಜನರ ಪ್ರಾಪರ್ಟಿಯನ್ನು ಉಳಿಸಬೇಕು ಎಂದು ಪ್ಲಾನ್ ಮಾಡಿದ್ದಾರೆ. ಈ ರೀತಿ ಮಾಡಿದ್ದರಿಂದ ಇದರಲ್ಲಿ ಸಂಪೂರ್ಣವಾಗಿ ಪೋಲೀಸರ ಕೈವಾಡ ಇದೆ. ಸರ್ಕಾರ ಪ್ರಾಂಪ್ಟ್ ಆಕ್ಷನ್ ತೆಗೆದುಕೊಂಡಿಲ್ಲ, ಇದರ ಬಗ್ಗೆ ಗಮನ ಹರಿಸಿಲ್ಲ. ಇವತ್ತಿನ ದಿವಸ ಇಂಟಲಿಜೆಂಟ್ ಏಜೆನ್ಸಿ ಇದ್ದರೂ, ಅವರಿಗೆ ಸಹಾಯಮಾಡತಕ್ಕವರು ಇದ್ದರೂ ಕೂಡ ಎಸ್. ಪಿ. ಯವರು, ಡಿ. ಐ. ಜಿ. ಯವರು ಇದ್ದರೂ ಇಷ್ಟೆಲ್ಲಾ ಇದ್ದರೂ ಕೂಡ ಸರ್ಕಾರ ಜನರ ಮಾನ, ಆಸ್ತಿಪಾಸ್ತಿಗಳನ್ನು ರಕ್ಷಣೆ ಮಾಡುವುದರಲ್ಲಿ ವಿಫಲವಾಗಿದೆಯೆಂದರೆ ಇದು ನಿಜವಾಗಲೂ ಇದು ರಾಜ್ಯಕ್ಕೆ ಕಳಂಕ ತರತಕ್ಕದ್ದು ಆಗಿದೆ. ಅಷ್ಟೇ ಅಲ್ಲ, ನಾವು ಹೊರಗಡೆ ಹೋದರೆ, ನಿಮ್ಮ ಕರ್ನಾಟಕದಲ್ಲಿ ಏನಾಯಿತು ಎಂದು ಜನ ಕೇಳುತ್ತಾರೆ. ನನಗೆ ಗೊತ್ತಿದೆ, ಈ ಸಮಸ್ಯೆ ಬಹಳ ಗಂಭೀರವಾಗಿದೆ. ಇದಕ್ಕೆ ಹೆಚ್ಚಿನ ಮಹತ್ವಕೊಟ್ಟು ಪ್ರೋಬ್ ಮಾಡುವು ದಲ್ಲ. ಆದರೆ ಪೋಲೀಸ್ ಅಧಿಕಾರಿಗಳು ಈ ರೀತಿಯಾಗಿ ಏನು ಕೆಲಸ ಮಾಡುತ್ತಾ ಇದ್ದಾರೆ ಅವರಿಗೆ ಇನ್ನೂ ರಕ್ಷಣೆ ಕೊಡತಕ್ಕದ್ದಲ್ಲ, ಅವರನ್ನು ಸಸ್ಪೆಂಡ್‌ಮಾಡಿಲ್ಲ. ನೀವು ಅವರನ್ನು ಸಸ್ಪೆನ್ಷನ್‌ನಲ್ಲಿಡಬೇಕು. ಯಾರ್ಯಾರು ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳಿದ್ದಾರೋ, ಅವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಇರಬಹುದು, ಯಾರೇ ಇರಬಹುದು, ಅಲ್ಲಿ ಶಾಂತಿಯನ್ನು ಕಾಪಾಡುವುದರಲ್ಲಿ ಯಾರು ವಿಫಲರಾಗಿದ್ದಾರೋ ಅವರ ಮೇಲೆ ನೀವು ತಕ್ಷಣ ಆಕ್ಷನ್ ತೆಗೆದುಕೊಳ್ಳಬೇಕು. ನನ್ನಲ್ಲಿ ಇನ್ನೂ ಅನೇಕ ವಿವರಗಳಿವೆ. ಅಲ್ಲಿನ ಸ್ಟೂಡೆಂಟ್ಸ್ ಮೇಲೂ ದೂರುಗಳಿವೆ. ಅವರು ಸಾಚಾ ಜನ ಇದ್ದಾರೆ ಎಂದು ನಾನು ಹೇಳುವುದಿಲ್ಲ. ವಿದ್ಯಾರ್ಥಿಗಳಿದ್ದಂಥ ಸ್ಥಳದಲ್ಲಿ ಗಲಾಟೆ ಇರುತ್ತದೆ ಎಂದು ಜನರು ಪ್ರಿಸಂಪ್‌ಷನ್ ಮಾಡುತ್ತಾರೆ. ಇದರಲ್ಲಿ ಸರ್ಕಾರದ ಕರ್ತವ್ಯವೇನು, ಪೋಲೀಸರ ಕರ್ತವ್ಯವೇನು ಎಂಬುದು ಮುಖ್ಯ. ನೀವು ಬೇರೆಯವರಿಗೆ ರಕ್ಷಣೆ ಕೊಡಬೇಕು. ಗಲಾಟೆ ಮಾಡತಕ್ಕವರ ಮೇಲೆ ಕೇಸ್ ಹಾಕಿ ಅವರನ್ನು ಹಾದಿಗೆ ತರಬೇಕು. ಅದನ್ನು ಬಿಟ್ಟು ಕಾನೂನನ್ನು ಕೈಗೆ ತೆಗೆದುಕೊಂಡು, ಸತತವಾಗಿ ೩ ದಿವಸ ಗೂಂಡಾಗಳಿಗೆ ಪೋಲೀಸರು ಸಪೋರ್ಟ್ ಮಾಡಿರಬೇಕಾದರೆ ನಿಜವಾಗಿಯೂ ಇದು ತಲೆತಗ್ಗಿಸತಕ್ಕಂಥ ಕೆಲಸ. ಇಂತಹ ಕೆಲಸ ಸರ್ಕಾರದ ವತಿಯಿಂದ ಆದಕಾರಣ ಇದರ ಬಗ್ಗೆ ಸಂಪೂರ್ಣವಾಗಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಇದರ ಹಿನ್ನೆಲೆಯಲ್ಲಿ ಏನೇ ಇದ್ದರೂ ಕೂಡ ಮುಖ್ಯವಾಗಿ ಸರ್ಕಾರದವರು ತಮ್ಮ ಆಡಳಿತದಲ್ಲಿ ಜನರಿಗೆ ರಕ್ಷಣೆ ಕೊಡಬೇಕು ಎನ್ನುವುದನ್ನು ಮರೆತು ಹೋಗಿದ್ದಾರೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಿ ಆಗ ವಿವರಗಳನ್ನು ಹೇಳುತ್ತೇನೆ. ಅಲ್ಲಿ ಯಾವರೀತಿ ಪೋಲೀಸರು ತಮ್ಮ ಕೆಲಸದ ಬಗ್ಗೆ ಫೇಲ್ ಆದರು, ಯಾವ ಮಿನಿಟ್‌ಗೆ ಎಸ್. ಪಿ. ಬಂದರು, ಡಿ. ಐ. ಜಿ. ಯವರು ಹೋದಮೇಲೆ ಏನಾಯಿತು ಎನ್ನುವುದನ್ನು ಹೇಳುತ್ತೇನೆ. ಈವನ್

ಪೀಸ್ ಕಮಿಟಿಯಲ್ಲೂ ಕೂಡ ಒಂದೇ ಸೆಕ್ಷನ್‌ನವರಿದ್ದಾರೆ, ಬೇರೆಯವರಿಗೆ ಅವಕಾಶ ಇಲ್ಲ. ಡಿ. ಐ. ಜಿ. ಯವರು ಹೋದಮೇಲೆ ಮಾತ್ರ ಕೆಲವರನ್ನು ಕರೆಸಿಕೊಂಡರು. ಕರ್ನಾಟಕದಲ್ಲಿ ಎಲ್ಲ ಭಾಷೆಯ ಜನಗಳಿಗೂ ರಕ್ಷಣೆ ಇದೆ ಎಂದು ಜನ ಫೀಲ್ ಮಾಡುತ್ತಿದ್ದರು. ಯಾವ ಭಾಷೆಯ ಜನ ಬಂದರೂ ಕೂಡ ಅವರಿಗೆ ರಕ್ಷಣೆ ಕೊಡತಕ್ಕ ಕೀರ್ತಿಯನ್ನು ಕರ್ನಾಟಕ ಸಂಪಾದಿಸಿದೆ. ಕರ್ನಾಟಕದಲ್ಲಿ ಒಳ್ಳೆಯ ಜನ ಇದ್ದಾರೆ, ಅಲ್ಲಿ ಯಾವ ಗಲಾಟೆ ಇಲ್ಲ, ಗದ್ದಲ ಇಲ್ಲ, ಪೀಸ್ ಲವ್ವಿಂಗ್ ಪೀಪಲ್ ಎನ್ನುವ ಹೆಸರನ್ನು ಪಡೆದುಕೊಂಡಿದ್ದೇವೆ. ಆದರೆ ಪೋಲೀಸ್ ಅಧಿಕಾರಿಗಳು ಇದಕ್ಕೆ ಕಳಂಕವನ್ನು ತಂದಿದ್ದಾರೆ, ಇವತ್ತು ಈ ಒಂದು ಕಳಂಕ ನಮಗೆ ಬಂದಿದೆ, ಇವತ್ತು ಗಲಾಟೆಯಾಗಿದೆ, ಬೇರೆಯವರಿಗೆ ತೊಂದರೆಯಾಗಿದೆ. ಇನ್ನೋಸೆಂಟ್ ಜನ ಇದರಲ್ಲಿ ಸತ್ತು ಹೋಗಿದ್ದಾರೆ, ಅವರ ಪ್ರಾಪರ್ಟಿ ಡೆಸ್ಟ್ರಾಯ್ ಆಗಿದೆ. ಒಂದು ಕಡೆ ಸಿಖ್ಖರದ್ದೂ ಹೋಗಿದೆ. ಯಾರೋ ಇನ್ನೋಸೆಂಟ್ ಜನ ಅವರಿಗೆ ರೆಂಟ್ ಮೇಲೆ ಮನೆ ಕೊಟ್ಟಿದ್ದರು, ಕೊಟ್ಟು ಇವತ್ತಿನ ದಿವಸ ಲಕ್ಷಗಟ್ಟಲೆ ಬೆಲೆಬಾಳುವ ಪ್ರಾಪರ್ಟಿಯನ್ನು ಹಾಳು ಮಾಡಿಕೊಂಡಿದ್ದಾರೆ. ಆದಕಾರಣ ಇದರ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಅಲ್ಲಿ ಅಧಿಕಾರಿಗಳನ್ನು ಸದ್ಯಕ್ಕೆ ಸುಮ್ಮನೆ ಟ್ರಾನ್ಸ್‌ಫರ್ ಮಾಡಿದ್ದೇವೆ ಎಂದು ಹೇಳಿದರೆ ಆಗುವುದಿಲ್ಲ, ತಕ್ಷಣ ಎಸ್. ಪಿ. ಯವರು, ಯಾರು ಸಂಬಂಧಪಟ್ಟ ಅಧಿಕಾರಿಗಳು ಇದ್ದಾರೆ, ಅವರು ಐ. ಪಿ. ಎಸ್. ಆಗಿರಲಿ, ಅವರನ್ನು ಸಸ್ಪೆಂಡ್ ಮಾಡುವುದಕ್ಕೆ ಪರ್ಮಿಷನ್‌ಬೇಕು ಎಂದಲ್ಲ, ಇಂಪಾರ್ಷಿಯಲ್ ಆಗಿ ಎನ್‌ಕ್ವೈರಿ ಆಗಬೇಕು ಅಂದರೆ ಅಲ್ಲಿ ಒಳ್ಳೆಯ ವಾತಾವರಣ ನಿರ್ಮಾಣವಾಗಬೇಕು ಎನ್ನುವುದಾದರೆ ಮೊಟ್ಟಮೊದಲನೆಯದಾಗಿ ಅಲ್ಲಿನ ಎಸ್. ಪಿ. ಯವರನ್ನು ಸಸ್ಪೆಂಡ್ ಮಾಡಬೇಕು. ಹಾಗೆ ಮಾಡಿದಾಗ ಮಾತ್ರ ವಾತಾವರಣ ತಿಳಿ ಆಗುತ್ತೆ.

೧.೦೦ ಪಿ. ಎಂ.

ಇಲ್ಲದೇ ಇದ್ದರೆ ಇದೇರೀತಿ ಭಾವನೆ ಜನರಲ್ಲಿ ಬರುತ್ತೆ. ಕಾನೂನು ಯಾರು ಕೈಗೆ ತೆಗೆದುಕೊಳ್ಳುತ್ತಾರೋ, ಅವರಿಗೆ ಸಪೋರ್ಟ್ ಮಾಡುತ್ತಾರೆನ್ನುವ ಅಭಿಪ್ರಾಯ ಬರುತ್ತದೆ. ತಾವು ಈ ಒಂದು ಕೆಲಸವನ್ನು ತಕ್ಷಣ ಮಾಡಬೇಕು. ಇದು ಬಹಳ ಗಂಭೀರವಾದ ವಿಷಯವಾದುದರಿಂದ ತಾವು ವಿವರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಸ್ವಾಮಿ, ಪಾಯಿಂಟ್ ಆಫ್ ಆರ್ಡರ್. ಸದನದ ಕಾರ್ಯಕಲಾಪಗಳು ಮತ್ತು ನಡವಳಿಕೆ ಸೆಕ್ಷನ್ ೧೬೨ರ ಪ್ರಕಾರ

> ''ನ್ಯಾಯಾಧಿಕರಣಗಳು, ಆಯೋಗಗಳು, ಇತ್ಯಾದಿಗಳ ಮುಂದೆ ಇರುವ ವಿಷಯಗಳು:— ಯಾವುದೇ ನ್ಯಾಯಿಕ ಅಥವಾ ಅರೆ ನ್ಯಾಯಿಕ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವ ಯಾವುದೇ ಶಾಸನಬದ್ಧ ನ್ಯಾಯಾಧಿಕರಣ ಅಥವಾ ಶಾಸನಬದ್ಧ ಪ್ರಾಧಿಕಾರದ ಮುಂದೆ ಅಥವಾ ಯಾವುದೇ ವಿಷಯದ ಬಗ್ಗೆ ವಿಚಾರಣೆ ನಡೆಸಲು ತನಿಖೆ ನಡೆಸಲು ನೇಮಕಗೊಂಡ, ಯಾವುದೇ ಆಯೋಗ ಅಥವಾ ತನಿಖಾ ನ್ಯಾಯಾಲಯದ ಮುಂದೆ ಬಾಕಿ ಇರುವ ವಿಷಯದ ಮೇಲೆ ಚರ್ಚೆ ನಡೆಸುವ ಪ್ರಸ್ತಾವವನ್ನು ಮಂಡಿಸಲು ಸಾಮಾನ್ಯವಾಗಿ ಅನುಮತಿಸತಕ್ಕುದಲ್ಲ'' ಎಂದು ಇದೆ. ಆದ್ದರಿಂದ.........

ಶ್ರೀ ಉಮರಬ್ಬ.—ನೇಮಕಗೊಂಡ ಅಂದರೆ ಯಾವತ್ತು ನೇಮಕ ಗೊಂಡಿದೆ.

ಶ್ರೀ ವೇದಾಂತ ಹೆಮ್ಮಿಗೆ.—ಇವತ್ತು ಈ ಒಂದು ನ್ಯಾಯಾಂಗ ತನಿಖೆಗೆ ಈ ಪ್ರಕರಣವನ್ನು ಸರ್ಕಾರ ರೆಫರ್ ಮಾಡಿದೆ. ಇದನ್ನು ನ್ಯಾಯಾಂಗ ತನಿಖೆಗೆ ರೆಫರ್ ಮಾಡಿದಮೇಲೆ, ನ್ಯಾಯಾಂಗ ಸಮಿತಿ ಅಪರಾಧಿಗಳು ಯಾರು, ನಿರಪರಾಧಿಗಳು ಯಾರು ಎನ್ನುವುದನ್ನು ತೀರ್ಮಾನ ಮಾಡುತ್ತೆ. ಈ ಒಂದು ಅಧಿಕಾರ ಅದಕ್ಕೆ ಇದೆ. ವಿಚಾರಣೆ ಮಾಡುವುದಕ್ಕೆ ಮೊದಲೇ ಈ ಸದನದಲ್ಲಿ ಇಂತಿಂಥವರು ಅಪರಾಧಿಗಳು, ಹೀಗೆ ಮಾಡಿದ್ದಾರೆಂದು ಮಾತನಾಡುವುದಾದರೆ, ನ್ಯಾಯಾಂಗ ತನಿಖೆಯನ್ನು ಮಾಡತಕ್ಕ ಅವಶ್ಯಕತೆ ಏನಿದೆ ? ಹೀಗೆ ಮಾತನಾಡುವುದರಿಂದ ಸಮಿತಿಗೆ ಮತ್ತು ಸಮಿತಿಯ ಕಾರ್ಯಕಲಾಪಗಳಿಗೆ ಧಕ್ಕೆಯಾಗುತ್ತದೆ. ನ್ಯಾಯಾಂಗ ಸಮಿತಿಗೆ ತನ್ನದೇ ಆದಂತ ಪೂರ್ಣವಾದ ಸ್ವಾತಂತ್ರ್ಯ ಇದೆ. ವೈಯಕ್ತಿಕವಾಗಿ ಒಬ್ಬರ ಮೇಲೆ ಆಪಾದನೆ ಮಾಡುವುದು ಸರಿಯಲ್ಲ. ಮುಂಚಿತವಾಗಿ ಇಲ್ಲಿ ಚರ್ಚೆ ಮಾಡುವುದರಿಂದ ವಿಚಾರಣೆಗೆ ಅಡ್ಡ ಬಂದಂತಾಗುತ್ತದೆ, ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬಾರದೆಂದು ನಾನು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಸನ್ಮಾನ್ಯ ಸದಸ್ಯರಾದ ಹೆಮ್ಮಿಗೆಯವರು ಕ್ರಿಯಾಲೋಪ ಏನು ಎತ್ತಿದ್ದಾರೆ. ಅದು ಸರಿಯಲ್ಲ. ನಾವು ತಿಳಿದುಕೊಂಡ ಪ್ರಕಾರ, ಹೈಕೋರ್ಟು ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆ ಮಾಡಿಸುತ್ತೇವೆಂದು ಸರ್ಕಾರದವರು ಘೋಷಣೆ ಮಾಡಿದ್ದಾರೆ. ಆದರೆ, ಇವತ್ತಿಗೂ ಈ ಬಗ್ಗೆ ನೋಟಿಫಿಕೇಷನ್ ಹೊರಟಿಲ್ಲ. ಯಾವ ಜಡ್ಜ್, ಟರ್ಮ್ಸ್ ಅಂಡ್ ರೆಫರೆನ್ಸ್ ಏನು ಎನ್ನುವುದರ ಬಗ್ಗೆ ಇಲ್ಲಿಯವರೆಗೆ ಸರ್ಕಾರದಿಂದ ಆದೇಶ ಹೊರಟಿಲ್ಲ. ಮಾನ್ಯ ಹೆಮ್ಮಿಗೆಯವರು ಪತ್ರಿಕೆಯನ್ನು ಓದಿ ಹೇಳುತ್ತಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆ ಮಾಡಿಸಲಾಗುವುದೆಂದು ಹೇಳಿಕೆ ಕೊಟ್ಟ ದಿವಸವೇ ಮುಖ್ಯ ನ್ಯಾಯಾದೀಶರಿಗೆ ಪತ್ರ ಬರೆದಿದ್ದೇನೆ. ಅವರಿಂದ ಹೆಸರು ಬಂದ ತಕ್ಷಣ ಆಜ್ಞೆ ಹೊರಡಿಸಲಾಗುವುದು. ಇವತ್ತು ಬೀದರ್‌ನಲ್ಲಿ ಏನೊಂದು ಗದ್ದಲದ ವಾತಾವರಣ ಇದೆ, ಅಲ್ಲಿರತಕ್ಕ ಎಲ್ಲ ಧರ್ಮಗಳ ನಡುವೆ ವಿಶ್ವಾಸ ಮೂಡಿ, ಶಾಂತಿ ನೆಲೆಸಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು, ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಹೇಳುವುದು ಸೂಕ್ತವಾದುದು. ವಿವರಕ್ಕೆ ಹೋದರೆ ಅಲ್ಲಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಸರ್ಕಾರದ ಅದಕ್ಷತೆ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅಲ್ಲಿ ಪರಿಸ್ಥಿತಿ ಏನಿದೆ ಎಂಬುದನ್ನು ಹೇಳುವಾಗ ಕೆಲವು ಸಂಸ್ಥೆಗಳ ಹೆಸರುಗಳನ್ನು ಕೂಡ ಹೇಳಿದ್ದಾರೆ. ಪತ್ರಿಕೆಯಲ್ಲಿ ಬಂದದ್ದನ್ನೆಲ್ಲಾ ಓದಿದರೆ ಸಿಖ್ ಜನಾಂಗದವರು ಎಲ್ಲಾ ಪಕ್ಷದವರ ಮೇಲೆ ಆಪಾದನೆ ಮಾಡಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಎಲ್ಲಾ ಪಕ್ಷದವರು ಎಂದು ಹೇಳಬೇಡಿ.

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.—ಎಲ್ಲಾ ರಾಜಕೀಯ ಪಕ್ಷಗಳಲ್ಲ, ಕೆಲವು ರಾಜಕೀಯ ಪಕ್ಷಗಳ ಸದಸ್ಯರುಗಳ ಮೇಲೆ ಆಪಾದನೆ ಮಾಡಿರುವುದು ಪತ್ರಿಕೆಯಲ್ಲಿ ಬಂದಿದೆ. ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋದರೆ ನಮ್ಮ ದೃಷ್ಟಿಯಲ್ಲಿ ಸರಿಯಾಗುವುದಿಲ್ಲ, ಏಕೆಂದರೆ, ವಿಚಾರಣೆ ಆಗದೇ ಅವನ್ನೆಲ್ಲಾ ಮಾತನಾಡಬಾರದು. ಆ ವ್ಯಕ್ತಿಗಳು ಯಾರು, ಯಾವ ಸಮಾಜಕ್ಕೆ ಸಂಬಂಧಪಟ್ಟವರು ಎನ್ನುವುದೆಲ್ಲಾ ಎನ್‌ಕ್ವಯಿರಿಯಲ್ಲಿ ಬರುತ್ತದೆ. ತಾವು ಘಟನೆಯ ಬಗ್ಗೆ, ಅಡ್ಮಿನಿಸ್ಟ್ರೇಟೀವ್ ಲ್ಯಾಪ್ಸ್ ಬಗ್ಗೆ ಹೇಳಿ, ನಾನು ಅದನ್ನು ಸ್ವಾಗತ ಮಾಡುತ್ತೇನೆ. ಅದನ್ನು ಬಿಟ್ಟು ಇದರ ಹಿಂದೆ ಯಾರು ಇದ್ದಾರೆ ಎನ್ನುವ ಊಹೆಗೆ ಹೋಗುವುದು ಬೇಡ. ಆದ್ದರಿಂದ, ದಯವಿಟ್ಟು ಒಂದು ಇತಿಮಿತಿಯಲ್ಲಿ ಮಾತನಾಡುವುದು ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಹೆಮ್ಮಿಗೆಯವರಿಗೆ ಮಾನ್ಯ ಮುಖ್ಯ ಮಂತ್ರಿಯವರೇ ಉತ್ತರ ಕೊಟ್ಟಿರುವುದರಿಂದ ನಾವು ಪ್ರತ್ಯೇಕವಾಗಿ ಉತ್ತರ ಕೊಡಬೇಕಾದ್ದು ಇಲ್ಲ. ಆದ್ದರಿಂದ ಪಾಯಿಂಟ್ ಆಫ್ ಆರ್ಡರ್ ಇದರಲ್ಲಿ ಬರುವುದಿಲ್ಲ.

ಅಧ್ಯಕ್ಷರು.—ಈಗ ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಡೀಟೈಲ್ ಆದ ಚರ್ಚೆಯನ್ನು ತೆಗೆದುಕೊಂಡಿಲ್ಲ. ಈಗ ಜುಡಿಷಿಯಲ್ ಎನ್‌ಕ್ವಯಿರಿ ಬಗ್ಗೆ ಜಡ್ಜ್ ನೇಮಕ ಆಗಿಲ್ಲ, ರೆಫರೆನ್ಸ್ ಕೂಡ ಆಗಿಲ್ಲ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಹೆಮ್ಮಿಗೆಯವರ ಪಾಯಿಂಟ್ ಆಫ್ ಆರ್ಡರ್ ಏನಿದೆ ಅದನ್ನು ತಳ್ಳಿಹಾಕಿದ್ದೇನೆ ಮತ್ತು ಪ್ರಿಲಿಮಿನರಿಯಾಗಿ ಸಬ್‌ಮಿಷನ್ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ನಾಯಕಿಯವರು ಏನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ ಹಾಗೂ ಇದರ ಬಗ್ಗೆ ಇಲ್ಲಿ ಪ್ರಸ್ತಾಪವಾದಂಥ ವಿಚಾರ ಏನಿದೆ, ಇದು ಅತ್ಯಂತ ಸೂಕ್ಷ್ಮವಾದಂಥ ವಿಚಾರ. ಅದಕ್ಕೋಸ್ಕರವಾಗಿ ನಮ್ಮ ನಾಯಕಿಯವರು ಮತ್ತು ಉಪನಾಯಕರು ಮಾತನಾಡುವಾಗ ಅದಕ್ಕೆ ಒಂದು ಸಂಯಮದ ಒಂದು ಕಟ್ಟೆ ಇಟ್ಟುಕೊಂಡು ಮಾತನಾಡಿದರು. ಸನ್ಮಾನ್ಯ ಮುಖ್ಯಮಂತ್ರಿಗಳು ಈಗ ಎದ್ದು ನಿಂತು ನ್ಯಾಯಾಂಗ ವಿಚಾರಣೆಯ ಬಗ್ಗೆ ಇವೊತ್ತು ಅಥವಾ ನಾಳೆ ಆದೇಶ ಹೊರಡಿಸುತ್ತೇವೆಂದು ಹೇಳಿದರು. ಜೊತೆಗೆ ಇದರ ಹಿಂದೆ ಯಾವ ಶಕ್ತಿಗಳು, ದುಷ್ಟಶಕ್ತಿಗಳು ಇದೆ, ಯಾರ ಕೈವಾಡ ಇದೆ, ಯಾವ ಪಟ್ಟಭದ್ರಹಿತಾಸಕ್ತಿಗಳು ಇವೆ ಅದರ ಬಗ್ಗೆ ವಿವರಕ್ಕೆ ಹೋಗಬಾರದೆಂದು ಸಲಹೆ ಕೊಟ್ಟಿದ್ದಾರೆ, ಅದನ್ನು ನಾವು ಸಂಪೂರ್ಣ

ವಾಗಿ ಒಪ್ಪುತ್ತೇವೆ. ಈ ಮಧ್ಯೆ ಸರ್ಕಾರಕ್ಕೆ ಒಂದು ಸೂಚನೆಯನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಇಂತಹ ಒಂದು ಗಂಭೀರವಾದಂಥ ವಿಚಾರ, ರಾಷ್ಟ್ರದ ಗಮನವನ್ನು ಸೆಳೆದಂಥ ವಿಚಾರದ ಬಗ್ಗೆ ನಾವು ಇಲ್ಲಿ ನಿಲುವಳಿ ಸೂಚನೆ ಕೊಟ್ಟಿರುವಾಗ ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಜವಾಬ್ದಾರಿಯನ್ನರಿತು ಬಹುಶಃ ನಮ್ಮ ನಾಯಕಿಯರ ಮತ್ತು ವಿರೋಧಪಕ್ಷದ ಮುಖಂಡರ ಜೊತೆ ಇಲ್ಲಿ ಪ್ರಸ್ತಾವನೆ ಆಗುವ ಮೊದಲು ಮಾತನಾಡಬೇಕಾಗಿತ್ತು.

ಶ್ರೀ ಜೆ.ಹೆಚ್. ಪಟೇಲ್.—ಬೆಳಿಗ್ಗೆ ಅವರ ಹತ್ತಿರ ಮಾತನಾಡಿದ್ದಾರೆ.

SRI M. VEERAPPA MOILY.—Treasury benches should have been more alert and more vigilant. You should take the House into confidence on issues which are sought to be raised here.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಇವತ್ತು ಬೆಳಿಗ್ಗೆ ಎಲ್ಲ ವಿರೋಧಪಕ್ಷದ ನಾಯಕರನ್ನೂ ಕರೆದು ಇದರ ಬಗ್ಗೆ ಚರ್ಚೆ ಮಾಡಿದ್ದೇನೆ. ಯಾವರೀತಿ ಇದನ್ನು ಚರ್ಚೆ ಮಾಡಬೇಕೆಂಬ ಬಗ್ಗೆ ಅವರ ಜೊತೆ ವಿವರವಾಗಿ ಚರ್ಚೆಮಾಡಿದ್ದೇನೆ. ತಮ್ಮ ನಾಯಿಕೆಯವರು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಮೆನ್‌ಷನ್ ಮಾಡಬಹುದು, ಅದಕ್ಕೆ ನಾನು ಕೊನೆಯಲ್ಲಿ ಅವಕಾಶ ಕೊಡುತ್ತೇನೆಂದು ಮೇಲ್ಮನೆಯ ಮತ್ತು ಈ ಮನೆಯ ವಿರೋಧಪಕ್ಷದ ನಾಯಕರನ್ನು ಕರೆದು ಆಪ್ತಾಲೋಚನೆ ಮಾಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಬಹಳ ಒಳ್ಳೆಯದು, ಈ ನಿಲುವಳಿ ಸೂಚನೆಯ ಬಗ್ಗೆ ಪ್ರಿಲಿಮಿನರಿ ಸಬ್ಮಿಷನ್‌ಗೆ ಅಧ್ಯಕ್ಷರು ಅಪ್ಪಣೆಯನ್ನು ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳು ತಮಗೆ ಹಗುರ ಮಾಡಿದ್ದಾರೆ. ಅದೇನೆಂದರೆ, ಇದರ ಹಿಂದೆ ಏನು ಶಕ್ತಿ ಇದೆ ಅದರ ಬಗ್ಗೆ ಚರ್ಚೆ ಮಾಡುವುದು ಬೇಡ, ಆದರೆ ಆಡಳಿತದಲ್ಲಿ ಏನು ಲೋಪವಾಗಿದೆ, ಸರ್ಕಾರದ ವಿಫಲತೆ ಏನಾಗಿದೆ ಎಂಬುದನ್ನು ಚರ್ಚೆ ಮಾಡಬೇಕೆಂದು ಹೇಳಿದ್ದಾರೆ. ನಾವೂ ಕೂಡ ಇದರ ಬಗ್ಗೆಯೇ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಅವರೂ ಒಪ್ಪಿದ್ದಾರೆ. ಆದ್ದರಿಂದ ತಾವು ಇದರ ಬಗ್ಗೆ ಅವಕಾಶವನ್ನು ಕೊಡಿ. ಪ್ರಿಲಿಮಿನರಿ ಸಬ್ಮಿಷನ್‌ನ್ನು ಏತಕ್ಕೆ ಮಾಡಬೇಕು? ತಾವು ಪ್ರಿಲಿಮಿನರಿ ಸಬ್ಮಿಷನ್‌ಗೆ ಅವಕಾಶವನ್ನು ಏನೂ ಕೊಡಬೇಕಾಗಿಲ್ಲ. ನೇರವಾಗಿ ನಾವು ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ಡಿಸ್ಕಷನ್‌ಗೆ ಹೋಗಬಹುದು. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಅಡ್ಮಿನಿಸ್ಟ್ರೇಟಿವ್ ಲ್ಯಾಪ್ಸ್‌ಸ್ ಬಗ್ಗೆ, ಮತ್ತು ಬೀದರ್‌ನಲ್ಲಿ ಏನು ಘಟನೆ ನಡೆದಿದೆ ಅದರ ಬಗ್ಗೆ ಚರ್ಚೆ ಮಾಡೋಣ. ತಾವು ಅವಕಾಶ ಕೊಡಿ. Straight way we can enter into discussion on the Adjournment Motion.

ಶ್ರೀ ಎಸ್.ಆರ್. ಬೊಮ್ಮಾಯಿ.—ಇದರ ಬಗ್ಗೆ ಮಾತನಾಡಿ ಎಂದು ಹೇಳಿದ್ದೇನೆ,

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಹೇಳಿದ್ದೀರಿ. ಆದ್ದರಿಂದ ನಾನು ಹೇಳುತ್ತಿದ್ದೇನೆ. ಹಾಗಾದರೆ ನಾವು ಡಿಸ್ಕಸ್ ಮಾಡೋಣ. ಪ್ರಿಲಿಮಿನರಿ ಸಬ್ಮಿಷನ್ ಏತಕ್ಕೆ ಬೇಕು? ನಿಲುವಳಿ ಸೂಚನೆಯ ವಿಷಯ ಸ್ಪಷ್ಟವಾಗಿದೆ. ಅಡ್ಮಿನಿಸ್ಟ್ರೇಟಿವ್ ಲ್ಯಾಪ್ಸ್‌ಸ್ ಬಗ್ಗೆ ತಾವು ವಿವರವನ್ನು ಕೊಡಿ. ನಾವು ಇಲ್ಲಿ ಪ್ರಸ್ತಾಪ ಮಾಡುವ ಉದ್ದೇಶವೇನೆಂದರೆ, ಅಡ್ಮಿನಿಸ್ಟ್ರೇಟಿವ್ ಲ್ಯಾಪ್ಸಸ್ ಬಗ್ಗೆ ಚರ್ಚೆ ಮಾಡಿದರೆ This may enable the Government to frame the point of reference to the Judicial Commission. ಜುಡಿಷಿಯಲ್ ಕಮಿಷನ್‌ಗೆ ಇದರಿಂದ ಹೆಚ್ಚಿಗೆ ಪ್ರಯೋಜನವಾಗಬಹುದೆಂದು ನಮ್ಮ ಉದ್ದೇಶವಿದೆ. ಇದನ್ನು ತಾವು ಅರ್ಥಮಾಡಿಕೊಳ್ಳ ಬೇಕು. ಈ ದೃಷ್ಟಿಯಿಂದ ಪ್ರಾಸ್ತಾವಿಕವಾಗಿ ಪ್ರಸ್ತಾಪ ಮಾಡಿದರೆ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ. ಇದು ತಮಗೂ ಗೊತ್ತಿದೆ. ಅನೇಕ ಜ್ಯುಡಿಷಿಯಲ್ ಎನ್‌ಕ್ವೈರಿಗೆ ಅಪಾಯಿಂಟ್ ಮಾಡಿದಾಗ ರೆಫರೆನ್ಸ್ ಮಾಡಿದ ಇಷ್ಯೂ ಮೇಲೆಯೇ ನ್ಯಾಯಾಂಗ ವಿಚಾರಣೆ ಇನ್‌ಫ್ರಕ್ಟ್ಯುಯಸ್ ಆಗಿದೆ. ಒಳ್ಳೆಯ ದೃಷ್ಟಿಯಿಂದ ಸತ್ಯ ಹೊರಗೆ ಬರಬೇಕು. ಸರ್ಕಾರದ ಬಗ್ಗೆ ಸಾರ್ವಜನಿಕರಲ್ಲಿ ಅಥವಾ ಯಾವುದೇ ಒಂದು ಘಟನೆಯ ಬಗ್ಗೆ ಒಂದುರೀತಿಯ ವಿಶ್ವಾಸ ಒಡಮೂಡಿ ಬರಬೇಕೆಂದು ತಾವು ನ್ಯಾಯಾಂಗ ವಿಚಾರಣೆಯನ್ನು ಮಾಡುತ್ತೀರಿ. ಆದರೆ ಅದರ ಉದ್ದೇಶ ಸಫಲವಾಗುವುದಿಲ್ಲ. ಇದರ ಬಗ್ಗೆ ವಿವರವಾದ ಚರ್ಚೆಗೆ ತಾವು ಒಪ್ಪಿಕೊಂಡಿದ್ದೀರಿ. ಆದರೆ ಈಗ ಸ್ವಲ್ಪ ಮಟ್ಟಿಗೆ ಟ್ವಿಸ್ಟ್ ಮಾಡುತ್ತಿದ್ದೀರಿ. ತಾವು ಪ್ರಿಲಿಮಿನರಿ ಎಂದು ಹೇಳಿ narrow word interpretation ಅನ್ನು ತಮ್ಮ ಹೇಳಿಕೆಯಲ್ಲಿ ಕೊಡುತ್ತಿದ್ದೀರಿ.

ನಾನು ತಮಗೆ ಹೇಳುವುದೇನೆಂದರೆ, ಇದರ ಬಗ್ಗೆ ಚರ್ಚೆಯಾದರೆ ಎಲ್ಲ ಮಾನ್ಯ ಸದಸ್ಯರೂ ಇದರಲ್ಲಿ ಭಾಗವಹಿಸಬಹುದು. ಇದರಿಂದ ಸರ್ಕಾರಕ್ಕೂ ಕೂಡ ಸಹಾಯವಾಗುತ್ತದೆ. ಇವತ್ತು ಏನು ಘಟನೆ ಬೀದರ್‌ನಲ್ಲಿ ನಡೆದಿದೆ ಇದರಿಂದ ಕರ್ನಾಟಕದ ಒಂದು ಒಳ್ಳೆಯ ಹೆಸರಿಗೆ ಕಳಂಕ ಬಂದಿದೆ. The picture of Karnataka in Bidar Incident has been pointed in a very wrong way. It may require many more months or perhaps more aggressive media information to eradicate the tarnished name of Karnataka ತಾವು ದೆಹಲಿಯಲ್ಲಿದ್ದಿರಿ. ಅಲ್ಲಿ ಯಾವರೀತಿಯ ಅಭಿಪ್ರಾಯ ಒಡಮೂಡಿತೆಂದರೆ The Karnataka has been very wrongly painted. ಅನೇಕ ಮಿಥ್ಯ ಇದೆ. ಏನು ಅಪಪ್ರಚಾರ ಇದೆ, ಅಥವಾ ಮಿಸ್ ಇನ್‌ಫರ್ಮೇಷನ್ ಏನು ಹರಡಿದೆ ಅದರಲ್ಲಿ ಬಹಳಷ್ಟು ಮಿಥ್ಯ ಇದೆ. A lot of mis-information has been published. The Karnataka has been very wrongly painted. ಇವತ್ತು ಇದನ್ನು ನ್ಯಾಯಾಂಗ ವಿಚಾರಣೆಗೋಸ್ಕರ ನ್ಯಾಯಾಧೀಶರಿಗೆ ಕೊಟ್ಟು ೨ ವರ್ಷದಮೇಲೆ ಅದರ ವರದಿ ಬಂದರೆ ಆಗ ನೀವು ಈ ಕರ್ನಾಟಕದ ಹೆಸರಿಗೆ ಏನು ಕಳಂಕ ಬಂದಿದೆ ಅದನ್ನು ಎಷ್ಟೇ ಪ್ರಯತ್ನ ಪಟ್ಟರೂ ಹೊಡೆದೋಡಿಸುವುದಕ್ಕೆ ಸಾಧ್ಯವಿಲ್ಲ.

ಬಹಳ ಉನ್ನತವಾದ ಈ ಒಂದು ಸದನದ ವೇದಿಕೆ ಇವತ್ತು ಇದೆ. ಅದರ ಮೂಲಕ ನಾವು ಚರ್ಚೆಯನ್ನು ಮಾಡಬೇಕಾಗಿದೆ. ಇಡೀ ರಾಷ್ಟ್ರಕ್ಕೆ ಅನ್ವಯವಾಗತಕ್ಕ ಒಂದುರೀತಿಯಾದ ಮಹತ್ತರವಾದ ಘಟನೆ ನಡೆದಿದೆ. ಅಮಾನುಶವಾಗಿ ಆಗಿರತಕ್ಕಂಥ ಇಂಥ ಒಂದು ಘಟನೆಯನ್ನು ನಾವು ಸಂಪೂರ್ಣವಾಗಿ ಖಂಡಿಸುತ್ತೇವೆ. ಮತ್ತು ಇಂಥ ಘಟನೆ ಮುಂದೆ ಕರ್ನಾಟಕದಲ್ಲಿ ಆಗದಿರಲಿ ಎಂದು ಹೇಳುತ್ತೇವೆ. ನಮ್ಮ ಕರ್ನಾಟಕದ ಜನತೆಯನ್ನು ನೋಡಿದಾಗ ಅವರು ಯಾವಾಗಲು ಶಾಂತಿ ಸ್ವಭಾವ ಹೊಂದಿರತಕ್ಕಂಥವರಾಗಿದ್ದಾರೆ. ರಾಷ್ಟ್ರದ ಭಾವೈಕ್ಯತೆಯ ದೃಷ್ಟಿಯಲ್ಲಿ, ಕೋಮು ಸಾಮರಸ್ಯದಲ್ಲಿ ಇಡೀ ದೇಶಕ್ಕೆ ಆದರ್ಶತೆಯನ್ನು ತೋರಿಸಿ ಕೊಟ್ಟಿರತಕ್ಕಂಥ ಇತಿಹಾಸ ಪರಂಪರೆಯನ್ನು ಕರ್ನಾಟಕದ ಜನತೆ ಹೊಂದಿರುತ್ತಾರೆ. ಈ ಘಟನೆಯ ಬಗ್ಗೆ ನ್ಯಾಯಾಂಗ ವಿಚಾರಣೆ ಮಾಡುತ್ತೇವೆಂದು ಹೇಳಿದ ಕೂಡಲೆ This message cannot be conveyed to the whole nation. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಏತಕ್ಕೆಂದರೆ ಇದನ್ನು ಪ್ರಿಲಿಮಿನರಿ ಸಬ್‌ಮಿಷನ್ ಎಂದು ತಾಂತ್ರಿಕವಾಗಿ ಸರ್ಕಾರ ತೆಗೆದುಕೊಂಡು ಕರ್ನಾಟಕದ ಒಂದು ಹೆಸರನ್ನು, ಸರ್ಕಾರದ ಹೆಸರನ್ನು ಉಳಿಸತಕ್ಕಂಥ ದೃಷ್ಟಿಯಲ್ಲಿ ತಾವು ಕೆಲಸ ಮಾಡಬೇಕಾಗಿದೆ. ಈ ಸಮಸ್ಯೆ ತಕ್ಷಣ ಪರಿಹಾರವಾಗುವಂಥದಲ್ಲವೆಂದು ತಾವು ಅರ್ಥ ಮಾಡಿಕೊಳ್ಳಬೇಕು. ತಾವು ತಾಂತ್ರಿಕವಾಗಿ ಜುಡಿಷಿಯಲ್ ಕಮಿಷನ್ ನೇಮಕ ಮಾಡುತ್ತೇವೆಂದು ಹೇಳಿ ಕೈಯನ್ನು ತೊಳೆದುಕೊಳ್ಳತಕ್ಕಂಥ ವಿಚಾರ ಇದಲ್ಲ. ಇದರ ಬಗ್ಗೆ ಚರ್ಚೆಗೆ ಅವಕಾಶವನ್ನು ತಾವು ಮಾಡಿ ಕೊಡಬೇಕು. ಚರ್ಚೆ ಇತಿಮಿತಿಯಲ್ಲಿಯೇ ನಡೆದು ಕೋಮುವಾರು ಸಾಮರಸ್ಯ ಹೆಚ್ಚಿಸಬೇಕು ಎನ್ನುವ ಕಳಕಳಿ ಇಲ್ಲಿರತಕ್ಕಂಥ ಎಲ್ಲ ಸದಸ್ಯರಿಗೂ ಇದೆ. ಇದರ ಬಗ್ಗೆ ಯಾರಿಗೂ ಸ್ವಲ್ಪ ಹೆಚ್ಚು ಸ್ವಲ್ಪ ಕಡಿಮೆ ಇದೆ ಎಂದು ತಿಳಿದುಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ. ಸರ್ಕಾರದವರೂ ಕೂಡ ತಿಳಿದುಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ. ಸರ್ಕಾರಕ್ಕೆ ಎಷ್ಟು ಜವಾಬ್ದಾರಿ ಇದಿಯೋ ಅಷ್ಟೇ ಜವಾಬ್ದಾರಿ ಇಲ್ಲಿರುವ ಎಲ್ಲ ಸದಸ್ಯರಿಗೂ ಕೂಡ ಇದೆ. ಮಾನ್ಯ ಅಧ್ಯಕ್ಷರೇ, ಈವತ್ತು ಮೂರು ಶತಮಾನಗಳಿಂದಲೂ ಸಿಕ್ಕರೂ ಮತ್ತು ಹಿಂದುಗಳು ಒಂದು ಸಾಮರಸ್ಯಭಾವದಿಂದ ಬದುಕಿದಂತ ಭವ್ಯ ಇತಿಹಾಸ ರಾಷ್ಟ್ರದ ಜನತೆಯ ಮುಂದೆ ಇದೆ. ಆದರೆ ಬೀದರ್‌ನಲ್ಲಿ ನಡೆದಂಥ ಒಂದು ಅಮಾನುಷಕೃತ್ಯದಿಂದ ಅಸುಳಿಗಳಾದ ಆರುಜನ ವಿದ್ಯಾರ್ಥಿಗಳು ಯಾವ ರೀತಿ ಕೊಲೆಯಾಗಿದ್ದಾರೆ, ಅದನ್ನು ಯಾರೇ ಮಾಡಿರಲಿ ಅದರಿಂದ ಕರ್ನಾಟಕದ ಜನತೆ ತಲೆ ತಗ್ಗಿಸಬೇಕಾಗಿದೆ. This House should pass the Resolution condemning that incident and the attrocity committed on the minority. We are the representatives of the people of Karnataka. In one voice we should not only condemn this but also insist the Government machinery to find out the culprits and take necessary action to punish them. ಅದು ಯಾರೇ ಇರಲಿ. ಅಲ್ಲಿ ಏನು ನಡೆದಿದೆ ಆದರ ಬಗ್ಗೆ ಸ್ವಲ್ಪ ಆಲೋಚನೆ ಮಾಡಬೇಕು. ೧೪ನೇ ತಾರೀಖು ರಾತ್ರಿ ಇದು ಪ್ರಾರಂಭವಾಯಿತು. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಸ್ವಲ್ಪ ಗಮನ ಕೊಡಬೇಕು. ತಾವು ೨೩ನೇ ತಾರೀಖು ಬೀದರ್‌ಗೆ ಹೋಗಿದ್ದಿರಿ. ಇದು ಒಂದು ಅತ್ಯಂತ ಸೂಕ್ಷ್ಮವಾದ ವಿಚಾರ. ಇಂಥ ಗಲಭೆಗಳು ಒಂದು ಕಡೆ ನಡೆದಾಗ ಆರುಜನರೇ

ಸತ್ತಿದ್ದಾರೆಯೋ ಅಥವಾ ಇನ್ನೂ ಹೆಚ್ಚು ಜನರು ಸತ್ತಿದ್ದಾರೆಯೋ ಗೊತ್ತಿಲ್ಲ. This cannot be an excuse, This is an isolated incident which should not heppen has happened. It is the duty of the Hon. Chief Minister to visit that place immediately. You cannot give explanation. You may give explanation but no explanation can Substitute the laxity on the part of the Government to look at this issue. This is a serious lapse which is committed by the top-most man in the Government of Karnataka. ಇದರ ಬಗ್ಗೆ ನಾವು ತಮ್ಮ ಬಗ್ಗೆ ಚಾರ್ಜ್ ಮಾಡತಕ್ಕಂಥ ದುರಾದೃಷ್ಟ ನಮಗೆ ಬಂದಿದೆ. He should have visited. ಇಂಥ ಒಂದು ಗಂಭೀರವಾದ ಪ್ರಸಂಗ ೧೪ರಂದು ರಾತ್ರಿ ಅಲ್ಲಿ ನಡೆದಿರುವಾಗ ತಾವು ಆಕಡೆ ೯ ದಿನಗಳವರೆಗೆ ಗಮನ ಕೊಡದಿದ್ದರೆ ಏನಾಗುತ್ತದೆ? ಕೂಡಲೇ ತಾವು ಅಲ್ಲಿಗೆ ಹೋಗ ಬೇಕಾಗಿತ್ತು. ೧೫ ರಂದು ಅಥವಾ ೧೬ರಂದಾದರೂ ಹೋಗಿದ್ದರೆ ಇಷ್ಟೆಲ್ಲ ರೂಮರ್ ಆಗುತ್ತಿರಲಿಲ್ಲ. ಏನೇನೋ ಕಥೆ ಕಟ್ಟಿ ರಾಷ್ಟ್ರವ್ಯಾಪ್ತಿಯಾಗಿ ಹರಡುತ್ತಿತ್ತೆ? ಇಲ್ಲ, ಹರಡುತ್ತಿರಲಿಲ್ಲ. ಇದನ್ನು ನಿಲ್ಲಿಸ ಬೇಕಾದ ಕೆಲಸ, ಕರ್ತವ್ಯ ತಮ್ಮದಾಗಿತ್ತು. ಇದರಲ್ಲಿ ಕರ್ತವ್ಯಲೋಪವಾಗಿದೆಯೋ ಇಲ್ಲವೇ ಎಂದು ತಾವೇ ಆತ್ಮ ನಿರೀಕ್ಷಣೆ ಅಥವಾ ಆತ್ಮ ಪರಿಶೋಧನೆ ಮಾಡಿಕೊಳ್ಳಬೇಕು. ತಮಗೆ ಬೇರೆ ಬೇರೆ ಕೆಲಸ ಕಾರ್ಯಗಳು ಇರಬಹುದು, ಆದರೆ ಬೀದರ್‌ನಲ್ಲಿ ನಡೆದ ಘಟನೆ ಏನಿದೆ, ಇದಕ್ಕಿಂತ ಮಹತ್ತರವಾದ, ಗಂಭೀರವಾದ ವಿಚಾರ ಸರ್ಕಾರಕ್ಕೆ ಮತ್ತೊಂದು ಇರಲಿಕ್ಕೆ ಇಲ್ಲ.

ಅಧ್ಯಕ್ಷರು.—ಆಮೇಲೆ ಅದೆಲ್ಲ ಹೇಳಿ.

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ನಿಲುವಳಿ ಸೂಚನೆಗೆ ಒಪ್ಪಿದರೆ ನಾನು ಕೂತು ಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಸಬ್‌ಮಿಷನ್ ಮಾಡಿ. ಎರಡೂ ಕಡೆಯಿಂದ ನಾನು ಕೇಳಬೇಕಾಗುತ್ತದೆ.

ಶ್ರೀ ಡಿ. ಟಿ. ಜಯಕುಮಾರ್.—ಇಷ್ಟೊಂದು ಹೇಳುವವರು ದೆಲ್ಲಿಯಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ಹತ್ಯೆ ಆದಾಗ ಏನು ಮಾಡಿದಿರಿ? ಅದರ ಬಗ್ಗೆ ರಿಪೋರ್ಟ್ ಕೂಡ ಬಂದಿದೆ. ಅದು ಈಗ ಏನಾಗಿದೆ? ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ ಜಯಕುಮಾರ್‌ನವರೇ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಡೆಲ್ಲಿಯಲ್ಲಿ ಆಯಿತು, ಬೀದರ್‌ನಲ್ಲಿ ಆಯಿತು ಎಂದು ಬೆಂಗಳೂರಿನಲ್ಲಿ ಸಹ ಆಗಬೇಕೆ ?

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಇಂಥಾದ್ದು ಡೆಲ್ಲಿಯಲ್ಲೂ ಆಗಬಾರದು, ಬೀದರ್‌ನಲ್ಲೂ ಆಗಬಾರದು, ಎಲ್ಲಿಯೂ ಆಗಬಾರದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಲ್ಲಿ ಇಷ್ಟೊಂದು ಅಸ್ತವ್ಯಸ್ತತೆಗೆ ಹೋಗಿರುವುದನ್ನು ನೋಡಿದರೆ ಟ್ರಜರಿ ಬೆಂಚ್ ಈ ಬಗ್ಗೆ ಎಷ್ಟು ಜವಾಬ್ದಾರಿ ವಹಿಸುತ್ತದೆಂಬುದು ಕಾಣುತ್ತದೆ. This is how the Treasury Bench is reacting to the situation. This is how you have disciplined your people,

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಪ್ರಚೋದಕ ಭಾಷಣ ಮಾಡಿದರೆ ಹಾಗೆ ಆಗುತ್ತದೆ. Even now I appeal to you, not to go deep into the details.

ಈ ಘಟನೆ ಬಗ್ಗೆ ಚರ್ಚೆ ಮಾಡುವಾಗ ಬಹಳ ಸಂಯಮದಿಂದ ಮಾತನಾಡಬೇಕಾಗುತ್ತದೆ. ರಾಜಕೀಯವಾಗಿ ಇದನ್ನು ಬಳಸಲಿಕ್ಕೆ ಹೋದರೆ ರಾಜಕೀಯವಾಗಿಯೇ ಉತ್ತರ ಕೊಡಬೇಕಾಗುತ್ತದೆ. ಉದ್ವೇಗದಲ್ಲಿ ರಾಜಕೀಯ ಬೇಡ.

ಶ್ರೀ ಕೆ. ಹೆಚ್. ಪಾಟೀಲ್.—ರಾಜಕೀಯವಾಗಿ ಉತ್ತರ ಹೇಗೆ ಬರುತ್ತದೆ ? ರಾಜಕೀಯ ಹೇಳಿದರೆ ಬರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದು ವಿಚಾರವನ್ನು ಎಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು. ಏನೆಂದರೆ, ಇದು ಸಿಖ್ ಮತ್ತು ನಾನ್ ಸಿಖ್ ನಡುವಿನ ಗಲಭೆ ಎನ್ನುವ ಕಲ್ಪನೆ ಬೇಡ. ಕೋಮುಗಳ ಘರ್ಷಣೆ ಇದೆ. ಈ ರೀತಿ ಬೆಳಸಲಿಕ್ಕೆ ಹೋದರೆ ಕರ್ನಾಟಕ ರಾಜ್ಯ ಮಾತ್ರವಲ್ಲ. ಬೇರೆ ಬೇರೆ ರಾಜ್ಯಗಳ ವಿಚಾರಗಳು ಬರುತ್ತವೆ. ಅದಕ್ಕೆ ಅವಕಾಶ ಇಲ್ಲದಂತೆ ಈ ಘಟನೆ ಬಗ್ಗೆ ಮಾತ್ರ ಸೀಮಿತ ವಾಗಿರೋಣ. ಮುಂದೆ ವಿಚಾರಣೆಯಾಗಿ ನಿರ್ಣಯ ಬಂದಮೇಲೆ......

ಶ್ರೀ ಎಂ. ವೀರಪ್ಪ ಮೊಯ್ಲಿ.—ಆ ಸದ್ಭಾವನೆಯಿಂದಲೇ ನಾನು ಮಾತನಾಡುತ್ತಿದ್ದೇನೆ. ಮುಖ್ಯ ಮಂತ್ರಿಗಳು ಬಹಳ ಹಿಂದೆ ಹೋಗುತ್ತಿದ್ದಾರೆ. ಅಡ್ಮಿನಿಸ್ಟ್ರೇಟೀವ್ ಲ್ಯಾಪ್ಸಸ್ ಬಗ್ಗೆ ವಿವರ ಕೊಡಿ ಎಂದು ಹೇಳಿದ್ದರಿಂದ ನಾನು ಅಡ್ಮಿನಿಸ್ಟ್ರೇಟೀವ್ ಲ್ಯಾಪ್ಸಸ್ ಬಗ್ಗೆ ಹೇಳುತ್ತಿದ್ದೇನೆ ತಮಗೆ ಇದು ಹಿತ ಆಗಲಿಕ್ಕಿಲ್ಲವೆಂದು ಕಾಣುತ್ತದೆ. ೧೪ರಂದು ರಾತ್ರಿ ಈ ಘಟನೆ ನಡೆದಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಡ್ಮಿನಿಸ್ಟ್ರೇಟೀವ್ ಲ್ಯಾಪ್ಸ್ ಬಗ್ಗೆ ಹೇಳುವಾಗ ಬೇರೆ ಬೇರೆ ರಾಜ್ಯಗಳಲ್ಲಿ ಮತ್ತು ಕೇಂದ್ರ ಸರ್ಕಾರ ಇಂತಹ ಘಟನೆಗಳ ಬಗ್ಗೆ ನಡೆದುಕೊಂಡಂಥ ರೀತಿಯನ್ನು ಸಹ ನೋಡಬೇಕಾಗುತ್ತದೆ. ಆದ್ದರಿಂದ ತಾವು ಅದನ್ನು ಗಮನದಲ್ಲಿಟ್ಟುಕೊಂಡು ಮಾತನಾಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಅಲ್ಲಿ ನಡೆದ ಘಟನೆ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿತು ಎಂಬ ಬಗ್ಗೆ ಅವರದೇ ಆದ ರೀತಿಯಲ್ಲಿ ಅವರು ಹೇಳಲಿ. ೧೪ನೇ ತಾರೀಖು ರಾತ್ರಿ ಘಟನೆ ನಡೆದ ತಕ್ಷಣ ಮುಖ್ಯಮಂತ್ರಿಗಳು ಮದ್ರಾಸಿಗೆ ಹೊಗಬೇಕಾಗಿದ್ದರಿಂದ ನಮ್ಮನ್ನು ಅಲ್ಲಿಗೆ ಕಳುಹಿಸಿದ್ದರು. ನಾನು ಮತ್ತು ಸಿಂಧ್ಯ ಅವರು ಅಲ್ಲಿಗೆ ಹೋಗಿದ್ದೆವು. ನಾವು ಹೋದಾಗ ಮೊದಲು ಗುರುದ್ವಾರಕ್ಕೆ ಹೋಗಿ ಎರಡೂ ಗುಂಪಿನವರನ್ನು ಸೇರಿಸಿ ತಿಳಿಯಾದ ವಾತಾವರಣ ಬರುವಂತೆ ಪ್ರಯತ್ನ ಮಾಡಿದ್ದೇವೆ. ವಾತಾವರಣ ತಿಳಿಗೊಳ್ಳುತ್ತಾ ಇರತಕ್ಕ ಸಮಯದಲ್ಲಿ to score a political point ಸರ್ಕಾರ ಏನೂ ಮಾಡೇ ಇಲ್ಲ ಎಂದು ಹೇಳುವುದು ಸರಿಯಲ್ಲ. ಸರ್ಕಾರ ಏನು ಮಾಡಿದೆ ಏನು ಮಾಡಿಲ್ಲ ಎಂಬುದು ಎನ್‌ಕ್ವೈರಿ ಆದಮೇಲೆ ಗೊತ್ತಾಗುತ್ತದೆ. ಪೋಲೀಸ್ ಅಧಿಕಾರಿಗಳ ಬಗ್ಗೆ ಹೇಳಿದ್ದಾರೆ. ಅಧಿಕಾರಿಗಳು ತಪ್ಪು ಮಾಡಿದ್ದರೆ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದಮೇಲೂ ಅದಕ್ಕೆ ಮತ್ತೆ ಬಣ್ಣ ಕಟ್ಟುವುದಕ್ಕೆ ಹೋಗಬಾರದು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಇವತ್ತು ಮೊಟ್ಟಮೊದಲಿಗೆ ಅಸೆಂಬ್ಲಿಗೆ ಬಂದಿದ್ದಾರೆ. ಈ ಕಡೆಯಿಂದ ಎತ್ತಿರತಕ್ಕ ವಿಷಯ ಮಹತ್ತರವಾದುದು. ಬೀದರ್‌ನಲ್ಲಿ ನಡೆದಿರತಕ್ಕ ಘಟನೆ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಅದರ ಬಗ್ಗೆ ತಾವು ಏನು ತೀರ್ಮಾನ ಕೊಡುತ್ತೀರೊ ಕೊಡಿರಿ. ಆದರೆ ಮಾನ್ಯ ಬೊಮ್ಮಾಯಿಯವರು ಏನು ಒಂದು ಮಾತು ಹೇಳಿದರು, ಅದು ಸರ್ಕಾರಕ್ಕೆ ಸಲ್ಲದೇ ಇರತಕ್ಕ ಮಾತು. ಬೇರೆ ಬೇರೆ ರಾಜ್ಯಗಳಲ್ಲಿ ಏನೇನು ಘಟನೆಗಳು ಆಗುತ್ತಿವೆ ಅಂಥದ್ದನ್ನೂ ಡಿಸ್‌ಕಸ್ ಮಾಡಬೇಕೆಂದು ಹೇಳಿದ್ದಾರೆ. ನೀವು ಅಧಿಕಾರ ನಡೆಸುತ್ತಿದ್ದೀರಿ. ಶಾಂತಿಭಂಗ ಆಗದಂತೆ ಸರ್ಕಾರದವರು ನಿಯಂತ್ರಿಸಬೇಕು, ಅದನ್ನು ಹತೋಟಿಗೆ ತರಬೇಕು. ಶಾಂತಿಸ್ಥಾಪನೆ ಮಾಡಬೇಕು. ಅದು ನಮ್ಮ ಉದ್ದೇಶ. ನೀವು ಮುಖ್ಯ ಮಂತ್ರಿ ಯಾಗಿ ಶಾಂತಿಪಾಲನೆ ಜವಾಬ್ದಾರಿ ಹೊತ್ತಿದ್ದೀರಿ. ನೀವು ಆ ಕೆಲಸ ಮಾಡಿ. ಬೇರೆ ರಾಜ್ಯಗಳಲ್ಲಿ ಏನೇನಾಗುತ್ತಿದೆ ಅದರ ನೆರಳಿನಲ್ಲಿ ನೀವು ಸಹ ಕುಳಿತುಕೊಳ್ಳತಕ್ಕ ಪ್ರಯತ್ನ ಮಾಡಬೇಡಿ. ಮಾನ್ಯ ಪಟೇಲ್ ಅವರು ರಾಜಕೀಯ ಲಾಭ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಅಂದರು. ಕರ್ನಾಟಕ ಶಾಂತವಾಗಿರತಕ್ಕ ರಾಜ್ಯ.

ಶ್ರೀ ಜೆ. ಹೆಚ್. ಪಟೇಲ್.—ಕೇಂದ್ರ ಗೃಹ ಮಂತ್ರಿಗಳು ಮೊನ್ನೆ ಬಂದಿದ್ದಾಗ.........

ಶ್ರೀ ಬಿ. ಬಸವಲಿಂಗಪ್ಪ.—ಮಧ್ಯೆ ಎದ್ದು ಎದ್ದು ಏತಕ್ಕೆ ಹೇಳುತ್ತೀರಿ ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಗೃಹ ಮಂತ್ರಿಗಳು.. ......

ಶ್ರೀ ಬಿ. ಬಸವಲಿಂಗಪ್ಪ.—ನೀವು ಏನು ಹೇಳುತ್ತೀರೋ ಅದನ್ನು ನೀವು ಆಮೇಲೆ ಹೇಳಿ.

ಶ್ರೀ ಜೆ. ಹೆಚ್. ಪಟೇಲ್ —ವಿಷಯ ಗೊತ್ತಿಲ್ಲದೇ.........

ಶ್ರೀ ಬಿ. ಬಸವಲಿಂಗಪ್ಪ.—ಯಾರಿಗೆ ವಿಷಯಗೊತ್ತಿಲ್ಲ ? ಯಾರಿಗೆ ಗೊತ್ತಿಲ್ಲವೋ ಅವರಿಗೆ ಹೇಳಿ. ರಾಜಕೀಯ ಲಾಭ ಪಡೆಯುವುದಕ್ಕೆ. ......

ಶ್ರೀ ಜೆ. ಹೆಚ್. ಪಟೇಲ್.—ಕೇಂದ್ರ ಗೃಹ ಮಂತ್ರಿಗಳು ನಮ್ಮೊಡನೆ ಚರ್ಚೆ ಮಾಡಿ ಎಷ್ಟು ಸಹಕರಿಸಿದ್ದಾರೆ. ಇದು ಸೂಕ್ಷ್ಮವಾದ ವಿಷಯ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಮತ್ತೆ ಹೇಳುವುದೇನೆಂದರೆ..... ...

ಅಧ್ಯಕ್ಷರು.—ಪ್ರಿಲಿಮಿನರಿ ಸಬ್‌ಮಿಷನ್‌ಗೆ ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ. ನಿಮಗೆ ಕೊಟ್ಟಿಲ್ಲ. ಅವರದು ಮುಕ್ತಾಯ ಆಗಲಿ. ಹೀಗೆ ಮಾತನಾಡುವುದಕ್ಕೆ ನಿಮಗೆ ಅವಕಾಶ ಕೊಟ್ಟರೆ ಎಲ್ಲರೂ ಮಾತನಾಡುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ನಾವು ಹೇಳುತ್ತಿರುವುದು ರಾಜಕೀಯ ಲಾಭ ಪಡೆಯುವುದಕ್ಕಲ್ಲ. ಜನರ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇನ್ನೊಂದು ಸಾರಿ ಆ ಮಾತನ್ನು ಹೇಳಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಮ್ಮ ನಾಯಕರಾಗಲೀ ನಾವಾಗಲೀ ಇದರ ಬಗ್ಗೆ ಏನೇನು ಸ್ಟೇಟ್‌ಮೆಂಟ್ ಕೊಟ್ಟಿದ್ದೇವೆ, ಯಾವರೀತಿ ಸಂಯಮ ವಹಿಸಿದ್ದೇವೆ ಎಂಬುದನ್ನು ತಾವು ದಯಮಾಡಿ ನೋಡಿ. ರಾಜಕೀಯ ಮಾಡುವುದಕ್ಕೆ ಯಾರೂ ಹೋಗಿಲ್ಲ. ಅಂಥದ್ದು ಇದ್ದರೆ ಒಂದು ಸ್ಟೇಟ್‌ಮೆಂಟ್ ತೆಗೆದುಕೊಡಿ. Many of us restrained from giving statements. We thought we should not do it. Deliberately, we avoided it. Some of us did not visit because we thought that it is not appropriate. ನಾವು ಸಹ ಸರ್ಕಾರಕ್ಕೆ ಸಹಾಯ ಮಾಡಬೇಕೆಂದಿದ್ದೇವೆ. ಅದನ್ನು ತಾವು ಅರ್ಥಮಾಡಿಕೊಳ್ಳಬೇಕು. Show me one statement which we have given. We have deliberately avoided it. ಅಡ್ಮಿನಿಸ್ಟ್ರೇಟೀವ್ ಲ್ಯಾಪ್ಸ್ ಬಗ್ಗೆ ಹೇಳುತ್ತಿದ್ದೇವೆ. ಇವತ್ತು ತಾವು ಆಲೋಚನೆ ಮಾಡಿ. Law and order is the concern of the State Govt. ಅದನ್ನು ಒಪ್ಪುತ್ತೀರಾ ? ಮಾಜಿ ಸಂಸತ್ ಸದಸ್ಯರು, ಮಾಜಿ ಮಂತ್ರಿಗಳು ಮತ್ತು ಪಾರ್ಲಿಮೆಂಟ್ ಸದಸ್ಯರು ಹಾಗೂ ಲೋಕಲ್ ಎಂ. ಎಲ್. ಎ. ಯವರು ೧೪ನೇ ತಾರೀಖಿನಿಂದ ಸತತವಾಗಿ ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿಮಾಡಿ ಮಾತನಾಡಲು ಫೋನ್ ಮಾಡುತ್ತಲೇ ಇದ್ದಾರೆ. ಅವರು ಕಾಂಟಾಕ್ಟ್ ಮಾಡಲು ಪ್ರಯತ್ನಪಟ್ಟಾಗ ಮುಖ್ಯಮಂತ್ರಿಗಳು

೧-೩೦ ಪಿ. ಎಂ.

ಮೀಟಿಂಗ್‌ನಲ್ಲಿದ್ದರು. ನಂತರ ಅವರು ವಿಷಯ ಬಹಳ ಗಂಭೀರವಾಗಿದೆ ಎಂದು ತಿಳಿಸಿದ್ದಾರೆ. It requires the intervention of the Hon'ble Chief Minister ಅಂತ ಹೇಳಿ ಒತ್ತಾಯ ಮಾಡಿದ್ದಾರೆ. ಆದರೆ ಅದಕ್ಕೆ ತಮ್ಮ ಕಛೇರಿಯಿಂದ ರೆಸ್‌ಪಾನ್ಸ್ ಇಲ್ಲ. You should have talked to them. Perhaps you could have saved the lives of those six boys.

ಶ್ರೀ ಎಸ್. ಆರ್. ಬೊಮ್ಮಾಯಿ.—ತಪ್ಪು ತಿಳುವಳಿಕೆ ಬೇಡ.

ಶ್ರೀ ಎಂ. ವೀರಪ್ಪ ಮೊಯ್ಲಿ.—Let me complete.........

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಬೆಂಗಳೂರಿನಲ್ಲಿರಲಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದ್ದಿರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲ ಹೊರಗೆ ಹೋಗಿದ್ದೆ. ರಾತ್ರಿ ೧೦ ಗಂಟೆಗೆ ಬಂದೆ. ಬಂದ ಮೇಲೆ ವಿಷಯ ಗೊತ್ತಾಯಿತು. ರಾತ್ರಿ ೧೦-೦೦ ಗಂಟೆಯಲ್ಲೇ ಮಾನ್ಯ ಸದಸ್ಯರಾದ ಶ್ರೀ ಕಲ್ಯಾಣರಾವ್ ಮೊಳಕೇರಿ ಹಾಗೂ ಲೋಕಸಭಾ ಸದಸ್ಯರಾದ ಶ್ರೀ ನರಸಿಂಗರಾವ್ ಸೂರ್ಯವಂಶಿ ರವರ ಜೊತೆ ಅರ್ಜೆಂಟ್ ಕಾಲ್ ಹಾಕಿ ಮಾತನಾಡಿ ಅವರ ಜೊತೆ ಸಂಪರ್ಕ ಬೆಳೆಸಿದ್ದೇನೆ.

ಶ್ರೀ ಮಲ್ಲಿಕಾರ್ಜುನ್ ಎಂ. ಖರ್ಗೆ.—ಆಮೇಲೆ ಸಂಪರ್ಕ ಮಾಡಿದ್ದೀರಿ. ಅದನ್ನು ನಾವು ಇಲ್ಲ ಅಂತ ಹೇಳುತ್ತಿಲ್ಲ. ಅದಕ್ಕಿಂತ ಮೊದಲು ಮಾಡಿದ್ದು ಏನು ಎಂಬುದನ್ನು ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಅಂದೇ ರಾತ್ರಿ ಮನೆಗೆ ಬಂದ ಕೂಡಲೇ ಅವರ ಜೊತೆ ಸಂಪರ್ಕ ಬೆಳೆಸಿದ್ದೇನೆ.

ಶ್ರೀ ಎಂ. ವಿರಪ್ಪ ಮೊಯ್ಲಿ.—I agree with you. Even now we compliment. After you were sezied of the matter you have acted. But there is a delayed response given by you. You have delayed it. The later part we agree with you. ಕೇಂದ್ರದ ಗೃಹ ಮಂತ್ರಿಗಳು ಈ ಬಗ್ಗೆ ಬಹಳ ಸಮಾಧಾನ ವ್ಯಕ್ತಮಾಡಿದ್ದಾರೆ. ಇದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ what we are concerned with is the crucial mements from the 14th, 15th 16th and even 17th. perticularly on 16th......... ಏಕೆಂದರೆ ಅಲ್ಲಿ ಆಗಿರತಕ್ಕ ಅನಾಹುತ, ಅಮಾನುಷ ಕೃತ್ಯಗಳು ಅದೇ ದಿವಸ ಆಗಿ ಹೋಯಿತು. ಇದನ್ನು ತಾವು ನಿಲ್ಲಿಸ ಬಹುದಾಗಿತ್ತೆಂದು ನಾವು ಹೇಳುತ್ತಾ ಇರುವುದು. ಒಂದು ರಾಜ್ಯ ಸರ್ಕಾರ ಕಾನೂನು ಸುವ್ಯವಸ್ಥೆಯ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡಮೇಲೆ ಕೂಡ, ಬಿಕೆದರ್‌ನ ಒಬ್ಬ ಮಾಜಿ ಮಂತ್ರಿಗಳು ಅಥವಾ ಎಂ. ಪಿ. ಯವರು He had to contact the Secretary of the Union Government. ದೆಹಲಿಯಲ್ಲಿರತಕ್ಕ ಕೇಂದ್ರ ಸರ್ಕಾರದ ಗೃಹ ಕಾರ್ಯದರ್ಶಿಗಳನ್ನು ಈ ಬಗ್ಗೆ ಕಾಂಟಾಕ್ಟ್ ಮಾಡಬೇಕಾಯಿತೆಂದರೆ ಇದಕ್ಕಿಂತ ದೊಡ್ಡದು ಇದೆಯೇ ಅಂತ ಹೇಳುತ್ತೇನೆ. are we not ashamed of it ? To protect the lives and property of the minorities, a local citizen of karnataka has to contact Delhi in the Union Home Secretary. The Union Home Secretary, in turn, has to ask the State Government to act. ಅಲ್ಲಿಯ ವರೆಗೆ You were unable to act. Is it not a serious lapse on the part of the State Government ? Is it not Serious ಇದಕ್ಕಿಂತ ದೊಡ್ಡದು ಇದೆಯೇ ? ಏಕೆಂದರೆ ೧೭ನೇ ತಾರೀಖಿನ ನಂತರ ನೀವು ಎಲ್ಲ ಕ್ರಮ ತೆಗೆದುಕೊಂಡಿದ್ದೀರಿ. ಎಲ್ಲರಿಗೂ ಫೋನ್ ಮಾಡಿದ್ದೀರಿ ಅಂತ ಹೇಳುವುದು excuse is very late. You have missed the bus.

ಶ್ರೀ ಎಸ್. ಆರ್. ಬೊಮ್ಮಾಯಿ.—೧೫ನೇ ತಾರೀಖಿನಂದೇ ಅವರ ಜೊತೆ ಮಾತನಾಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—೧೫ನೇ ತಾರೀಖು ನೈಟ್ ಅವರ ಜೊತೆ ಮಾತನಾಡಿದ್ದೀರಿ. 15th Night. By that time every thing was over.

ಶ್ರೀ ಎಸ್. ಆರ್. ಬೊಮ್ಮಾಯಿ.—ಎರಡು ಸಲ ಅವರ ಜೊತೆ ಮಾತನಾಡಿದ್ದೇನೆ. you check of the facts.

ಶ್ರೀ ಎಂ. ವೀರಪ್ಪ ಮೊಯ್ಲಿ.—ನೀವು ೧೫ನೇ ತಾರೀಖು ನೈಟ್ ಮಾತನಾಡಿದ್ದೀರಿ. ಅಲ್ಲಿಯ ವರೆಗೆ ಎಲ್ಲವೂ ಮುಗಿದೇ ಹೋಗಿತ್ತು. ನಿಮ್ಮ ಡಿ. ಐ. ಜಿ. ಕೂಡ ಬಂದಿದ್ದವರು ವಾಪಸ್ಸು ಹೋಗಿದ್ದರು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ಇರಲಿಲ್ಲ. ಡಿ. ಐ. ಜಿ. ಇರಲಿಲ್ಲವೇ ? ಎಸ್. ಪಿ. ಇರಲಿಲ್ಲವೇ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ನಿಮ್ಮ ಡಿ. ಜಿ. ಪಿ. ಇರಲಿಲ್ಲವೇ ? ಡಿ. ಐ. ಜಿ. ಇರಲಿಲ್ಲವೇ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆಯಿತು ತಾವು ವಿವರಗಳನ್ನು ಹೇಳಿ.

ಅಧ್ಯಕ್ಷರು.—ಆಯಿತು. ಅಡ್ಮಿನಿಸ್ಟ್ರೇಟೀವ್ ಲ್ಯಾಪ್ಸಸ್ ಬಗ್ಗೆ ಹೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮತ್ತೆ ಗುಲ್ಬರ್ಗದಿಂದ ಬೀದರ್‌ಗೆ ಎಷ್ಟು ದೂರ ಇದೆ ? ಒಂದೂವರೆ ಗಂಟೆ ಪ್ರಯಾಣ. ೧೪ನೇ ತಾರೀಖು ಈ ಘಟನೆ ಜರುಗಿದೆ. D. G. P. Home

Secretary was there on 17th. It is a serious administrative lapse from top to bottom. DIG reaches Bidar on the evening of 15th. ಕೆ. ಎಸ್. ಆರ್. ಪಿ. ಗುಲ್ಬರ್ಗದಲ್ಲಿದೆ. ಆದರೂ ಸಹ ಅದು ಮೂವ್ ಮಾಡಲೇ ಇಲ್ಲ. KSRP have not been moved from Gulbarga to Bidar. ಬೀದರ್‌ನಲ್ಲಿ ಆಗಿರುವಂತಹ ಘಟನೆ ಒಂದು ಹಳ್ಳಿಯಲ್ಲಿ ನಡೆಯುವಂತಹ ಘಟನೆಯಲ್ಲ. Right before the eyes of the District Headqurters. ಅದು ಜಿಲ್ಲಾ ಕೇಂದ್ರ, ಜಿಲ್ಲಾಧಿಕಾರಿಗಳು ಇದ್ದಾರೆ, ಎಸ್. ಪಿ. ಯವರು ಇದ್ದಾರೆ. ಜಿಲ್ಲೆಯಲ್ಲಿ ಸಾಕಷ್ಟು ಪೋಲೀಸ್ ಫೋರ್ಸ್ ಕೂಡ ಇದೆ. ವೈರ್‌ಲೆಸ್ ಇದೆ. ಎಲ್ಲಾ ಸಲಕರಣೆಗಳು ಇವೆ. ಆದರೂ ಕೂಡಾ it looks as if for complete one and half days it was a free for all situation. ಯಾರಿಗೂ ಸಂರಕ್ಷಣೆ ಇರಲಿಲ್ಲ. Is it not a serious lapse ? ಇದರ ಬಗ್ಗೆ ನ್ಯಾಯಾಂಗ ವಿಚಾರಣೆ ಮಾಡುತ್ತೀರಿ. ಆದರೆ ಬರೀ ಎಸ್‌ಪಿ ಮಾತ್ರವಲ್ಲ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಅಥವಾ ಡಿಐಜಿ ಅಥವಾ ಬೆಂಗಳೂರಿನಲ್ಲಿ ಕೂಡಾ ಯಾರು ಯಾರು ಇದಕ್ಕೆ ಸಂಬಂಧಪಟ್ಟವರು ಇದ್ದಾರೆ ಇವರೆಲ್ಲರ ಬಗ್ಗೆ ವಿಚಾರಣೆಯಾಗಬೇಕು. Otherwise you cannot inspire the confidence of the people of Karnataka or the people who are aggrieved by it. ಉಳಿದವರೆಲ್ಲರನ್ನೂ ತಾವು ಸಸ್ಪೆಂಡ್ ಮಾಡಬೇಕು. ಮುಖ್ಯವಾಗಿ ಲೋಕಲ್ ಪೋಲೀಸರನ್ನು ಸಸ್ಪೆಂಡ್ ಮಾಡಬೇಕು. ಮಾತ್ರವಲ್ಲ, ತಾವು ಬರೀ ಲೋಕಲ್ ಅಡ್ಮಿನಿಸ್ಟ್ರೇಷನ್ ಮೇಲೆ ಜ್ಯುಡಿಷಿಯಲ್ ಎನ್‌ಕ್ವಯರಿಗೆ ರೆಫರ್ ಮಾಡುವುದಲ್ಲ. ಬೆಂಗಳೂರಿನಿಂದ ಬೀದರ್‌ವರೆಗೆ ಅಥವಾ ಬೀದರ್‌ನಿಂದ ಗುಲ್ಬರ್ಗದವರೆಗೆ ಒಂದು ಕಮ್ಯುನಿಕೇಷನ್ ಲ್ಯಾಪ್ಸ್ ಆಗಿದೆ. ಕಮ್ಯುನಿಕೇಷನ್ ಬ್ರೇಕ್ ಆಗಿದೆ. ನಿಮ್ಮ ಸರ್ಕಾರದ ಕಮ್ಯುನಿಕೇಷನ್ ಕೊಂಡಿ ಇದರಲ್ಲಿ ಕಳಚಿದೆ, ಇದರ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕು. ಈಗ ನಮಗೆ ಕೆಲವೊಂದು ವರದಿಗಳು ಬಂದಿವೆ. Central Intelligence had warned you about it much earlier. ಯಾವಾಗ ನಿಮಗೆ ವಾರ್ನಿಂಗ್ ಮಾಡಿದ್ದಾರೆ ? ಆ ವಾರ್ನಿಂಗ್‌ನ್ನು ಏಕೆ ನೀವು ತೆಗೆದುಕೊಳ್ಳಲಿಲ್ಲ ? What were the extraneous situations to just brush aside such warnings which are given by the Central intelligence ? ತಾವು ದಯಮಾಡಿ ಇದನ್ನು ಹೇಳಬೇಕಾಗುತ್ತದೆ. ಈಗ ತಾವು ಇದರಲ್ಲಿ ಪ್ರತಿಷ್ಠೆ ಮೇಲೆ ನಿಲ್ಲಬಾರದು. ಮೊನ್ನೆ ಭೋಗ್ ಸೆರೆಮನಿ ಆದಾಗ ನಿಮ್ಮ ಪೋಲೀಸರ ಮೇಲೆ ವಿಶ್ವಾಸವಿಲ್ಲ, ಸಿಆರ್‌ಪಿ ಕಳುಹಿಸಿ ಎಂದು ಅಲ್ಲಿನ ಗುರುದ್ವಾರಕ್ಕೆ ಸಂಬಂಧಪಟ್ಟ ಅಧ್ಯಕ್ಷರು ಹೇಳಿದ್ದಾರೆ. ಇಲ್ಲಿ ನಮ್ಮ ಪೋಲೀಸರೇ ಎಲ್ಲವನ್ನು ನಿಭಾಯಿಸುತ್ತಾರೆನ್ನುವ ಪ್ರತಿಷ್ಠೆ ನಿಮಗೆ ಏಕೆ ? ಕೇಂದ್ರದ ಮಂತ್ರಿಯವರೂ ಕೂಡಾ ಸಿಆರ್‌ಪಿ ಸಹಾಯ ಕೊಡುತ್ತೇವೆಂದು ಹೇಳಿದರು. ತಾವು ಬೇಡ ಎಂದು ಹೇಳಿದ್ದೀರಿ. ಅವರನ್ನು ಕರೆಸತಕ್ಕದ್ದು ಹಾಗೂ ಉಪಯೋಗ ಮಾಡತಕ್ಕದು ನಿಮಗೆ ಬಿಟ್ಟದ್ದು. ತಾವು ಈ ರಾಜಕೀಯ ಪ್ರತಿಷ್ಠೆಯನ್ನು ಎಲ್ಲಿಯವರೆಗೆ ಮುಂದುವರೆಸುತ್ತೀರಿ ? ಅಟ್ ವಾಟ್ ಕಾಸ್ಟ್ ? ತಾವು ದಯಮಾಡಿ ಆಲೋಚನೆ ಮಾಡಬೇಕಾಗಿದೆ. ಅಧ್ಯಕ್ಷರೇ, ಇವತ್ತು ಸ್ಪಷ್ಟವಾದ ಕೆಲವು ಮಾಹಿತಿಗಳು ನಮ್ಮ ಬಳಿ ಇವೆ. ಸರ್ಕಾರದ ಹತ್ತಿರ ಕೂಡಾ ಕೆಲವು ಮಾಹಿತಿಗಳು ಇವೆ. ೪೧ ಜನ ಆ ವಿದ್ಯಾರ್ಥಿಗಳನ್ನು ೧೪, ೧೫ನೇ ತಾರೀಖು ಸಂದೇ ಅರೆಸ್ಟ್ ಮಾಡಿದ್ದಾರೆ. It is only after the intervention of the D.I.G. they were released, I think, on the 16th morning. After one and a half days. That means there was sufficient evidence to show that the tension was built by the admininistrative machinery of the State. ಇಷ್ಟು ಕ್ಲಿಯರ್ ಇರುವಾಗ ತಾವು ಏಕೆ ಆಕ್ಷನ್ ತೆಗೆದುಕೊಂಡಿಲ್ಲ? ಮತ್ತೊಂದನ್ನು ಈ ಸರ್ಕಾರಕ್ಕೆ ಹೇಳುತ್ತೇನೆ. ಜೆಪಿಡಿ ಬಗ್ಗೆ ಚರ್ಚೆ ಬಂದಾಗ ನಾನು ಇದನ್ನು ಬಹಳ ಸಾರಿ ಹೇಳಿದ್ದೇನೆ. ದಯಮಾಡಿ ಹೆವೆನ್ ಸೇಕ್, ಇಂಟರೆಸ್ಟ್ ಆಫ್ ಕರ್ನಾಟಕ ಎಸ್‌ಪಿ ಅಥವಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಅಥವಾ ಡಿಸಿಗಳು ಯಾರು ಇರುತ್ತಾರೆ ಅವರನ್ನು ಹಾಕುವಾಗ ಎಲ್ಲಿ ಆ ಕೋಮಿನವರೇ ಮೆಜಾರಿಟಿ ಇರುತ್ತಾರೋ ಅಲ್ಲಿಗೆ ದಯಮಾಡಿ ಅವರನ್ನು ಕಳುಹಿಸಬೇಡಿ. ನಿಮಗೆ ಅಡ್ಮಿನಿಸ್ಟ್ರೇಷನ್ ಕಂಟ್ರೋಲ್ ಇದರಿಂದ ಸಿಗುವುದಿಲ್ಲ. ಇವತ್ತು ಒಳ್ಳೊಳ್ಳೆಯ ಅಧಿಕಾರಿಗಳು ಇರಬಹುದು. ಆದರೆ ಏನಾಗುತ್ತದೆಂದರೆ, some times unnecessarily the future of such officers is destroyed because of your affinity, because of your affection of a particular caste, community or religion. Bidar incident is one of the warnings. You cannot maintain the balance of administration.

You can not give an impartial administration in the State by such biased affinity to a particular community or a caste I am not reffering to this or that. ಆದರೆ ಇದು ಸರ್ಕಾರಕ್ಕೆ ಎಚ್ಚರಿಕೆ. ಇದೊಂದು ಎಚ್ಚರಿಕೆಯ ಘಟನೆಯಾಗಿದೆ. ನಾವು ಇದನ್ನು ಮಾತ್ರ ಎಂದಿಗೂ ಮರೆಯುವುದಕ್ಕೆ ಆಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ ಮೂರು ಜನರು ಮಾತನಾಡಿದ್ದೇವೆ. ಇದರ ಗಂಭೀರತೆ ತಮಗೆ ಗೊತ್ತಾಗಿದೆ. ಯಾವ ಕೆಟ್ಟ ಹೆಸರು ಕರ್ನಾಟಕಕ್ಕೆ ಬಂದಿದೆ ಅದನ್ನು ಅಳಿಸತಕ್ಕ ಆಲೋಚನೆಯನ್ನು ನೀವು ಮಾಡಬೇಕಾಗಿದೆ. ನ್ಯಾಯಾಂಗ ವಿಚಾರಣೆಯಲ್ಲಿನ ಪರಿಮಿತಿಯಲ್ಲಿ ಬೀದರ್‌ಗೆ ಸಂಬಂಧಪಟ್ಟ ಹಾಗೆ ಮಾತ್ರವಲ್ಲ ಮುಖ್ಯಮಂತ್ರಿಗಳನ್ನೊಳಗೊಂಡಂತೆ ಇನ್ನೂ ಕೆಲವು ಅಡ್ಮಿನಿಸ್ಟ್ರೇಟಿವ್ ಲ್ಯಾಪ್ಸಸ್ ಆಗಿದೆ. ಆದ್ದರಿಂದ ತನಿಖೆಯ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಇದನ್ನು ಸಹ ಸೇರಿಸುವುದು ಅಗತ್ಯವಾಗಿದೆ. ಸಂಬಂಧಪಟ್ಟ ಅಧಿಕಾರಿಗಳನ್ನು ತಕ್ಷಣ ಅಮಾನತ್ತಿನಲ್ಲಿಟ್ಟಿದ್ದೀರಿ. ಆದರಿಂದ ಜನರ ವಿಶ್ವಾಸವನ್ನು ಗಳಿಸುವುದು ಎರಡನೆಯದು. ಅಲ್ಲಿ ಶಾಂತಿ ಕಾಪಾಡುವ ದೃಷ್ಟಿಯಿಂದ ಎಲ್ಲಾ ಪಕ್ಷದವರು ಸೇರಿದಂತಹ ಶಾಂತಿ ಸಮಿತಿಯನ್ನು ಮಾಡಿದ್ದಾರೆ. ಆದರೆ ಸಮಿತಿಯವರು ಸಂಪೂರ್ಣವಾಗಿ ಎಲ್ಲಾ ಜನಾಂಗದವರಿಗೆ ರಕ್ಷಣೆ ಕೊಡಲಿಕ್ಕೆ ಸಾಧ್ಯವಿಲ್ಲ. ಒಂದಿಬ್ಬರು ವಿದ್ಯಾರ್ಥಿಗಳು ಸಂಪೂರ್ಣ ನಾಶವಾಗಬಹುದು. ಅವರಿಗೆ ಶಾಂತಿ ಅಲ್ಲಿ ತಕ್ಷಣ ಸಿಗುತ್ತದೆಂಬುವ ಭ್ರಮೆ ಸರಿಯಲ್ಲ. ಅವರನ್ನು ದೂರವಿರಿಸತಕ್ಕ ಪ್ರಯತ್ನ ಉಳಿದಂತಹ ಕೋಮಿನವರದಲ್ಲ. ಉಚ್ಚ ಪರಂಪರೆಯಲ್ಲಿ ಬೆಳೆದಂತಹ ಎಲ್ಲಾ ಜನಾಂಗದವರು ವಿಶ್ವಾಸದಿಂದ ಇದ್ದಂತಹ ಬೀದರ್ ಜಿಲ್ಲೆ ಹೀಗೆ ಆಗಿರುವಾಗ ಅಲ್ಲಿ ತಕ್ಷಣ ಶಾಂತಿ ಸ್ಥಾಪನೆ ಮಾಡಬೇಕಾಗಿದೆ. ಶಾಂತಿ ಸ್ಥಾಪನೆ ಮಾಡಲಿಕ್ಕೆ ಎಲ್ಲಾ ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳಬೇಕೆಂದು ತಮ್ಮ ಮುಖೇನ ಸರ್ಕಾರಕ್ಕೆ ಹೇಳಬೇಕಾಗಿದೆ. ನಾವು ಈ ವಿಚಾರವನ್ನು ತಮಗೆ ಮನದಟ್ಟು ಮಾಡಲು ನಮಗೆ ಅವಕಾಶ ಕೊಟ್ಟಿದ್ದೀರಿ. ಅದೇ ರೀತಿ ನಿಲುವಳಿ ಸೂಚನೆಗೂ ಅವಕಾಶ ಕೊಟ್ಟು ಕರ್ನಾಟಕದ ಮಾನ, ಮರ್ಯಾದೆ, ಪ್ರತಿಷ್ಠೆಯನ್ನು ಉಳಿಸತಕ್ಕ ಮಹಾಕಾರ್ಯವನ್ನು ತಾವು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಮಾತನಾಡುತ್ತಾರೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು.—ಮಾನ್ಯ ಅಧ್ಯಕ್ಷರೆ ನಾವು ಸಹ ಮಾತನಾಡಬೇಕಾಗಿದೆ.

ಅಧ್ಯಕ್ಷರು.—ಮಾನ್ಯ ಲೈಕುದ್ದೀನ್‌ರವರಿಗೆ, ಶಿವಕಾಂತ ಚತುರೆಯವರಿಗೆ, ತಮಗೆ ಮಾತನಾಡಲಿಕ್ಕೆ ಅವಕಾಶ ಕೊಡುತ್ತೇನೆ. ಈಗ ತಾವು ಕೂಡಿ.

†ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಬಹಳ ಗಂಭೀರವಾಗಿ ಈಗಾಗಲೇ ಚರ್ಚೆಯಾಗಿದೆ. ಪ್ರಾರಂಭದಲ್ಲಿ ಅವರು ಏತಕ್ಕೋಸ್ಕರ ನಿಲುವಳಿ ಸೂಚನೆಯನ್ನು ಸೂಚಿಸಿದ್ದೀರೋ ಆ ವಿಷಯಗಳನ್ನು ಅಂದರೆ ನಿಲುವಳಿ ಸೂಚನೆಗೆ ಸಂಬಂಧಪಟ್ಟ ವಿಷಯಗಳು ಹೊರಗೆ ಬಂದಿವೆ. ತಾವು ಮತ್ತೊಮ್ಮೆ ಅವಕಾಶ ಮಾಡಿಕೊಟ್ಟರೆ ಬಹಳ ಸಂತೋಷ. ಆ ಬಗ್ಗೆ ಹೆಚ್ಚಿನ ರೀತಿಯಲ್ಲಿ ಮಾತನಾಡುವುದಕ್ಕೆ ಅವಕಾಶವಾಗುತ್ತದೆ. ಒಂದು ಮಾತ್ರ ನನಗನ್ನಿಸುತ್ತದೆ, ಏನೆಂದರೆ, ಇದು ಬಹಳ ಗಂಭೀರವಾದ ವಿಷಯ ಅಷ್ಟು ಮಾತ್ರವಲ್ಲ, ಇದು ಸೆನ್ಸಿಟಿವ್ ವಿಷಯವೆಂದು ನನಗನ್ನಿಸುತ್ತದೆ. ಪತ್ರಿಕೆಗಳಲ್ಲಿ ಬಂದಿರುವ ವರದಿಯನ್ನು ನೋಡಿದರೆ, ನಾವು ಬರೆದುಕೊಂಡು ಬಂದಿರುವ ವರದಿಯನ್ನು ನೋಡಿದರೆ ಯಾವ ಪ್ರದೇಶದಲ್ಲಿ ಕಳೆದ ೨೦–೨೫ ವರ್ಷಗಳಿಂದ ಏಕೆ ಅನೇಕ ವರ್ಷಗಳಿಂದ ಯಾವರೀತಿಯ ಕೋಮು ಗಲಭೆ ಘರ್ಷಣೆ ಇರಲಿಲ್ಲ. ಆದರೆ ಇವತ್ತು ಅಲ್ಲಿ ನಡೆದಿದೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಇದು ಎರಡು ಗುಂಪುಗಳ ಘರ್ಷಣೆ ಅಲ್ಲ, ಇದು ಹಿಂದೂ ಮತ್ತು ಸಿಕ್ಕರ ಘರ್ಷಣೆ ಅಲ್ಲವೆಂದು ಹೇಳಿದರು. ನನಗೆ ತಿಳಿದು ಬಂದಹಾಗೆ ಎರಡು ಗುಂಪುಗಳ ಘರ್ಷಣೆ ಅಲ್ಲ ಎಂಬುದು ಒಂದು ರೀತಿಯಲ್ಲಿ ಸರಿ. ಏತಕ್ಕೆಂದರೆ ಅದನ್ನು ಪಂಜಾಬ್‌ಗೆ ಹೋಲಿಸುವುದಕ್ಕೆ ಆಗುವುದಿಲ್ಲ. ಪಂಜಾಬಿನಲ್ಲಿ ಒಂದು ಪರಿಸ್ಥಿತಿಯಿದೆ. ಅಲ್ಲಿ ಆತಂಕವಾದಿಗಳು ಬೇಕೆಂದು ಗಲಾಟೆ ಪ್ರಾರಂಭಮಾಡಿ ಖಲಿಸ್ಥಾನ ರಾಜ್ಯ ಸ್ಥಾಪನೆಮಾಡ ಬೇಕೆಂದು ಹೋರಾಟ ಮಾಡುತ್ತಿದ್ದಾರೆ, ಅಲ್ಲಿನ ಪರಿಸ್ಥಿತಿಯೇ ಬೇರೆ ಇದೆ, ಅಲ್ಲಿ ಮೊದಲು ಹಿಂದುಗಳನ್ನು ಕೊಲ್ಲುತಿದ್ದರು. ಈಗ ಸಿಕ್ಕರನ್ನು ಕೊಲ್ಲುತ್ತಿದ್ದಾರೆ. ಅಲ್ಲಿನ ಪರಿಸ್ಥಿತಿನೇ ಬೇರೆ ಇದೆ. ಹಿಂದೂಗಳನ್ನು ಕೊಂದು ಹಾಕಿದ್ದಾರೆ ಹಿಂದೂಗಳೆಲ್ಲಾ ಓಡಿ ಹೋಗುತ್ತಾರೆ. ಪಂಜಾಬನ್ನು ಖಲಿಸ್ಥಾನ ಮಾಡಬಹುದೆನ್ನುವ ದುರುದ್ದೇಶದಿಂದ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಪಟ್ಟಭದ್ರಹಿತಾಶಕ್ತಿಗಳು ಸಾಮ್ರಾಜ್ಯಶಾಹಿಗಳು ಅಮೇರಿಕಾಶಕ್ತಿಗಳು ಅವುಗಳನ್ನು ಮಾಡುತ್ತಿದ್ದಾರೆ. ಇದನ್ನು ಏತಕ್ಕೋಸ್ಕರ ಹೇಳುತ್ತಿದ್ದೇನೆಂದರೆ ಈ ಹಿನ್ನೆಲೆಯಲ್ಲಿ ಅಂತರಾಷ್ಟ್ರೀಯ ಪ್ರಚಾರ, ರಾಷ್ಟ್ರಮಟ್ಟದ ಪ್ರಚಾರ ನಡೆಯುವಾಗ ಬಿಬಿಸಿ ಯವರು ಲಂಡನ್‌ನಲ್ಲಿ ಏನು ಹೇಳುತ್ತಿದ್ದಾರೆಂದರೆ, ಖಲಿಸ್ತಾನದ ಜಗಳ ಬೀದರ್‌ನಲ್ಲೂ ನಡೆಯುತ್ತಿದೆ ಎನ್ನುವ ಅಭಿಪ್ರಾಯವನ್ನು ಕೊಡುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಈ ಒಂದು ಘಟನೆಯನ್ನು ಅಂದರೆ ಎಷ್ಟೊಂದು ಸೂಕ್ಷ್ಮವಾಗಿ ನಮ್ಮ ದೇಶದ ಜನ ಮತ್ತು ಅಂತರರಾಷ್ಟ್ರೀಯವಾಗಿ ಕೂಡ ನೋಡುತ್ತಿದ್ದಾರೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಇದನ್ನು ನಾನು ಪಂಜಾಬಿಗೆ ಹೋಲಿಸುವುದಕ್ಕೆ ತಯಾರಿಲ್ಲ. ಅಲ್ಲಿನ ಪರಿಸ್ಥಿತಿ ಬೇರೆ ಇದೆ. ಅಲ್ಲಿ ಕೋಮು ಶಕ್ತಿಗಳು ಪಟ್ಟಭದ್ರಹಿತಾಶಕ್ತಿಗಳು ಖಲೀಸ್ತಾನ ಚಟುವಟಿಕೆಗಳನ್ನು ಮಾಡುತ್ತಿದ್ದಾರೆ. ಆದ್ದರಿಂದ ಅದನ್ನೇ ಇಲ್ಲಿ ಮಾಡುವುದಕ್ಕೆ ಹೊರಟಿದ್ದರು ಎಂದು ಹೇಳಿದರೆ ತಪ್ಪಾಗುತ್ತದೆ. ಇದರಿಂದ ಗಲಾಟೆ ಆಯಿತು ಎಂದು ಹೇಳಿದರೆ ತಪ್ಪಾಗುತ್ತದೆ ಎಂದು ನನ್ನ ಅಭಿಪ್ರಾಯ. ಈ ರೀತಿಯಾಗಿ ಕೋಮು ಘರ್ಷಣೆ ನಡೆದಿರುವುದು ನಿಜ. ಆದರೆ ಕೋಮು ಘರ್ಷಣೆ ಏತಕ್ಕೆ ಆಯಿತು ? ಯಾರಿಂದ ಆಯಿತು ಹೇಗೆ ಆಯಿತು ? ಇದಕ್ಕೆ ಯಾರು ಜವಾಬ್ದಾರರು, ಸರ್ಕಾರದ ಜವಾಬ್ದಾರಿ ಏನು ಇದೆ ಎನ್ನುವುದು ಬಹಳ ಮುಖ್ಯವಾದ ವಿಷಯವೆಂದು ನನಗನ್ನಿಸುತ್ತದೆ. ಇದರಲ್ಲಿ ನಾನು ತಿಳಿದುಕೊಂಡಿರುವಹಾಗೆ ಕ್ರುಶಿಯಲ್ ಪಾಯಿಂಟ್ ಏನು ಎಂದರೆ ೧೪ ಮತ್ತು ೧೫ನೇ ತಾರೀಖಿನ ದಿವಸ ಐದಾರು ಗಂಟೆಗಳ ಕಾಲ ಯಾರು ಯಾರನ್ನೂ ಕೇಳುವ ಪ್ರಶ್ನೆ ಇರಲಿಲ್ಲ. ಪೋಲೀಸರು ನಿಷ್ಕ್ರಿಯರಾಗಿ ಹ್ಯಾಂಡ್ಸ್‌ಅಪ್ ಅಂದುಬಿಟ್ಟರು. ಜನ ಇಷ್ಟ ಬಂದಹಾಗೆ ಮಾಡಿಕೊಂಡುಹೋದರು. ಆರುಜನ ಸಿಖ್ ಹುಡುಗರು ಸತ್ತರು, ಲಕ್ಷಾಂತರ ರೂಪಾಯಿ ನಷ್ಟ ಆಯಿತು, ನೂರಾರು ಜನರಿಗೆ ಗಾಯಗಳಾದವು. ಈ ರೀತಿ ಯಾದ ಪರಿಸ್ಥಿತಿ ಬಂತು ಎನ್ನುವುದು ಎಲ್ಲಾ ಕಡೆಯಿಂದ ವಿಚಾರಮಾಡಿದರೆ ಗೊತ್ತಾಗುತ್ತದೆ. ಇದೆಲ್ಲ ನಡೆಯುತ್ತಿರಬೇಕಾದರೆ ಪೋಲೀಸರು ಏನು ಮಾಡುತ್ತಿದ್ದರು ? ಇದು ಮುಖ್ಯವಾದ ಪ್ರಶ್ನೆ. ನಾನು ಕೂಡ ನನ್ನ ಸ್ನೇಹಿತರ ಜೊತೆಗೆ ಧ್ವನಿಗೂಡಿಸಿ ಹೇಳಬೇಕಾಗಿದೆ, ಏನೆಂದರೆ ಈ ವಿಷಯದಲ್ಲಿ ಪೋಲೀಸರು ನಿಷ್ಕ್ರಿಯರಾಗಿದ್ದಾರೆ ಮಾತ್ರವಲ್ಲದೆ ನನಗನ್ನಿಸುತ್ತದೆ, ಏನೆಂದರೆ ಸ್ವಲ್ಪಮಟ್ಟಿಗೆ ಕೆಲವು ಅಧಿಕಾರಿಗಳು "ಆಗಲಿಬಿಡಿರಿ" ಎನ್ನುವ ಅಭಿಪ್ರಾಯದಲ್ಲಿದ್ದರು ಎನ್ನುವ ಸಂಶಯ ಇದೆ. ಏಕೆಂದರೆ ಒಂದು ವರದಿ ಏನು ಹೇಳುತ್ತದೆ ಎಂದರೆ, ಒಂದುಕಡೆ ಆರುಜನ ಸಿಕ್ ಹುಡುಗರು ಸತ್ತಿದ್ದಾರೆ ಎನ್ನುವುದು ಇದೆ. ಇನ್ನೊಂದುಕಡೆ ಇದೇ ಹುಡುಗರನ್ನು, ವಿದ್ಯಾರ್ಥಿಗಳನ್ನು ಕರೆದುಕೊಂಡುಹೋಗಿ ಪೋಲೀಸ್ ಸ್ಟೇಷನ್‌ನಲ್ಲಿಟ್ಟು ಸಿಕ್ಕಾಪಟ್ಟೆ ಹೊಡೆದಿದ್ದಾರೆ ಎನ್ನುವುದು. ಇದು ಕೂಡ ಪತ್ರಿಕೆಯಲ್ಲಿ ಬಂದಿದೆ. ಈ ವಿಚಾರ ನಮಗೆ ಕೂಡ ಗೊತ್ತಾಗಿದೆ. ಇದು ಏಕೆ ಆಗಬೇಕಿತ್ತು ? ಯಾರು ಆರುಜನ ಸತ್ತಿದ್ದಾರೆ, ಅವರಬಗ್ಗೆ ತಕ್ಷಣ ಇನ್ನುಮುಂದಕ್ಕೆ ಮುಂದುವರೆಸದ ಹಾಗೆ ನಡೆದುಕೊಳ್ಳುವುದು ಬಿಟ್ಟು ಅವರನ್ನು ಕರೆದುಕೊಂಡುಹೋಗಿ ಜೈಲಿಗೆ ಕಳಿಸಿದರೆ ಬೇರೆಯಾರು ಸಮಾಜಘಾತುಕ ಶಕ್ತಿಗಳಿವೆ, ಅವರು ಸುಮ್ಮನೆ ಇರುತ್ತಾರೆಯೇ ? ಇದು ಪೋಲೀಸಿನವರಿಗೆ ಗೊತ್ತಿರಲಿಲ್ಲವೇನು ? ಸಿ. ಐ. ಡಿ. ಡಿಪಾರ್ಟ್‌ಮೆಂಟ್ ಇಲ್ಲವೇನು ? ಇದ್ದರೆ ಏತಕ್ಕೋಸ್ಕರ ಮೊದಲೇ ಹಿಡಿಯಲಿಲ್ಲ ? ಈ ಸಮಸ್ಯೆ ಇವತ್ತು ಬಂದಿದ್ದಲ್ಲ. ಏನೋ ಪತ್ರಿಕೆಯಲ್ಲಿ ಬಂದಿದೆ. ಹುಡುಗಿಯರನ್ನು ಅವರು ಚುಡಾಯಿಸುತ್ತಿದ್ದರು, ಆದ್ದರಿಂದ ಈ ಪರಿಸ್ಥಿತಿ ಬಂದಿತು ಎನ್ನುವ ರೂಮರ್ ಇದೆ. ಇನ್ನೊಂದುಕಡೆ ಗಣೇಶನ ಉತ್ಸವಕ್ಕೆ ಬಂದಾಗ ಫೋರ್ಸಿಬಲ್ ಆಗಿ ಹಣ ಕಲೆಕ್ಟ್ ಮಾಡುವುದಕ್ಕೆ ಬಂದರು, ಆದರಿಂದ ಗಲಾಟೆ ಆಯಿತೇ ಎನ್ನುವುದು ವಾದ ಇದೆ. ಗಣೇಶನ ಉತ್ಸವಕ್ಕೆ ಮೊದಲು ಹೆಣ್ಣುಮಕ್ಕಳಬಗ್ಗೆ ಇವರ ಅಂದರೆ ಗುರುನಾನಕ್ ಇಂಜಿನಿಯರಿಂಗ್ ವಿದ್ಯಾರ್ಥಿಗಳವರ್ತನೆ ಸರಿಯಾಗಿ ಇರಲಿಲ್ಲ ಎನ್ನುವ ವಾದ ಇದೆ. ಅವರ ಮೇಲೆ ಆರೋಪ ಇದೆ. ಇದು ನಿಜಾಂಶ ಇದ್ದರೂ ಇರಬಹುದು. ಅವರೆಲ್ಲ ಸತ್ಪುರುಷರು ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಹುಡುಗರು ಹುಡುಗಿಯರು ಎಂದಮೇಲೆ ಎಲ್ಲಾ ಕಡೆಯೂ ಇದು ನಡೆಯುತ್ತದೆ. ಮೈನಾರಿಟಿಯವರಾಗಲಿ ಮೆಜಾರಿಟಿಯವರಾಗಲೀ ಯಾವ ಗುಂಪುಗಳೇ ಇರಲಿ ಈ ರೀತಿ ಈವ್ ಟೀಸಿಂಗ್ ನಡೆಯುವುದು ಇದೇನೂ ಹೊಸದಲ್ಲ, ಈ ರೀತಿ ಯಾರು ಮಾಡುತ್ತಿದ್ದಾರೆ, ಹೇಗೆ ಮಾಡುತ್ತಿದ್ದಾರೆ, ಎನ್ನುವುದು ಪೋಲೀಸಿನವರಿಗೆ ಗೊತ್ತಿರಲಿಲ್ಲವೇ ? ಸ್ಕೂಟರ್ ಮೇಲೆ ಹೋಗುತ್ತಿರು ಎಂದರೆ ಎಲ್ಲಿ ಹೋಗುವುದಿಲ್ಲ ? ನಮ್ಮ ರಾಜಾಜಿನಗರದಲ್ಲಿ ಸ್ಕೂಟರ್‌ಮೇಲೆ ಹೋಗುತ್ತಿರುತಾರೆ. ಅನೇಕರು ಹುಡುಗಿಯರನ್ನು ಚುಡಾಯಿಸಿಯೂ ಇರುತ್ತಾರೆ. ಪೋಲೀಸರು ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ. ಸುಮ್ಮನೆ ಕೈಕಟ್ಟಿ ಕುಳಿತುಕೊಂಡು ನಡೆದುಕೊಂಡುಹೋಗಲೀ ಎಂದು ಬಿಡುತ್ತಾರೆ. ನನಗನ್ನಿಸುತ್ತದೆ ಇದರಲ್ಲಿ total collapse of th[illegible]ministarion, total collapse of the police department ಆಗಿದೆ. ಇದು ನನ್ನ ಅಭಿಪ್ರಾಯ. ಇದು ಸಿಖ್‌ರ ಪ್ರಶ್ನೆಅಲ್ಲ, ಹಿಂದೂ ಪ್ರಶ್ನೆಅಲ್ಲ. ಪ್ರಶ್ನೆಇರುವುದು ಮೂಲಭ[illegible] total lapse of the administraion

ಆದ್ದರಿಂದ ನಾನು ಕೂಡ ಹೇಳಬೇಕಾಗಿದೆ ಏನೆಂದರೆ, ಯಾರು ಈ ದಿನ ಸಂಬಂಧಪಟ್ಟ ಅಧಿಕಾರಿಗಳು ಇದ್ದಾರೆ, ಅವರು ಮೊದಲು ಬಂದರು, ಆಮೇಲೆ ಬಂದರು ಎಂಬುದು ಎಲ್ಲಾ ಸಣ್ಣ ಸಣ್ಣ ವಿಷಯ. ನನಗನ್ನಿಸುತ್ತದೆ ಸುದ್ದಿ ತಿಳಿದ ತಕ್ಷಣ ಬಂದಿದ್ದಾರೆ. ಶ್ರೀ ಬೊಮ್ಮಾಯಿಯವರು ಬರಲಿಲ್ಲ, ಆಮೇಲೆ ಬಂದರು ಎಂದರೆ ಇದನ್ನು ನಾನು ದೊಡ್ಡದು ಮಾಡುವುದಕ್ಕೆ ಹೋಗುವುದಿಲ್ಲ. ಅವರು ಶ್ರೀ ಜೆ. ಹೆಚ್. ಪಟೇಲರನ್ನು ಕಳಿಸಿಕೊಟ್ಟರು, ಶ್ರೀ ಸಿಂಧ್ಯಾ ಅವರನ್ನು ಕರೆದುಕೊಂಡು ಹೋಗಿ ಎಂದು ಹೇಳಿದರು ಎಂದರೆ ಇದನ್ನೆಲ್ಲಾ ದೊಡ್ಡ ವಿಷಯವಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮೂಲಭೂತವಾಗಿ ಮೊದಲೆ ಈ ಘಟನೆ ನಡೆಯದಹಾಗೆ ಒಂದು ಕಾರ್ಯಕ್ರಮವನ್ನು ಅಲ್ಲಿರುವಂಥ ಪೋಲೀಸ್ ಅಡ್ಮಿನಿಸ್ಟ್ರೇಟರ್, ಜಿಲ್ಲಾಧಿಕಾರಿಗಳು ಮತ್ತಿತರರು ತೆಗೆದುಕೊಳ್ಳುವುದಕ್ಕೆ ಸಾಧ್ಯವಿತ್ತು. ಇವತ್ತು ಕೆಲವರನ್ನು ವರ್ಗಾವಣೆ ಮಾಡಿದ್ದೇವೆಂದು, ನಮಗೆ ತೋರಿಕೆ ಮಾಡಿ ಹೇಳಿದರೆ ಪ್ರಯೋಜನ ವಾಗುವುದಿಲ್ಲ. ಇದರಲ್ಲಿ ಬಹಳ ಅಪಾಯ ಇದೆ. ನೀವು ಏನಾದರೂ ಸಸ್ಪೆಂಡ್ ಮಾಡದೇಹೋದರೆ, ಖಂಡಿತವಾಗಿ ಅಲ್ಲಿ ಶಾಂತಿ ನೆಲೆಸುವುದಕ್ಕೆ ಕಷ್ಟವಾಗುತ್ತದೆ. ಅಲ್ಲಿ ಈಗಲೂ ಹೊಗೆಯಾಡುತ್ತಿದೆ. ಅಲ್ಲಿ ಬೋಗ್ ಸೆರಮನಿ ಶಾಂತಿಯುತವಾಗಿ ನಡೆಯಿತು ಎಂದು ಹೇಳಬಹುದು. ಆದರೆ ೨೩ನೇ ತಾರೀಖಿನೊಳಗೆ ನೀವು ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳದೇ ಹೋದರೆ, ನಾವು ಚಳುವಳಿ ಹೂಡುತ್ತೇವೆ ಎಂದು ಅಲ್ಲಿಗೆ ಬಂದಿರತಕ್ಕ ಸಿಕ್ ನಾಯಕರು ಹೇಳುತ್ತಿದ್ದಾರೆ. ಈ ವಿಷಯ ಪತ್ರಿಕೆಯಲ್ಲಿ ಬಂದಿರುವುದನ್ನು ಓದಿ ನನಗೆ ಗಾಬರಿಯಾಯಿತು. ಇನ್ನೂ ಎಲ್ಲೆಲ್ಲಿ ಏನೇನು ಅನಾಹುತಗಳು ಆಗುತ್ತವೆಯೋ ಗೊತ್ತಿಲ್ಲ. ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ, ರಿಸರ್ವ್ ಪೋಲೀಸ್ ಇದೆ, ತಮಿಳುನಾಡಿನಿಂದ ಬಂದಿದೆ, ಆಂಧ್ರದಿಂದ ಬಂದಿದೆ, ಬಂದೋಬಸ್ತು ಮಾಡುತ್ತೇವೆಂದು ತಾವು ಹೇಳಬಹುದು. ಆದರೆ ಈ ರೀತಿ ಹೇಳಿದಾಕ್ಷಣಕ್ಕೆ, you cannot assuage the feelings of those Sikhs. The only way in which you can assuage the feelings of those Sikhs is to see that those peoply who are responsible or at least *prima facie* responsible ಇಂತಹವರನ್ನು ಸಸ್ಪೆಂಡ್ ಮಾಡಲೇ ಬೇಕು. ಆಮೇಲೆ ಎನ್‌ಕ್ವೈರಿ ಮಾಡಿ Because they have not acted to arrest antisocial elements. ಇದರ ಬಗ್ಗೆ ಯೋಚನೆ ಮಾಡಿದರೆ, ಏನೂ ತೊಂದರೆ ಇಲ್ಲ. ಇನ್ನೊಂದು ವಿಷಯ ಹೇಳಬೇಕಾಗಿದೆ. Policies of the Government and the social and political forces ಇದನ್ನೂ ಕೂಡ ತಾವು ಗಮನಕ್ಕೆ ತೆಗೆದುಕೊಳ್ಳಬೇಕೆಂಬುದು ನನ್ನ ಅಭಿಪ್ರಾಯ. ಆಮೇಲೆ ಎರಡು ಗುಂಪುಗಳ ಮಧ್ಯೆ ಗುಂಪುಗಾರಿಕೆ ಇರುವ ಬಗ್ಗೆ ಪತ್ರಿಕೆಯಲ್ಲೂ ವರದಿ ಬಂದಿದೆ. ಅಲ್ಲಿ ಒಂದುತರಹ ಮಾತನಾಡುವುದನ್ನು ನಾನು ಕೇಳಿಕೊಂಡು ಬಂದಿದ್ದೇನೆ. ಅಲ್ಲಿ ಒಂದುರೀತಿಯ ಹೊಗೆಯಾಡುತ್ತಿದೆ, ಒಂದುರೀತಿ ಬಾಕ್ಸಿಂಗ್ ಮಾಡತಕ್ಕ, ಗಲಾಟೆ ಮಾಡತಕ್ಕ ಹುಡುಗರು ಇದ್ದಾರೆ, ಅವರನ್ನು ತಡೆಯುವುದಕ್ಕಾಗುವುದಿಲ್ಲ. ಇನ್ನೊಂದು ಕಡೆ ಇಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜುಗಳವರಿಗೆ ಎಲ್ಲಾ ಸವಲತ್ತುಗಳನ್ನು ಕೊಡುವುದು ಸರಿಯೇ ? ಇದು ನನಗನಿಸುತ್ತದೆ, ನಾನು ಕೊಡಕೂಡದು ಎಂದು ಹೇಳುವುದಿಲ್ಲ, ಆದರೆ, ಈ ವಿಚಾರದಲ್ಲಿ ವಿವೇಚನೆ ಇರಬೇಕು. ಆ ವಿವೇಚನೆ ಹೇಗಿರಬೇಕು, ಕೋಮುವಾರು ಆಧಾರದ ಮೇಲೆ, ಜಾತಿಯ ಆಧಾರದ ಮೇಲೆ ಇಂಜಿನಿಯರಿಂಗ್ ಕಾಲೇಜುಗಳು, ಮೆಡಿಕಲ್ ಕಾಲೇಜುಗಳನ್ನು ಕೊಟ್ಟುಕೊಂಡು ಹೋದರೆ, ಇಂತಹ ಪರಿಸ್ಥಿತಿ ಬಂದೇಬರುತ್ತದೆ. ಇಲ್ಲಿ ಈ ರೀತಿ ಬಂದು, ಇಂತಹ ಘಟನೆ ನಡೆದಿದೆ, ಇನ್ನೊಂದು ಕಡೆ ಇನ್ನೊಂದು ರೀತಿ ಬರಬಹುದು. ಆದುದರಿಂದ ಸರ್ಕಾರದವರು ಈಗಲೂ ಯೋಚನೆ ಮಾಡ ಬೇಕು. ಮುಖ್ಯವಾಗಿ ಪೋಲೀಸ್ ಧೋರಣೆ ಬಗ್ಗೆ ಯೋಚನೆ ಮಾಡಬೇಕು. ಮೂಲಭೂತವಾಗಿ ಹೇಳಬೇಕಾದರೆ, ಇದನ್ನು ಪೊಲಿಟಿಸೈಸ್ ಮಾಡುವುದು ಸರಿಯಾದುದಲ್ಲ, ರಾಜಕೀಯ ಬಣ್ಣ ಕೊಡು ವುದು ಸರಿಯಾದುದು ಅಲ್ಲ. ಹಿಂದೂ ಸಿಕ್ ಐಕ್ಯತೆ, ಮೈನಾರಿಟಿ ರೈಟ್ಸ್ ಪ್ರೊಟೆಕ್ಟ್ ಮಾಡುವುದು ಬಹಳ ಮುಖ್ಯ. ಮೈನಾರಿಟಿ ರೈಟ್ಸ್ ಪ್ರೊಟೆಕ್ಟ್ ಮಾಡದೇಹೋದರೆ ನಾವು ಇದ್ದೂ ಪ್ರಯೋಜನ ಇಲ್ಲ. ನನಗನಿಸುತ್ತದೆ. ಈ ಮೈನಾರಿಟಿ ರೈಟ್ಸ್ ಪ್ರೊಟೆಕ್ಟ್ ವಿಚಾರದಲ್ಲಿ ಇದು ಒಂದೇ ಘಟನೆ ಅಲ್ಲ. ಈ ವಿಚಾರದಲ್ಲಿ ಸರ್ಕಾರದ ವೈಫಲ್ಯ ಕಂಡುಬರುತ್ತದೆ. ಬೇರೆ ಬೇರೆ ರಿಪೋರ್ಟ್‌ಗಳನ್ನು ನೋಡಿದರೆ ಗೊತ್ತಾಗುತ್ತದೆ. ಗಣೇಶ ಉತ್ಸವ ಬಂದಾಗ, ಬೇರೆ ಬೇರೆ ಉತ್ಸವಗಳು ಬಂದಾಗ, ಅನೇಕ ಕಡೆ ಇಂತಹ ಘಟನೆಗಳು ಆಗಿ, ಹೊಗೆಯಾಡುತ್ತಿರುತ್ತದೆ, ಆಗಾಗ್ಗೆ ಗಲಾಟೆಗಳು ನಡೆದಿವೆ. ದಲಿತರ ಮೇಲೆ ಸಿಕ್ಕಾಪಟ್ಟೆ ದೌರ್ಜನ್ಯಗಳು ನಡೆಯುತ್ತವೆ. ತಾವು ನೇರವಾಗಿ ಇದಕ್ಕೂ, ಅದಕ್ಕೂ ಸಂಬಂಧ ಇಲ್ಲ ಎಂದು ಹೇಳಬಹುದು. Unless and until the Government has a will a political will to see that the minorities, rights are respected and also to see that whatever is decided even at the highest level,

is implemented, Otherwise, there is no point in discussing about it. ನಾನು ಈ ವಿಚಾರವನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಅದು ತಮಗೆ ಗೊತ್ತಿದೆ. ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನಲ್ಲಿ ಇದನ್ನೆಲ್ಲಾ ಡಿಸ್ಕಸ್ ಮಾಡಿಕೊಂಡು ಬಂದಿದ್ದಾರೆ. ಬೊಮ್ಮಾಯಿಯವರು ಹೋಗಿದ್ದರೋ ಇಲ್ಲವೋ ಗೊತ್ತಿಲ್ಲ, ರಾಮಕೃಷ್ಣ ಹೆಗಡೆಯವರು ಹೋಗಿದ್ದರು, ಬೇರೆಯವರು ಹೋಗಿದ್ದರು, ಅಲ್ಲಿ ಚರ್ಚೆ ಮಾಡಿಕೊಂಡು ಬಂದಿದ್ದಾರೆ. ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನಲ್ಲಿ ತೀರ್ಮಾನ ಮಾಡುತ್ತಾರೆಯೇ ವಿನಹ ಅದು ಯಾವುದನ್ನೂ ಜಾರಿಗೆ ತರುವುದಿಲ್ಲ. ಬೀದರ್ ಘಟನೆಗೂ ಇದಕ್ಕೂ ಸಂಬಂಧ ಇದೆ. ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನಲ್ಲಿ ತೀರ್ಮಾನವಾದುದನ್ನು ಇಲ್ಲಿ ಜಾರಿಗೆ ತೆಗೆದುಕೊಂಡು ಬನ್ನಿ. ಆಗ ನಮ್ಮ ರಾಜ್ಯದಲ್ಲಿ ಈ ಪ್ರಶ್ನೆಯೇ ಬೇರೆಯಾಗುತ್ತದೆ. ರಾಜಕೀಯ ಹಾಗೂ ಜಾತಿಯ ಜೊತೆ ಸಂಬಂಧ ಕಲ್ಪಿಸಬಾರದೆಂದು ಹೇಳಿದ್ದಾರೆ. ಆದರೆ ಇಲ್ಲಿ ಸಂಬಂಧ ಕಲ್ಪಿಸುತ್ತಿದ್ದೀರಿ. ಮೊನ್ನೆ ತಾನೆ ಕಾವೇರಿ ನದಿಗೆ ತೆಂಗಿನ ಕಾಯಿ ಹಾಕಿ ಪೂಜೆ ಮಾಡಿಕೊಂಡು ಬಂದಿರಿ. ಹಿಂದಿನ ಮುಖ್ಯಮಂತ್ರಿಗಳೂ ಹೋಗಿ ಬಂದಿದ್ದರು. ಬ್ರಿಡ್ಜ್ ಓಪನ್ ಮಾಡಬೇಕಾದರೆ ಟೇಪ್ ಕತ್ತರಿಸಿ ಪೂಜೆ ಮಾಡಿಕೊಂಡು ಬರುತ್ತೀರಿ. ವಿಧಾನಸೌಧದಲ್ಲೇ ಪ್ರತಿ ಶುಕ್ರವಾರ ಪೂಜೆ ನಡೆಯುತ್ತದೆ, ಎಲ್ಲರೂ ದುಡ್ಡು ಕೊಡಬೇಕು. ಜಾತಿಯ ವ್ಯವಸ್ಥೆಯನ್ನು ಬೆಳೆಸುವುದಕ್ಕೆ ಅನುಗುಣವಾಗಿ ನಡೆದುಕೊಳ್ಳುವ ಪರಿಸ್ಥಿತಿ ಇನ್ನೂ ಕೂಡಾ ಇದೆ. ಇದನ್ನು ಮುಕ್ತಾಯ ಮಾಡುವುದಕ್ಕೆ "ರಾಯಿಸ್ಟ್" ಎಂದು ಹೇಳಿಕೊಳ್ಳುವ ನೀವು ಏನು ಮಾಡುತ್ತೀರೋ ನೋಡೋಣ. ಮಾನ್ಯ ಮೊಯಿಲಿಯವರು ಒಂದು ಮಾತನ್ನು ಹೇಳಿದರು. ಅದನ್ನು ಇನ್ನೂ ಸ್ಪಷ್ಟವಾಗಿ ಹೇಳಬೇಕು. ಪೋಲೀಸ್ ದಳದಲ್ಲಿ ಮೈನಾರಿಟೀಸ್‌ಗೆ ಅದಷ್ಟು ಮಟ್ಟಿಗೆ ಅವಕಾಶ ಮಾಡಿಕೊಡಬೇಕು. ನಮ್ಮ ಕರ್ನಾಟಕದಲ್ಲಿ ಎಷ್ಟರಮಟ್ಟಿಗೆ ಇದನ್ನು ಮಾಡಿಕೊಟ್ಟಿದ್ದೀರಿ ? ಸೆನ್ಸಿಟೀವ್ ಏರಿಯಾಸ್‌ನಲ್ಲಿ ಮೈನಾರಿಟೀಸ್‌ಗೆ ಅವಕಾಶ ಮಾಡಿಕೊಡಬೇಕೆಂದು ಇದೆ. ಸೆನ್ಸಿಟೀವ್ ಏರಿಯಾಸ್‌ನಲ್ಲಿ ಇದನ್ನು ಎಷ್ಟುದೂರ ಜಾರಿ ಮಾಡಿದ್ದೀರಿ ? ಇನ್ನೊಂದು ವಿಚಾರ ಏನೆಂದರೆ if there is any communal clash the D. C. must be held responsible the Minister must be held responsible. The D. C. must be held responsible. He must quit. He must be made to resign or he must be sacked. That is the position, I do not know how far this Government is going to do in regard to this position. ಈಗ ಆಗಿರುವುದಕ್ಕೆ ಏನೋ ಎಕ್ಸ್‌ಪ್ಲನೇಷನ್ ಕೊಟ್ಟುಕೊಂಡು ಹೋಗಬಹುದು. ಎನ್‌ಕ್ವೈರಿ ಮಾಡುತ್ತೇವೆ, ಅದು ಮಾಡುತ್ತೇವೆ, ಇದು ಮಾಡುತ್ತೇವೆ ಎಂದು ಹೇಳಬಹುದು. ಆದರೆ ನಡೆದಿರುವುದನ್ನು ಮುಚ್ಚಿ ಬಳಿದು ಮುಚ್ಚುವುದಕ್ಕೆ ಆಗುವುದಿಲ್ಲ. ಈಗ ನಡೆದಿರುವುದರ ಆಧಾರದ ಮೇಲೆ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಕಡೆಯದಾಗಿ ಒಂದು ವಿನಂತಿ ಏನೆಂದರೆ, ಈ ದಿನ ಅಲ್ಲಿ ಒಂದು ಪೀಸ್ ಕಮಿಟಿ ಮಾಡಿರುತ್ತೀರಿ, ಇದೊಂದು ಅಲ್ಲದೆ. ಇನ್ನೊಂದು ಗುಡ್ ವಿಲ್ ಮಿಷನ್ ಎಂದು ಮಾಡಿರುತ್ತಾರೆ. ಈ ಗುಡ್ ವಿಲ್ ಮಿಷನ್‌ನಲ್ಲಿ ಯಾರುಯಾರನ್ನೋ ಸೇರಿಸಿದ್ದಾರೆ. ನಮ್ಮ ರಾಜ್ಯದವರು ಅದರಲ್ಲಿ ಯಾರೂ ಇಲ್ಲ. ಹೊರರಾಜ್ಯದವರನ್ನೆಲ್ಲಾ ಅದರಲ್ಲಿ ಸೇರಿಸಿದ್ದಾರೆ. ಗುಜರಾಲ್ ಅವರನ್ನು ಅದರಲ್ಲಿ ಸೇರಿಸಿದ್ದಾರೆ. ನನಗೆ ಹೆಸರೂ ಸಹ ಸರಿಯಾಗಿ ಗೊತ್ತಿಲ್ಲ. ಎಸ್. ಜಿ. ಪಿ. ಸಿ. ಯವರನ್ನು ಸೇರಿಸಿದ್ದಾರೆ. ಬೇರೆಯವರೂ ಇದ್ದಾರೆ. ಇದನ್ನು ಏತಕ್ಕೆ ಮಾಡಿದರು ಎಂದು ನನಗಂತೂ ಅರ್ಥವಾಗುತ್ತಿಲ್ಲ. What is the good-will mission ? Is it that all the Sikhs who are there in this Committee can carry weight and convince those people who are there in Bidar that they should never flight. Or is it on behalf of the Government of Karnataka or on behalf of the Chief Minister, they are going to tell that everybody should be alright. I do not know where there was the necessity of such a good-will mission. ಇನ್ನೊಂದು ಏನು ಮಾಡಬಹುದು ಎಂದರೆ, on the other hand you should have taken into confidence all the political parties in Karnataka. ಜಾತ್ಯಾತೀತ ಪಕ್ಷಗಳು ಯಾವುವು ಇವೆ ಅದೆಲ್ಲವನ್ನೂ ಕೂಡಾ ತಾವು ವಿಶ್ವಾಸಕ್ಕೆ ತೆಗೆದುಕೊಂಡು ದೊಡ್ಡ ರೀತಿಯಲ್ಲಿ ಅಲ್ಲಿ ಪೊಲಿಟಿಕಲ್ ಕ್ಯಾಂಪೇನ್ ಬೇಕಾದರೆ ಮಾಡಿ. ಈಗ ಕೂಡಾ ಕಾಲ ಮಿಂರಿ ಹೋಗಿಲ್ಲ. ಪೊಲಿಟಿಕಲ್ ಕ್ಯಾಂಪೇನ್ ಮಾಡಿರಿ. ಆಗ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ಮುಂದೆ ಬರುವಂತಹದ್ದನ್ನು ತಡೆಗಟ್ಟುವುದಕ್ಕೆ ಸಾಧ್ಯ ಆಗುತ್ತದೆ. ಜನಗಳಿಗೆ ಸಮಾಧಾನವಾಗುತ್ತದೆ. ಇದನ್ನು ಮಾಡಿ. ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನಲ್ಲಿ ಆಗಿರುವ ತೀರ್ಮಾನ

ಗಳನ್ನು ಜಾರಿಗೆ ತೆಗೆದುಕೊಂಡು ಬನ್ನಿ. ಈಗ ಅಲ್ಲಿ ಪೋಲೀಸರನ್ನು ಸಸ್ಪೆಂಡ್ ಮಾಡುವುದು ಬಹಳ ಮುಖ್ಯವಾದುದು. ಏನೇನು ಸ್ಟೇಟ್‌ಮೆಂಟ್‌ಗಳು ಬಂದಿದೆ ಎಂಬುದನ್ನು ನೋಡಿ ಅದರ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಂಡು, ಇನ್ನೂ ಹೆಚ್ಚಿನ ವಿವರಗಳು ಇದ್ದವು, ಆದರೆ ತಾವು ಬೆಲ್ ಹೊಡೆದಿದ್ದೀರಿ, ಆದ್ದರಿಂದ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ, ಇನ್ನೊಂದು ಸಲ ಅವಕಾಶ ಕೊಟ್ಟಾಗ ಹೇಳುತ್ತೇನೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಭಾಧ್ಯಕ್ಷರೇ, ಬೀದರ್‌ನಲ್ಲಿ ನಡೆದಂಥ ಗಲಾಟೆ ನಮ್ಮ ಕರ್ನಾಟಕ ರಾಜ್ಯಕ್ಕೆ ಕಳಂಕ ತರುವಂತಹ ಘಟನೆಯಾಗಿದೆ. ದುರಾದೃಷ್ಟವಶಾತ್ ಆರು ಜನ ಸತ್ತಿದ್ದಾರೆ, ನಲವತ್ತು ಜನರಿಗೆ ತೀವ್ರವಾದ ಗಾಯಗಳಾಗಿವೆ. ಪಂಜಾಬಿ ಜನರ ಆಸ್ತಿಯನ್ನು ಹೋಟೆಲ್ಸ್ ಮತ್ತು ಅಂಗಡಿಗಳನ್ನು ಸುಡಲಾಗಿದೆ. ಇದಕ್ಕೆ ಏನು ಕಾರಣ ಎಂಬುದನ್ನು ಯೋಚನೆ ಮಾಡುವುದಕ್ಕಿಂತ ಮುಂಚೆ, ನಮ್ಮ ಪೋಲೀಸ್ ವ್ಯವಸ್ಥೆ ಎಷ್ಟು ಕೆಟ್ಟಿದೆ ಎಂಬುದನ್ನು

೨.೦೦ ಪಿ. ಎಂ.

ಸ್ಪಷ್ಟವಾಗಿ ಇದರಿಂದ ಕಾಣಬಹುದು. ಈಗ ಸಾಧಾರಣವಾಗಿ ಕಳೆದ ೨–೩ ತಿಂಗಳುಗಳಿಂದ ಈ ಸಿಖ್ ಜನಾಂಗದವರಿಗೂ ಬೀದರ್‌ನಲ್ಲಿರುವ ಹಿಂದೂ ಜನಾಂಗದವರಿಗೂ ಮನಸ್ತಾಪ ಇತ್ತು. ಇದರಲ್ಲಿ ಇದರಲ್ಲಿ ಮುಖ್ಯವಾದ ಕಾರಣವೇನೆಂದರೆ ಅಲ್ಲಿ ಈ ಸಿಖ್ ಜನಾಂಗದವರಿಗೆ ಸೇರಿದ ಮತ್ತು ಹಿಂದು ಜನಾಂಗದವರಿಗೆ ಸೇರಿದ ವಿದ್ಯಾಸಂಸ್ಥೆಗಳಿವೆ ನಾವು ಮೆಡಿಕಲ್ ಕಾಲೇಜು ಪಡೆದು ಲಾಭ ಮಾಡಿಕೊಳ್ಳೋಣ. ಇಲ್ಲದಿದ್ದರೆ ಸಿಖ್ ಜನಾಂಗದವರು ಇಲ್ಲಿಗೆ ಬಂದು ಲಾಭ ಮಾಡಿಕೊಂಡು ಹೋಗುತ್ತಾರೆನ್ನುವ ಅಭಿಪ್ರಾಯವೂ ಇದೆ. ಇಲ್ಲಿ ಪ್ರವೇಟ್ ಮ್ಯಾನೇಜ್‌ಮೆಂಟ್ಸ್ ಬೇಕಾದಷ್ಟು ಇವೆ. ತಮಗೂ ಗೊತ್ತಿದೆ. ನಾನು ಆ ಹೆಸರುಗಳನ್ನು ಬೇಕಾದರೂ ಹೇಳಬಹುದು ಆದರೆ ಈಗ ಅವರ ಹೆಸರುಗಳನ್ನು ಹೇಳುವುದು ಬೇಡ. ನೀವು ಒಂದೇ ರೀತಿಯಲ್ಲಿ ತಪ್ಪು ಮಾಡಿದ್ದೀರಿ. ಇದು ಮಾನ್ಯ ಮುಖ್ಯಮಂತ್ರಿಗಳಿಗೂ ಗೊತ್ತಿದೆ. ಮಾನ್ಯ ಅಧ್ಯಕ್ಷರೇ, ನಿಮಗೂ ಇದು ಚೆನ್ನಾಗಿ ಗೊತ್ತಿದೆ. ಅಲ್ಲಿ ಪ್ರವೇಟ್ ಇಂಜನಿಯರಿಂಗ್ ಕಾಲೇಜು ವಿದ್ಯಾರ್ಥಿಗಳಿಂದ ಸಾಕಷ್ಟು ಸಲ ದೂರುಗಳು ಬಂದವು. ಅಲ್ಲಿ ಅನೇಕ ಖಾಸಗಿ ಮ್ಯಾನೇಜ್‌ಮೆಂಟ್ಸ್ ಇವೆ. ಅವು ಯಾವುವೆಂದರೆ ಚನ್ನಬಸವೇಶ್ವರ, ಕಾಶೀನಾಥ, ಮತ್ತು ಗುರುನಾನಕ್ ಸೊಸೈಟಿ. ಇವರಲ್ಲಿ ಅವರಿಗೆ ಮೊದಲಿನಿಂದಲೂ ವ್ಯಾಜ್ಯ ಇತ್ತು. ಅವರಲ್ಲಿ ಒಂದೇ ಒಂದು ಉದ್ದೇಶ ಇತ್ತು. ಇದು ಸಿಕ್ ಮ್ಯಾನೇಜ್‌ಮೆಂಟಿಗೆ ಹೋಗಬಾರದು. ನಮಗೇ ಕೊಡಲಿ, ನಾವೇ ಜಾಸ್ತಿ ಹಣ ಸಂಪಾದನೆ ಮಾಡಿಕೊಳ್ಳೋಣ ಎಂಬುದು. ಇದು ಬಂದಿದ್ದು ನಮ್ಮ ಸರ್ಕಾರದ ಪಾಲಿಸಿಯಿಂದ ಈ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅಲ್ಲಿ ಇರತಕ್ಕಂಥ ಅವ್ಯವಸ್ಥೆಯಿಂದ ಈ ರೀತಿ ಆಯಿತು ಅಷ್ಟೆ. ಅಲ್ಲಿ ಸುಮಾರು ೨೫ ಸಿಖ್ ಫ್ಯಾಮಿಲೀಸ್ ಇವೆ ಎಂದು ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಆದರೆ ಅಲ್ಲಿಗೆ ಈಗ ಸುಮಾರು ಒಂದು ಸಾವಿರ ಜನ ಬಂದಿದ್ದಾರೆ. ಕ್ಯಾಪಿಟೇಶನ್ ಫೀ ಕೊಟ್ಟು ಇಲ್ಲಿಗೆ ಬಂದಿದ್ದಾರೆ. ಪಂಜಾಬಿನಲ್ಲಿ ದೊಡ್ಡ ದೊಡ್ಡ ಸಿಖ್ ಜನಾಂಗದ ಶಾಹುಕಾರರ ಮಕ್ಕಳು ಇಲ್ಲಿಗೆ ಬಂದರು. ಇಲ್ಲಿ ಇದ್ದ ಅವ್ಯವಸ್ಥೆಯನ್ನು ಪೋಲೀಸಿನವರು ಮೊದಲೇ ಬಲಿ ಹಾಕಿದ್ದರೆ ಈಗ ಈ ಪ್ರಶ್ನೆ ಉದ್ಭವವಾಗುತ್ತಿರಲಿಲ್ಲ, ಅವರು ಗಣೇಶ ಚತುರ್ಥಿ ಸಮಯದಲ್ಲಿ ಸುಮಾರು ೬ ಜನರನ್ನು ಕೊಲೆ ಮಾಡುವಂತಹ ಪ್ರಮೇಯ ಬರುತ್ತಿರಲಿಲ್ಲ. ಅದೂ ಅಮಾನುಷವಾದ ರೀತಿಯಲ್ಲಿ ಕೊಲೆ ಮಾಡಿದರು. ಅದೂ ಮೋಟಾರ್ ಸೈಕಲ್‌ನ್ನು ಡಿಕ್ಕಿ ಹೊಡೆಸಿ ಸಾಯಿಸಿದ್ದಾರೆ, ಮೋಟಾರ್ ಸೈಕಲ್‌ನ್ನು ಡಿಕ್ಕಿ ಹೊಡೆಸಿ ಸಾಯಿಸಿದ್ದಾರೆ, ಮೋಟಾರ್ ಸೈಕಲ್‌ನ್ನು ಅವರ ಮೇಲೆ ಹತ್ತಿಸಿ ಸಾಯಿಸಿದ್ದರೂ ಪೋಲೀಸಿನವರು ಏನೂ ಮಾಡಲಿಲ್ಲ. ಅವರಿಗೆ ಸುಮ್ಮನೆ ಟೈಮ್ ಕೊಟ್ಟರು. ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದರ ಹಿಂದೆ ಪ್ರವೇಟ್ ಮ್ಯಾನೇಜ್‌ಮೆಂಟ್ಸ್ ಇವೆ. ಅಲ್ಲಿ ಹೊಸದಾಗಿ ಬಂದ ಶಿವಸೇನೆ, ಆರ್. ಎಸ್. ಎಸ್. ಡವರು ಇದರ ಹಿಂದೆ ಇದ್ದಾರೆ.......

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಈ ರೀತಿ ಸಂಘ ಸಂಸ್ಥೆಗಳ ಮೇಲೆ ಆರೋಪ ಮಾಡಿದರೆ ಹೇಗೆ ನಾವೆಲ್ಲ ಸೇರಿ ಅಲ್ಲಿ ಶಾಂತಿ ನೆಲಸುವಂತೆ ಮಾಡಲು ಗಂಭೀರವಾಗಿ ಯೋಚನೆ ಮಾಡುತ್ತಿದ್ದೇವೆ. ಅಲ್ಲಿ ಕಮ್ಯುನಿಸ್ಟ್‌ನವರು ಮಾಡಿಸಿದ್ದಾರೆಂದು ನಾವು ಹೇಳುವುದಕ್ಕೆ ಆಗುತ್ತದೆಯೇ? ಇಲ್ಲ ಕಾಂಗ್ರೆಸ್ಸಿನವರು ಇದರ ಹಿಂದೆ ಇದ್ದಾರೆಂದು ಹೇಳುವುದಕ್ಕೆ ಆಗುತ್ತದೆಯೇ ? ಅಲ್ಲಿ ಶಾಂತಿ ವಾತಾವರಣ ಸೃಷ್ಟಿ ಮಾಡೋಣವೆಂದು ನಾಲ್ಲ ಯೋಚನೆ ಮಾಡುತ್ತಿರುವಾಗ ಈ ರೀತಿ ಗಂಭೀರವಾದ ಆರೋಪ ಮಾಡುವುದು ಸರಿಯಲ್ಲ.

† ಈ ಚಿಹ್ನೆ ಸಂಬಂಧ ಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಕಮ್ಯುನಿಸ್ಟ್‌ನವರು ಮಾಡಿದ್ದರೆ ತಾವೂ ಹೇಳಿ. ನಾನು ಬೇಡವೆಂದು ಹೇಳುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ದಯಮಾಡಿ ಆ ರೀತಿ ಹೇಳಬೇಡಿ. ಅದು ಸರಿಯಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಇಲ್ಲಿ ನೋಡಿ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಒಂದು ವರದಿ ಬಂದಿದೆ. ಮತ್ತು ಲಂಕೇಶ್ ಪತ್ರಿಕೆಯ ನಜೀರ್‌ರವರು ಸಹ ಒಂದು ವರದಿ ಕೊಟ್ಟಿದ್ದಾರೆ. ಅದನ್ನೆಲ್ಲಾ ನಾನಿಲ್ಲಿ ಕೋಟ್ ಮಾಡುತ್ತೇನೆ. ಇದರ ಜೊತೆಗೆ ನಮ್ಮ ಸ್ನೇಹಿತರು ಕೆಲವರು ಹೋಗಿ ನೋಡಿಕೊಂಡು ಬಂದು ನನಗೆ ಡಿಟೇಲ್ ಆಗಿ ಬರೆದು ಕೊಟ್ಟಿದ್ದಾರೆ. ಅದನ್ನೇ ನಾನಿಲ್ಲಿ ಹೇಳುತ್ತಿದ್ದೇನೆ. ಮಾನ್ಯ ಸದಸ್ಯನಿಯವರಾದ ನಾಗರತ್ನಮ್ಮನವರು ಹೋದ ಹಾಗೆ ನಾನೇನು ಹೋಗಿ ನೋಡಿಕೊಂಡು ಬಂದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀವೇತಕ್ಕೆ ಹೋಗಲಿಲ್ಲ. ಹೋಗಿಬರಬೇಕಾಗಿತ್ತು.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಇಲ್ಲಿ ಒಂದೇ ಒಂದು ವಿಷಯ ಹೇಳುತ್ತೇನೆ. ಅಲ್ಲಿ ಪೋಲೀಸಿನವರು ಏನೂ ಕೆಲಸ ಮಾಡಲಿಲ್ಲವೆಂದು ಊಹಿಸಬಹುದು. ಸಿಖ್ ಜನಾಂಗದವರು ಪಂಜಾಬಿನಲ್ಲಿ ಮಾಡುತ್ತಿರುವುದನ್ನು ನಾವೆಲ್ಲಾ ಖಂಡಿಸಬೇಕು. ಅಲ್ಲಿ ಸಿಖ್ ಜನಾಂಗದವರೆನ್ನೇ ನೂರಕ್ಕೆ ಎಪ್ಪತ್ತೈದು ಜನರನ್ನು ಕೊಲ್ಲುತ್ತಿದ್ದಾರೆ. ಅದು ಒಳ್ಳೆಯದೆಂದು ನಾನು ಹೇಳುವುದಿಲ್ಲ. ಆದರೆ ಬೀದರ್‌ನಲ್ಲಿ ಆಗಿರುವಂತಹದ್ದನ್ನು ಯಾರೇ ಮಾಡಿರಲಿ, ಅದನ್ನು ನಾವು ನಿಜವಾಗಿಯೂ ಖಂಡಿಸಲೇ ಬೇಕಾಗುತ್ತದೆ. ಬೀದರ್‌ನಲ್ಲಿರುವ ಗುರುನಾನಕ್ ಮಂದಿರಕ್ಕೆ ಒಂದು ಚರಿತ್ರಾರ್ಹವಾದ ಇತಿಹಾಸ ಇದೆ. ಅಲ್ಲಿ ಒಂದು ಕಾಲೇಜು ಸ್ಥಾಪನೆ ಮಾಡಿದ್ದರಿಂದ ಇದು ಶುರುವಾಯಿತು. ಅವರ ವಿರುದ್ಧ ನ್ಯಾವಿ ಗ್ರೂಪ್ ಒಂದು ಬೀದರ್‌ನಲ್ಲಿ ಹುಟ್ಟಿಕೊಂಡು ಅದರಲ್ಲಿ ದೊಡ್ಡ ದೊಡ್ಡ ಸಾಹುಕಾರರ ಮಕ್ಕಳು ಸೇರಿಕೊಂಡು ಇವರಿಗೆ ತೊಂದರೆ ಕೊಡುವುದಕ್ಕೆ ಶುರು ಮಾಡಿದರು. ಅದು ಸರ್ಕಾರಕ್ಕೂ ಗೊತ್ತಿತ್ತು. ಎರಡು ಮೂರು ತಿಂಗಳಿನಿಂದ ಅದು ಕಂಟಿನ್ಯುಯಸ್ ಆಗಿ ಜರುಗುತ್ತಿತ್ತು. ೧೫ ಮತ್ತು ೧೬ನೇ ತಾರೀಕು ಲೈಸನ್ಸ್ ಕೂಡ ಕೊಟ್ಟಿದ್ದರು. ಅಲ್ಲಿ ಮೋಟಮ್ ಆಗಿ ೬ ಗಂಟೆಗೆ ನಾವು ಮರ್ಡರ್ ಮಾಡುತ್ತೇವೆ ಪೋಲೀಸಿನವರು ಬರಬಾರದು, ಆರೂವರೆ ಗಂಟೆಗೆ ಲೂಟಿ ಮಾಡುತ್ತೇವೆ ಎಂದು ಹೇಳಿ ಲೂಟಿ ಮಾಡಿದರು, ಮನೆಗಳಿಗೆ ನುಗ್ಗಿ ಟಿ. ವಿ. ಗಳು, ವೀಸಿಆರ್‌ಗಳನ್ನು ಎತ್ತಿಕೊಂಡು ಹೋದರು. ಅವುಗಳನ್ನು ಈಗ ಪೋಲೀಸಿನವರು ರಿಕವರ್ ಮಾಡಿಕೊಂಡಿದ್ದಾರೆ. ಕುರ್ಚಿಗಳನ್ನು ಕೂಡ ಎತ್ತಿಕೊಂಡು ಹೋದರು. ಆದರೂ ಕೂಡ ಯಾರು ಅಡ್ಡಿ ಮಾಡಲಿಲ್ಲ.' ಆಮೇಲೆ ಡಿ.ಐ.ಜಿ. ಪಾವಟೆಯವರು ಕೆ. ಎಸ್. ಆರ್. ಪಿ. ಯನ್ನು ತೆಗೆದುಕೊಂಡು ಬಂದರು ಪಾವಟೆಯವರು ೮೦ ಕಿಲೋ ಮೀಟರ್‌ನಿಂದ ಬರುವ ಹೊತ್ತಿಗೆ ಎಲ್ಲಾ ಲೂಟಿ ಆಗಿ ಹೋಗಿತ್ತು. ೧೪ನೇ ತಾರೀಕು ಗಲಾಟೆ ಶುರು ಆಗಿ ಇಷ್ಟೆಲ್ಲಾ ಆದರೂ ಯಾರೂ ಸಮಯಕ್ಕೆ ಸರಿಯಾಗಿ ರಕ್ಷಣೆಗೆ ಬರಲಿಲ್ಲ. ಸಿಕ್ ಸಮುದಾಯದ ವಿದ್ಯಾರ್ಥಿಗಳು ಪುನಃ ವ್ಯಾಸಂಗವನ್ನು ಮುಂದುವರಿಸುವುದಕ್ಕೆ ಅಲ್ಲಿಗೆ ಬರಬೇಕಾದರೆ ಅವರ ರಕ್ಷಣೆ ಬಗ್ಗೆ ಒಂದು ನಂಬಿಕೆ ಅವರಿಗೆ ಬರಬೇಕಾಗುತ್ತದೆ. ಅದಕ್ಕೋಸ್ಕರ ಮಾನ್ಯ ಬೊಮ್ಮಾಯಿಯವರು ಕ್ರಮ ತೆಗೆದುಕೊಳ್ಳಬೇಕು. ಇನ್ನು ಎರಡನೆಯದಾಗಿ, ನನ್ನ ಸೀರಿಯಸ್ ಅಬ್ಜೆಕ್ಷನ್ ಏದರೆ, ಅದನ್ನು ನಾನು ಪೂರ್ಣವಾಗಿ ಖಂಡಿಸುತ್ತೇನೆ. ಪಂಜಾಬಿನಲ್ಲಿ ದಿನನಿತ್ಯ ನೂರಾರು ಜನರ ಕೊಲೆಗಳಾಗುತ್ತಿವೆ. ಅದರ ಕಡೆ ಸರಿಯಾಗಿ ಗಮನ ಹರಿಸದೇ ಇಲ್ಲಿಗೆ ಮಾತ್ರ ಕೇಂದ್ರ ಸರ್ಕಾರದ ಮಂತ್ರಿಯವರನ್ನು ಕಳುಹಿಸಿ ಕೊಟ್ಟಿದ್ದು ಬಹಳ ಖಂಡನೀಯ. (ಕೇಂದ್ರ ಸರ್ಕಾರದ ಮಂತ್ರಿಯವರೊಬ್ಬರು ಬೀದರ್ ಜಿಲ್ಲೆಯಲ್ಲಿ ನಡೆದ ಗಲಭೆಗಳನ್ನು ಪರಿಶೀಲನೆ ಮಾಡುವುದಕ್ಕೆ ಬಂದ ಬಗ್ಗೆ ಮಾನ್ಯ ವೆಂಕಟರಾಮಯ್ಯನವರು ಹೇಳಿದ್ದರಿಂದ, ಕಾಂಗ್ರೆಸ್ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು ಎದ್ದು ನಿಂತು ಯಾವ ವಿಷಯವೂ ಕೇಳದ ರೀತಿಯಲ್ಲಿ ಮಾತನಾಡುತ್ತಿದ್ದರು.)

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಪಂಜಾಬ್‌ನಲ್ಲಿ ೨೨ ಜನರನ್ನು ಒಂದೇ ಸಾರಿ ಸುಟ್ಟು ಹಾಕಿದರು. ಅಲ್ಲಿ ಹೋಗಿ ನೋಡದೆ, ಇಲ್ಲಿಗೆ ಏಕೆ ಅವರು ಬರಬೇಕಾಗಿತ್ತು ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮಗೆ ತಾಕತ್ ಇದ್ದರೆ ಅಲ್ಲಿಗೆ ಹೋಗಿ ಕೇಳಿ. ಅದನ್ನು ಬಿಟ್ಟು ಕೇಂದ್ರ ಸರ್ಕಾರದ ವಿಷಯವನ್ನು ಏಕೆ ಇಲ್ಲಿ ಎತ್ತುತ್ತೀರಿ ?

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಅದನ್ನು ನಾನು ಖಂಡಿಸುತ್ತೇನೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಈ ಗಲಭೆ ವಿಷಯವಾಗಿ ಎನ್‌ಕ್ವೈಯರಿ ಮಾಡುವುದಕ್ಕೆ ಒಬ್ಬ ಹೈಕೋರ್ಟ್ ಜಡ್ಜನ್ನು ಅಪಾಯಿಂಟ್ ಮಾಡಬೇಕು. ಇದರಲ್ಲಿ ಯಾರು ಯಾರು ತಪ್ಪಿತಸ್ಥರಿದ್ದಾರೋ ಅವರಿಗೆ ಶಿಕ್ಷೆಯಾಗಬೇಕು.

ಶ್ರೀ ಧರ್ಮಸಿಂಗ್.—ಪಂಜಾಬ್ ವಿಷಯವೇ ಬೇರೆ, ಬೀದರ್‌ನ ವಿಷಯವೇ ಬೇರೆ. ಅದನ್ನು ಇಲ್ಲಿ ಪ್ರಸ್ತಾಪ ಮಾಡಬಾರದು.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಹೇಳುತ್ತಿರುವುದೇನೆಂದರೆ, ಕೇಂದ್ರ ಸರ್ಕಾರದ ಮಂತ್ರಿಯವರನ್ನು ಇಲ್ಲಿಗೆ ಕಳುಹಿಸುವ ಅವಶ್ಯಕತೆ ಇರಲಿಲ್ಲ. ಏಕೆಂದರೆ, ಕೇಂದ್ರದ ಮಂತ್ರಿಯವರು ಬರುವ ಹೊತ್ತಿಗೆ ಗಲಾಟೆ ನಿಂತು ಹೋಗಿತ್ತು.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಕೇಂದ್ರ ಸರ್ಕಾರದ ಮಂತ್ರಿಯವರು ಅಲ್ಲಿಗೆ ಬರುವುದಕೆ ಬೊಮ್ಮಾಯಿಯವರು ಒಪ್ಪಬಾರದಾಗಿತ್ತು, ೧೫ನೇ ತಾರೀಕು ಆದ ಮೇಲೆ ಏನೂ ಗಲಾಟೆ ಆಗದೆ ಜನರು ಸಂತೋಷವಾಗಿ ಮತ್ತು ಶಾಂತಿಯುತವಾಗಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಗಲಾಟೆಯಾದ ತಕ್ಷಣ ಮುಖ್ಯ ಮಂತ್ರಿಯವರು ಸರ್ಕಾರದ ವತಿಯಿಂದ ಹೋಗಬೇಕಾಗಿತ್ತು. ಅದನ್ನೇಕೆ ತಾವು ಕೇಳಲಿಲ್ಲ ?

ಶ್ರೀ ಆರ್. ವೆಂಕಟರಾಮಯ್ಯ.—ಅದನ್ನೂ ನಾನು ಕೇಳುತ್ತೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಸೀನಿಯರ್ ಮೆಂಬರ್ ಆಗಿದ್ದೀರಿ. ಸಿ. ಪಿ. ಎಂ. ಪಕ್ಷದ ಲೀಡರ್ ಇದ್ದೀರಿ. ತಾವು ಇಲ್ಲಿ ಮಾತನಾಡಿದರೆ ಅದಕ್ಕೆ ಒಂದು ಗಂಭೀರತೆ ಇರಬೇಕು.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ನಾನು ಮಾತನಾಡುವಾಗ ನಮ್ಮ ಪಕ್ಷದ ಪಾಲಿಸಿಯನ್ನು ಮಾತ್ರ ಹೇಳುತ್ತಾ ಇದ್ದೇನೆ. ಏಜೆಂಟರು ನಾವಲ್ಲ, ನೀವು ಎಂದು ಹೇಳಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಿಮಗೆ ಡಾರ್ಜಲಿಂಗ್ ಅಗ್ರಿಮೆಂಟ್‌ಗೆ ಕೇಂದ್ರದ ಗೃಹ ಮಂತ್ರಿಗಳು ಬೇಕಾಯಿತು. ಆದರೆ ಬೀದರ್‌ಗೆ ಅವರು ಬರುವುದು ನಿಮಗೆ ಬೇಡವಾಯಿತು.

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಮಾತನಾಡುವಾಗ ಇತರರು ಹೀಗೆ ಅಡ್ಡಿ ಬರುವುದು ಸರಿಯಲ್ಲ. ಅವರು ನೀವು ಮಾತನಾಡುವಾಗ ನಿಮಗೆ ಅಡ್ಡಿ ಬರಲಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹಾಗಾದರೆ ಕೇಂದ್ರ ಸರ್ಕಾರದ ಗೃಹಮಂತ್ರಿಯವರಿಗೆ ಈ ಬಗ್ಗೆ ಜವಾಬ್ದಾರಿ ಇಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಅವರ ಅಭಿಪ್ರಾಯವನ್ನು ಹೇಳುತ್ತಿದ್ದಾರೆ, ಅದನ್ನು ಅವರು ಹೇಳಲಿ.....

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಡಾರ್ಜಲಿಂಗ್ ಅಗ್ರಿಮೆಂಟ್‌ಗೆ ಅವರ ಪಕ್ಷಕ್ಕೆ ಕೇಂದ್ರ ಸರಕಾರ ಬೇಕಾಯಿತು...

ಶ್ರೀ ಆರ್. ವೆಂಕಟರಾಮಯ್ಯ.—ನಿಮ್ಮ ರಾಜೀವ ಗಾಂಧೀಯವರ ಕಾಲದಲ್ಲಿ ಒಂದೂ ಸಮಸ್ಯೆಯೂ ಕೂಡ ಸೆಟಲ್‌ಮೆಂಟ್ ಆಗಲಿಲ್ಲ. ಶ್ರೀಲಂಕಾ ಮುಂತಾದ ಯಾವ ಸಮಸ್ಯೆಯೂ ಇತ್ಯರ್ಥವಾಗಲಿಲ್ಲ. ಆದರೆ ಗೂರ್ಖಾಲ್ಯಾಂಡ್ ಸಮಸ್ಯೆಯನ್ನು ನಾವು ಇತ್ಯರ್ಥ ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರು ಅವರ ಅಭಿಪ್ರಾಯವನ್ನು ಹೇಳುತ್ತಿದ್ದಾರೆ, ಹೇಳಲಿ...

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಕೇಳುವುದು ಇಷ್ಟೇ, ಈ ಪ್ರಕರಣದ ಬಗ್ಗೆ ಒಂದು ಜ್ಯುಡಿಶಿಯಲ್ ಎನ್‌ಕ್ವಯರಿ ಆಗಬೇಕು.

Secondly, the following points should be considered.

1) Is it not a fact that the police had the knowledge of the ill-feelings of the two communities ?

2) Is it not a fact that the entire thing is abett d by the private managements?

3) What is the role the Shivssena which has recently formed in this city ?

ಈ ಎಲ್ಲಾ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ಇದರ ಬಗ್ಗೆ ಒಂದು ಎನ್‌ಕ್ವಯರಿ ಮಾಡಿಸಿ ಅಲ್ಲಿ ಈ ಪ್ರಕರಣಕ್ಕೆ ಯಾರು ಜವಾಬ್ದಾರರಾಗಿದ್ದಾರೆ, ಅಂಥ ಅಧಿಕಾರಿಗಳು ಯಾರಿದ್ದಾರೆ ಅವರನ್ನು ಕೂಡಲೇ ಸಸ್ಪೆಂಡ್ ಮಾಡಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಒಂದು ನಿಮಿಷ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಧರ್ಮಸಿಂಗ್‌ರವರೇ, ಮೊದಲು ನಿಮಗೆ ಅವಕಾಶವನ್ನು ಕೊಟ್ಟಾಗ ನೀವು ಸದನದಲ್ಲಿ ಇದ್ದಿಲ್ಲ. ಈಗ ಮಾನ್ಯ ಮೊಹಮದ್ ಲೈಕುದ್ದೀನ್‌ರವರು ಮಾತನಾಡುತ್ತಾರೆ. ನಿಮಗೂ ಅನಂತರ ಅವಕಾಶ ಕೊಡುತ್ತೇನೆ. ನಾನು ಪದ್ಧತಿ ಪ್ರಕಾರವೇ ಎಲ್ಲರಿಗೂ ಅವಕಾಶವನ್ನು ಮಾಡಿಕೊಡುತ್ತೇನೆ. ಇದಕ್ಕೆ ಸಂಬಂಧಪಟ್ಟವರಿಗೆಲ್ಲಾ ಮಾತನಾಡಲು ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಧರ್ಮಸಿಂಗ್.—ನನಗೆ ಐದು ನಿಮಿಷಗಳ ಅವಕಾಶವನ್ನು ಮಾತ್ರ ಕೊಟ್ಟರೆ ಸಾಕು. ...

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ, ನಮ್ಮ ಪಕ್ಷದ ಪರವಾಗಿ ನಾಲ್ಕು ಜನರು ಹೆಸರನ್ನು ಕೊಟ್ಟಿದ್ದಾರೆ..

ಶ್ರೀ .ಕೆ .ಬಿ ಶಾಣಪ್ಪ.—ಅಧ್ಯಕ್ಷರೆ, ನನಗೆ ಅವಕಾಶವನ್ನು ಕೊಟ್ಟಿಲ್ಲ......

ಅಧ್ಯಕ್ಷರು.—ಮಾನ್ಯ ಶಾಣಪ್ಪನವರಿಗೆ ಕೂಡ ಆಗ ನಾನು ಅವಕಾಶ ಕೊಟ್ಟು ಹೆಸರು ಹೇಳಿದಾಗ ಎಲ್ಲೋ ಹೋಗಿದ್ದರು. ನಾನು ತಮಗೆ ಅನಂತರ ಅವಕಾಶವನ್ನು ಮಾಡಿಕೊಡುತ್ತೇನೆ.

> "When the Speaker decides to hear members no question as to whether consent should be given to the notice of an Adjournment motion under Rule 59 or to the notice of question of Privileg under Rule 190 of the Rules of Procedure and Conduct of Business in the Legislative Assembly, not more than three members who are signatories to the notice may make preliminary submissions."

ಹೀಗೆ ಈ ಪ್ರಕಾರ ನಿಮ್ಮ ಪಕ್ಷದವರು ಮೂರು ಜನರು ಈಗಾಗಲೇ ಮಾತನಾಡಿದ್ದಾರೆ. ಆದರೂ ಕೂಡ ಧರ್ಮಸಿಂಗ್‌ರವರಿಗೆ ಅವಕಾಶವನ್ನು ಮಾಡಿಕೊಡುತ್ತೇನೆ. ಈಗ ಮಾನ್ಯ ಲೈಕುದ್ದೀನ್‌ರವರು

ಮಾತನಾಡಲಿ, ಉಳಿದವರು ದಯವಿಟ್ಟು ಕುಳಿತುಕೊಳ್ಳಬೇಕು. ಮೊದಲು ಲೈಕುದ್ದೀನ್, ಆಮೇಲೆ ಬಸವರಾಜ್‌ಪಾಟೀಲ್ ಅತ್ತೂರ್. ಆಮೇಲೆ ಯಡಿಯೂರಪ್ಪ ಆಮೇಲೆ ಧರ್ಮಸಿಂಗ್ ಅವರು ಮಾತನಾಡಲಿ."

-ಗದ್ದಲ-

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಶಾಣಪ್ಪನವರು ಇಲ್ಲೇ ಇದ್ದರು. ಅವರೂ ಸಹಿ ಮಾಡಿದ್ದಾರೆ. ಅವರಿಗೆ ಅವಕಾಶ ಕೊಡಲೇಬೇಕು.

ಅಧ್ಯಕ್ಷರು.—ಅವರು ನಾನು ಕರೆದಾಗ ಆಬ್ಸೆಂಟ್ ಇದ್ದರು.

ಶ್ರೀ ಎಂ. ಎಸ್. ಕೃಷ್ಣನ್.—ಒಳ್ಳೇ ಮಾತಾಡಿದ್ರಿ ಸ್ವಾಮಿ, ಅವರು ಇಲ್ಲೇ ಇದ್ರು ಕಾಫಿ ಕುಡಿಯುವುದಕ್ಕೆ ಲಾಂಜ್‌ಗೆ ಹೋಗಬಾರದೇ ?

ಅಧ್ಯಕ್ಷರು.—ಆಯಿತು ಕೊಡುತ್ತೇನೆ.

ಶ್ರೀ ಗುರುಪಾದಪ್ಪ ನಾಗ್ಮರಹಳ್ಳಿ.—ನನಗೂ ಕೊಡಬೇಕು.

ಅಧ್ಯಕ್ಷರು.—ಕೊಡುತ್ತೇನೆ.

ಶ್ರೀ ಕಲ್ಯಾಣರಾವ್ ಎನ್ ಮೊಳ್ಕೇರಿ.—ನನಗೂ ಕೊಡಬೇಕು.

ಅಧ್ಯಕ್ಷರು.—ಕೊಡುತ್ತೇನೆ.

† SRI MOHAMED LAIQUDDIN (BIDAR).—Mr. Speaker Sir, Bidar has assumed greatest dimension in the country. It is not a problem of Bidar City itself, it is not a problem of the Karnataka State but it has become a national problem now. This is a most unfortunate and tragic incident that has taken place costing lives of Six Sikh students. 83 Houses were burnt and shops were also burnt in some area and four educational institutions were also burnt and gutted. Bidar town was supposed to be a most peaceful town since centuries together and after the recoganisation of the State and after the establishment of the Engineering colleges students from all over the country have come to the Bidar town because it was supposed to be a most peaceful city of the Karnataka State. It is most regrettable to note here that peace of the city has broken down and the police was sleeping over and when it was time to be woken, it has become only a silent spectator. The incident should have been nipped in the bud itself because there was a rumour that such an incident is going to take place on the occasion of the Ganesh Chaturthi day and much earlier to that Central police had cautioned that there is likelihood of criminal riots in Bidar town. I don't want to go into the deep but on 14th September, when the incident between Sikh students and the local people had taken place in that incident six boys were beatan and on the next day there was a reaction from the Sikh community and the boys collected in front of the college and broken the window screens of lorries. At that time the police came and police was able to push back all the students to the Engineering College premises.

---

†ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

Had the police taken proper steps to nip down this issue in the bud itself and the police was vigilant, the police could have arrested not only Sikh students but also the local persons who are responsible for beating the sikh students at that night. Leave that apart, On the morning of 15th when Sikh boys came out of hospital and became violent, equally the local mob was also violent and furious on the Sikh boys. The police was pushing them back in to the Engineering College campus. In that process the S. P. received minor injuries on his hand. There was every possibility of clashes between the 2 communities and the situation was tense. I received the information at about 11 A. M. I contacted Sri Surya Vamshi, M. P. and Sri V.S. Kushnoor M.P. and I told them that something is going to happen and the situa- is very bad. I also informed the DIG who in-turn rushed to the spot with 4 platoons after sometime. I leave at this stage. There after I went to the spot and saw that nearly 20 two wheelers were burnt near the Engineering College premises. There was 2 police Vans. There were S.P., Inspectors, SIs and the S.P. was also there. I requested the police to control the situation because the slightest incident may bring the City into flames. That was the caution given to the police by me. Then the SP went to Badarddin Colony. I also went there and I said, " please contiol the mob. At that point of time he told me that there are terrorists hinding here in the houses. Then I replied, you are at liberty to search any houes and criminals should be arrested, whosover he may be. Then I went to Gandhi Nagar colony and Engineering Campus and I requested them to help the police to bring the situation under control so that peace can be restored. Then Sikh students told me that they were forced to contribute for Ganesh festival. I said you have come here for a specific purpose *i.e.* for studies which you should do sincerely and all other things are secondary. I also informed them that all the locality people are with the Sikh students, then they became calm. As rightly pointed out by Sri Kharge when the police was able to curb down the acitivities of the students in the College premises, what next step they had taken to control the whole area. That is most imopartant. I remained there upto 2.30 P.M. and the police officers were there. Unfortunately the D.C. was out of station. He had been to Delhi for a training. The A.C. was representing him at a conference. Only the HQA and Tahsildar were there in the City. After requesting the police to maintain peace I went back to my house. Immediately after half-an-hour some boys rushed to my house and told me that their houses are burnt. Then I again rushed back to their locality where I saw their houses actually burning and flames coming. There was full of smoke. It has taken place only after I went back to my house. The moment I went back to my house the S.P. has removed 2 vans

which were positioned there and as a result of which the trouble started. Suddenly I asked the S.p., 'why did you remove those 2 vans'. Other officers were also there. I also scolded him saying that you have become a silent spectator and you are not taking any step to control the incident. I requested him to mobilise and spread whatever police force he has at his command. Suddenly he anwered me, Sir I am not having any force. I felt that it was very strange, because there were 50-60 constables around him. At that time only 10 constables were sufficient to drive back all the unwanted elements from that place. But he stood as a spectator rather enjoying it. I told him, these sikh students have come here to study and they are not anti-national and antisocial elements. If their houses are to be burnt then the houses situated across the road in front of their houses should also be burnt. The S. P. was not serious and he was rather enjoying the scene. That was the part played by the S. P. and other officers. Thereafter what happened? All the house in Budaruddin colony, Gandhinagar localities were burnt. some 4 5 houses around my residential house were also burnt, 2 shops, a politechnic, the House of Sri Joga Singh, Bacha Singh were also burnt. At that time not a single police came to our rescue. Then I contacted the Chief Minister's house over telephone. I received the replay that the Chief Minister has gone to Krishna for a meeting. I informed the caller that the entire City is under flames and I also narrated the entire incident. The situation is very grim and unless action is taken immediately ther will be much more trouble in the City. I also asked him to note down this and inform the Chief Minister immediately in the meeting and the action taken should be informed to me at onceover telephone call. In the meanwhile, Sri Surya Vamshi and Kushnoor Mps contacted the Chief minister at about 10 P. M. and they also said that the Hone'ble Chief Minister is making arrangements to bring the city to peace. He also contacted the Central Home Secretary Sri Somaiah who in turn directed the State Home Secretary and DGP to control the situation. The entire 15th was the day of loot, arson and the day of killing and free for all since morning up to 7-30 P. M. in the evening. Only when DIG arrived at 7-30 P. M. some calm prevailed in the City, otherwise it would have gone to the next day or the other days also. Anyhow, when DIG came, there was a sense of security among the people. Had these precautionary measures taken by the local police itself, there would have been no need for the DIG to come also. Only the local police was enough to control the situation. The police have not taken any steps to control the situation. The entire responsibility squarely lies upon the local police. I go further and level a charge that the police *i. e.*, local police were in direct collusion with the Goondas and unsocial elements. Sir, the people

of Bidar is peace-loving public and some unsocial and anti-social elements have taken advantage of this incident. Some goonda elements and unsocial elements have access to the Police Department and these goonda elements and un social elements with the collusion of Police took advantage of Ganesh Chaturthi and played havoc in Bidar Town on 14th, 15th and 16th *i. e.*, in those three days. I can also prove this. Sir, these are the lapses on the part of the local police. Then in the meanwhile, other departments were also not dynamic. They have not taken any steps to ease the situation. The police has not given proper information to these people. My friend, Mr. Mallikarjun Kharge said incidentally that Sikh students occupied the houses of minority people on rental basis and all those houses were burnt. these house were burnt between 2-30 a.m. and 6 p. m. and not a single house of othercommunity people was burnt. Only those houses which were occupied by the Sikh students were burnt but unfortunately all those house belonging to the minority community people *i.e.*, Muslim people. This also goes to show that the Police was inconnivance with those antisocial elements. It is not the question of loss of property. It is a question of peace and security of the minority community and the question of safeguarding the properties of the minorities. Had the police taken immediate steps, the loss of life would not have been there, the destruction of property would not have been there, and the loot and arson would not have been there. Sir, similar incident had taken place, not of such great value, during the election of 1967 and at that time, the local police had sought the help from the Airforce and within half an hour, the Airforce people came to the City and controlled the entire situation within 15 minutes. Not a single incident had happened thereafter. Sir, even after the information at 11-30 a.m. the DIG came at 7-30 p. m. It is very late. From Gulbarga to Bidar, the distance is only 90 kms and within two hours he could have come. At the most , the DIG would have come by 2.30 p. m. iwthin a couple of hours, he would have been there but he came only at 7-30 p. m. Hyderabad is very near. CRP force was available there. They could have summoned. The Bidar Police did not do that. This shows that all the time they are either silent or colluded with unsocial elements.

As regards rivalry between two eduational societies or the Shivsena which has come only one month back to the city, I would not tell much. They have contructed arches in the City and there was a rumour that this year's Ganesh procession is being taken with larger pomp and with great show of force by one community. there was also a rumour that something might

happen at the Ganesh chaturthi festival. But the fact is that no action was taken by the local police to verify that rumour and all that. This also goes to show that there was a direct connection between the police and the anti social elements utilised this opportunity and they have taken advantage of that occassion. They were on the spot on the date of incident. There were someother persons in the City on those days. when there was a rumour like this, it was the duty of the local administration to get it verified and take precautionary measures to control the possible situation. They have not done it. There is a total failure on the part of the police administration. I don't want to indulge in the controversy relating to unhealthy competition between the local societies belonging to one community on the one hand and another Jogasingh Society on the other. But it is a fact that in the month of January, one meeting was organised and in that meeting, it was stated that the Jogasingh should not be given the permission to run the Medical College and in that meeting, it was also decided that total anguish and resentment should be exhibited before the Govt. of Karnataka if any such permission is given to Jogasingh. Thereafter there was an unhealthy competition between two Societies and that may be one of the reasons, I don't know it is the sole reason, but may be one of the reasons, for this incident. At that time, all these facts should have been taken into consideration by the police Department. This fact was mentioned to the police authorities and the State Government is also aware of it *i.e.*, about this unhealthy competition between these two Societies. The State Government was having the knowledge of this unhealthy competition. That is why, I said, it may be one of the reasons for disturbance.

Another thing is that the Shivasena was in the City, and other communal organisations took active part in it and all that, I don't want to say anything but I would only say that the police department totally failed in this incident. Now the Hon'ble Chief Minister has made a statement that Judicial probe will be made, I don't want to say much. But, I don't know when it is going to take place. Sofar, the Judge is not nominated. The enquiry has not yet started. The relief work has not yet started, sofar. The amount of compensation had not been announced or given. unless things are done, it will not be of much use, Just to say that the Judicial enquiry has been ordered. The evidences will be wiped out and there will be destruction of evidence and the enquiry will become fruitless and infructous.

As regards the restoration of peace, I would say that the Muslim community and all other communities have behaved in a very responsible manner, otherwise, this matter would have

taken lefferent shape, it would have been a Hindu-Muslim clash also because most damages have taken place to the houses and properties of the muslim community wherein these Sikh students were staying. In punjab Hotel, there was a pan dubba of majority community boy and also a pan dubba of a muslin boy. The looters took the pan dubba of the majority community boy to the safer place. The pan dubba of the Muslim boy as well as the Punjab Hotel were set on firs. Similarly, Sikhs are also occupaying the houses of the Hindu landlords. They took out the belongings of the Sikh students outside the house and burnt those articles. Regarding vehicles also, the same thing had happened.

Sir, from these facts we may come to any conclusion. If a Judicial enquiry is going to take place, something may come out regardiag the reasons and the factors that were leading to these riots. My humble request is that in order to bring the past glory of peace, certainly it will take much time, we all take much time, we all take steps in that direction. All efforts should be made by all community people nct only Hindus, Muslims, Sikhs but also other persons *i.e.*, responsibie persons who are running the institutions, the persons belonging to various political, social and and cultural organisations should be brought together and find a solution. All these people should be consulted to restore peace. Peace is a most valuable thing and it should be brought back as early as possible. All these culprits whosoever they may be, whether they belong to high rank or low rank, whether they are poor or wealthy persons, they should be booked and punished. The most important work that is to be done immediately is the restoration of confidence among the minority people. Unless you restore the confidence among the minority the problem is not going to be solved and any effort which is going to take place either on the part of the Government or Chief Minister will totaly become a failure. Therefore, at this juncture I would like to mention about Mr Nizamuddin, the D.G.P. Mr. Nizamuddin had come and did his best, The D.I.G. had come. Mr. J H. Patel, Mr Sindhia Hon'ble Chief Minister and the Union Minister Mr. C. K. Jaffer Sherief have all visited Bidar. In addition, a central team has has also visited Bidar. Our Governor also came. In the presence of these high digntoties, the local M.L.As including myself, Mr. Kharge. and Mr. Basavaraj Patil informed them about the situation. We also told them that the situation is going to be very tense and it is not subsisting. In order to bring peace to the City we have requested them to consult all the concerned and take Immediate decision. The D.G.P. had promised that he is going to institute disciplinary action on all wrong doers, *i. e.*, the police people who are all on that day. I don't know whether you have

instituted any departmental disciplinary enquiry against those persons. From the news papers it is learnt that Mr. Umapathy, S.P. has been transferred. If such an official is transferred to some other place it will not solve the problem. Something may happen in other place also, after his transfer. Before coming to Bidar what I learnt was that he was not having a good record because in Maddur case there was a Communal clash and there was a judicial inquiry and in that Judicial inquiry it was held that he is responsible and he has unnecessarily given orders etc. For such pesons transfer is not a punishment at all. With all force at my command and with all humulity I would request the Hon'ble Chief Minister that all police official who were present on that day not only Mr. Umapathy entire departmental personnel who were on duty on that day against them disciplinary action should be initiated. If that is done it is possible that the confidence of the people perticularly yf the minority community can be gained, and peace restored.

I thank the Chair for giving me an oportunity to narrate the incident that has happened in Bidar City.

† ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ).—ಸನ್ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ಕಳೆದ ಕೆಲವು ದಿನಗಳ ಹಿಂದೆ ಅಂದರೆ 14, 15, 16 ರಂದು ನಡೆದಂಥ ಕೋಮು ಗಲಭೆಯನ್ನು ನಾನು ಖಂಡಿಸುತ್ತೇನೆ ಮತ್ತು ಇದು ಒಂದು ದುರದೃಷ್ಟಕರವಾದಂಥ ಸಂಗತಿಯಾಗಿದೆ. ಬೀದರ್ ಜಿಲ್ಲೆಯ ಇತಿಹಾಸದಲ್ಲಿ ಇದು ಪ್ರಮುಖವಾದಂಥ ದುರ್ಘಟನೆ ಎಂದು ಹೇಳಿದರೆ ತಪ್ಪಾಗಲಾರದು. ಈಗಾಗಲೇ ಹಲವಾರು ಪ್ರಮುಖ ವ್ಯಕ್ತಿಗಳು ಇದರ ಬಗ್ಗೆ ಹೇಳಿದ್ದಾರೆ. ನಾನು ಕೂಡ ಇಂತಹ ಒಂದು ದುರ್ಘಟನೆ ಅಲ್ಲಿ ಆಗಬಾರದಾಗಿತ್ತು ಎಂದು ಹೇಳಿ ಇದರ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಲು ಬಯಸುತ್ತೇನೆ. 14ನೇ ತಾರೀಖು ಈ ಘಟನೆ ನಡೆಯಿತು. ಬೀದರ್‌ನ ಗಾಂಧಿಗಂಜ್‌ನಲ್ಲಿ ಸಾಯಂಕಾಲ ಸಿಖ್ ವಿದ್ಯಾರ್ಥಿಗಳಿಗೆ ಮತ್ತು ಬೇರೆ ವಿದ್ಯಾರ್ಥಿಗಳಿಗೆ ಜಗಳವಾಯಿತು. ಈ ಒಂದು ಸಣ್ಣ ಘಟನೆ ನಮ್ಮ ದೇಶದ ಇತಿಹಾಸದಲ್ಲಿ ಪ್ರಮುಖವಾದಂಥ ಒಂದು ದೊಡ್ಡ ಘಟನೆಯಾಗಿ ಪರಿವರ್ತನೆಯಾಯಿತು, ಅದಕ್ಕೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ. 14ನೇ ತಾರೀಖಿನ ದಿವಸ ಅಲ್ಲಿರತಕ್ಕಂಥ ವಿದ್ಯಾರ್ಥಿ–ವಿದ್ಯಾರ್ಥಿಗಳ ಜಗಳದಲ್ಲಿ ಪಿ.ಎಸ್.ಐ.ರವರು ಐಯ್ಯಂಗಾರ್ ಹುಡುಗನನ್ನು ಹೊಡೆದಾಗ ಆತ ಮರಣ ಹೊಂದಿದ್ದರಿಂದ ಈ ಒಂದು ಘಟನೆ ಪ್ರಾರಂಭವಾಯಿತು. ಇದಾದಮೇಲೆ, 14ನೇ ತಾರೀಖಿನ ದಿವಸ ಬೆಳಿಗ್ಗೆ ನಾನು ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ, ಬೀದರ್‌ನಲ್ಲಿ ನಡೆದಿರುವಂಥ ಘಟನೆ ಬಗ್ಗೆ ಸೂಕ್ತವಾದ ಕ್ರಮ ಜರುಗಿಸಬೇಕೆಂದು ಕೇಳಿಕೊಂಡಮೇಲೆ, ಅವರು ಡಿ.ಐ.ಜಿ. ಆನಂದ್‌ರವರಿಗೆ ಫೋನ್ ಮಾಡಿ ಕೂಡಲೇ ಸೂಕ್ತ ಕ್ರಮ ತೆಗೆದುಕೊಂಡು ಬಂದೋಬಸ್ತು ಮಾಡಬೇಕೆಂದು ತಿಳಿಸಿದ್ದೇನೆಂದು ಹೇಳಿದರು. ನಾನು ನಾಲ್ಕು ಗಂಟೆ ಸುಮಾರಿಗೆ ಬೀದರ್‌ಗೆ ಫೋನ್ ಮಾಡಿ ವಿಚಾರಿಸಿದ್ದಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಗಲಾಟೆಯಾಗುತ್ತಿದೆ. ಮನೆಗಳನ್ನು ಮತ್ತು ಅಂಗಡಿ ಮುಂಗಟ್ಟುಗಳನ್ನು ಸುಟ್ಟು ಹಾಕುತ್ತಿದ್ದಾರೆ, ಹೆಚ್ಚಿನ ಪೋಲೀಸ್ ಪಡೆಯನ್ನು ಕಳುಹಿಸುವ ವ್ಯವಸ್ಥೆ ಮಾಡಬೇಕೆಂದು ತಿಳಿಸಿದರು. ಅಂದೇ ಸಾಯಂಕಾಲ ಕೃಷ್ಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮೀಟಿಂಗ್ ಕರೆದಿದ್ದರು, ನಾನು ಕೂಡ ಆ ಸಭೆಗೆ ಹೋಗಿದ್ದೆ. ಆಗ ನಾನು ಮತ್ತೆ ಮುಖ್ಯಮಂತ್ರಿಯವರಿಗೆ ನೀವು ಏನಾದರೂ ಮಾಡಿ ಅಲ್ಲಿ ನಡೆಯುತಕ್ಕ ಗಲಭೆಯನ್ನು ಕಂಟ್ರೋಲ್‌ಗೆ ತರಬೇಕೆಂದು ತಿಳಿಸಿದೆ. ಆಗ ಅವರು ಡಿ.ಜಿ.ಪಿ. ಮತ್ತು ಡಿ.ಐ.ಜಿ.ಯವರನ್ನು ಕಳುಹಿಸಿಕೊಡುತ್ತಿದ್ದೇನೆ, ನೀವು ಸ್ಥಳೀಯ ಶಾಸಕರುಗಳು ಹಾಗೂ ಮುಖಂಡರುಗಳು ಸೇರಿಕೊಂಡು ಶಾಂತಿ ವಾತಾವರಣ ನಿರ್ಮಾಣ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ನನಗೆ ತಿಳಿಸಿದರು. 15ನೇ ತಾರೀಖಿನ ದಿವಸ ಡಿ.ಐ.ಜಿ.

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಆನಂದನ್ ಮತ್ತು ಡಿ.ಜಿ.ಪಿ. ನಿಜಾಮುದ್ದೀನ್ ಅವರೊಂದಿಗೆ ಹೈದರಾಬಾದ್‌ಗೆ ಹೋದೆವು. ಅಲ್ಲಿ ಸಿಖ್ ಸಮುದಾಯದ ಸುಮಾರು 200-300 ಜನ ನಮ್ಮನ್ನು ಭೇಟಿಯಾಗಿ, ನಮಗೆ ಬಹಳ ಅನ್ಯಾಯವಾಗುತ್ತಿದೆ, ನಮಗೆ ಸೂಕ್ತ ಪೋಲೀಸ್ ರಕ್ಷಣೆ ಕೊಡಬೇಕೆಂದು ಕೇಳಿಕೊಂಡರು. ಆಗ ನಿಮಗೆ ಯಾವುದೇ ರೀತಿಯ ತೊಂದರೆಯಾಗದಂತೆ ರಕ್ಷಣೆ ಕೊಡುತ್ತೇವೆನ್ನುವ ಭರವಸೆಯನ್ನು ನಿಜಾಮುದ್ದೀನ್‌ರವರು ಕೊಟ್ಟರು. ಉಸ್ಮಾನಿಯಾ ಆಸ್ಪತ್ರೆಗೆ ಸೇರಿಸಲಾಗಿದ್ದ ಮೂರು ಜನ ವಿದ್ಯಾರ್ಥಿಗಳನ್ನು ನೋಡಿ, ನಾವು ಬೀದರ್‌ಗೆ ಹೋದೆವು. ಬೀದರ್ ಜಿಲ್ಲೆಯ ಎಲ್ಲಾ ರಾಜಕೀಯ ಪಕ್ಷಗಳವರು ಸೇರಿಕೊಂಡು, ನಮ್ಮ ಜಿಲ್ಲೆಯ ಹೆಸರು ಕೆಟ್ಟು ಕಳಂಕ ಬರುತ್ತದೆ, ಅದಕ್ಕೆ ಅವಕಾಶ ಕೊಡದಂತೆ, ಜನಗಳಿಗೆ ಸೂಕ್ತ ತಿಳುವಳಿಕೆ ನೀಡಿ ಜಿಲ್ಲೆಯಲ್ಲಿ ಶಾಂತಿ ನೆಲೆಸುವುದಕ್ಕೆ ಪ್ರಯತ್ನ ಮಾಡಬೇಕೆಂದು ತಿಳಿಸಿದೆವು. ಇದಾದಮೇಲೆ ಮಾನ್ಯ ಮುಖ್ಯಮಂತ್ರಿಗಳು ನ್ಯಾಯಾಂಗ ತನಿಖೆ ಮಾಡಿಸಲಾಗುವುದೆಂದು ಹೇಳಿದ್ದಾರೆ, ಅದನ್ನು ಕೂಡ ನಾವು ಸ್ವಾಗತಿಸಿದ್ದೇವೆ. ಇದಾದಮೇಲೆ ಸರ್ಕಾರದ ಪರವಾಗಿ ಮಾನ್ಯ ಜೆ. ಹೆಚ್. ಪಟೇಲರು, ಮಾನ್ಯ ಸಿಂಧ್ಯಾರವರು ಬೀದರ್ ಜಿಲ್ಲೆಗೆ ಭೇಟಿ ಕೊಟ್ಟಿದ್ದಾರೆ. ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಶಾಂತಿ ಸಮಿತಿಯ ಸಭೆಯನ್ನು ಮಾಡಿ, ಎಲ್ಲಾ ಕೋಮಿನ ಮುಖಂಡರುಗಳನ್ನು ಕರೆಸಿ ಮಾತನಾಡಿದ್ದಾರೆ. ನಮ್ಮದು ಬಸವಣ್ಣನವರು ಹುಟ್ಟಿದಂಥ ಪುಣ್ಯಭೂಮಿ, ಈ ಜಿಲ್ಲೆಗೆ ಕೆಟ್ಟ ಹೆಸರು ಬರುವಂಥ ಯಾವುದೇ ಕೆಲಸಗಳನ್ನು ಮಾಡಕೂಡದೆಂದು ಬುದ್ಧಿ ಮಾತುಗಳನ್ನು ಕೂಡ ಹೇಳಿದ್ದೇವೆ. ಕೇಂದ್ರ ಸರ್ಕಾರದ ವತಿಯಿಂದ ಶ್ರೀಮಾನ್ ಜಾಫರ್ ಷರೀಫ್‌ರವರು ಕೂಡ ಬಂದಿದ್ದರು. ಅವರನ್ನು ಮಾನ್ಯ ಪ್ರಧಾನ ಮಂತ್ರಿಗಳು ಕಳುಹಿಸಿಕೊಟ್ಟಿದ್ದರು. ಅವರು ಗುರುನಾನಕ್ ಭವನಕ್ಕೆ ಭೇಟಿ ಕೊಟ್ಟಿದ್ದರು. ಅವರು ಭೇಟಿ ಕೊಟ್ಟ ಸಂದರ್ಭದಲ್ಲಿ ಕೆಲವು ಸಿಖ್ ವಿದ್ಯಾರ್ಥಿಗಳು ಪ್ರತಿಭಟನೆ ವ್ಯಕ್ತಪಡಿಸಿ, ಹೊಡೆಯುವಂಥ ಪ್ರಯತ್ನ ಮಾಡಿದರು. ಆದರೆ ಪಕ್ಷಭೇದ ಇಲ್ಲದೆ, ಜಾತಿಭಾವನೆಯನ್ನು ಇಟ್ಟುಕೊಳ್ಳದೆ ಬೀದರ್ ಜಿಲ್ಲೆಯ ಶಾಸಕರುಗಳು, ಮುಖಂಡರುಗಳು ಶಾಂತಿ ನಿರ್ಮಾಣಕ್ಕೆ ಪ್ರಯತ್ನ ಮಾಡಿದ್ದಾರೆ. ಹಾಗೆ ಪ್ರಯತ್ನ ಮಾಡದೇ ಇದ್ದರೆ, ಇದಕ್ಕಿಂತ ಹೆಚ್ಚಿನ ಪ್ರಾಣಹಾನಿ ಆಗುವ ಸಂಭವ ಇತ್ತು. ಇದು ಆದನಂತರ ನಮ್ಮಲ್ಲಿರತಕ್ಕ ಹಲವಾರು ಜನರು ಅಲ್ಲಿನ ಎಲ್ಲಾ ಸ್ಥಳಕ್ಕೆ ಭೇಟಿಕೊಟ್ಟು ಶಾಂತಿಯನ್ನು ಕಾಪಾಡುವ ಸಲುವಾಗಿ ಪ್ರಯತ್ನ ಮಾಡಿದ್ದಾರೆ. ಪೋಲೀಸ್ ಪೇದೆಗಳು ಸರಿಯಾಗಿ ಕೆಲಸ ಮಾಡಲಿಲ್ಲ ಪೋಲೀಸ್ ಇಲಾಖೆಯವರು ಸರಿಯಾಗಿ ಕೆಲಸ ಮಾಡಲಿಲ್ಲ ಎನ್ನುವ ಮಾತನ್ನು ಏನು ಹೇಳಿದ್ದಾರೆ ಅದರ ಬಗ್ಗೆ ನನ್ನ ವೈಯಕ್ತಿಕ ಭಾವನೆಯಲ್ಲಿ ಒಬ್ಬ ಶಾಸನ ಸಭಾ ಸದಸ್ಯನಾಗಿ, ಜಿಲ್ಲಾ ಉಸ್ತುವಾರಿಯಾಗಿದ್ದವನಾಗಿ ಹೇಳುವುದಾದರೆ, ಅವರಬಗ್ಗೆ ಆರೀತಿ ಹೇಳಿದರೆ ತಪ್ಪಾಗುತ್ತದೆ ಎಂದು ನನ್ನ ಭಾವನೆ. ಅಲ್ಲಿರತಕ್ಕ ಎಸ್. ಪಿ. ಉಮಾಪತಿ ಅವರು ಬಹಳ ಒಳ್ಳೆಯವರಾಗಿದ್ದರು. ಪ್ರಾಮಾಣಿಕ ವ್ಯಕ್ತಿಗಳಾಗಿದ್ದರು; ಅವರು ಯಾವುದೇ ಸಮಾಜದವರ ಬಗ್ಗೆಯೂ ಕೆಟ್ಟ ಭಾವನೆಯಿಂದ ನೋಡಿದವರು ಅಲ್ಲ. ಅವರು ಅಲ್ಲಿಗೆ ಬಂದಮೇಲೆ ಯಾವುದೇ ದುರದೃಷ್ಟಕರ ಘಟನೆಗಳು ನಡೆದಿರಲಿಲ್ಲ. ಅವರು ಉತ್ತಮವಾಗಿ ಕೆಲಸ ಮಾಡಿದ್ದಂಥ ಅಧಿಕಾರಿಯಾಗಿದ್ದರು. ಪೋಲೀಸ್ ಡಿಪಾರ್ಟ್‌ಮೆಂಟಿನವರು ಚೆನ್ನಾಗಿ ಕೆಲಸ ಮಾಡಿದ್ದಾರೆ. ಇದು ಅಚಾತುರ್ಯ ಘಟನೆಯಾದುದರಿಂದ ಅವರು ಯಾವರೀತಿ ಕಂಟ್ರೋಲ್ ಮಾಡಬೇಕು ಎನ್ನುವುದರಲ್ಲಿ ತೊಂದರೆಯಾಗಿದೆ. ಅವರು ಪ್ರಾಮಾಣಿಕ ವ್ಯಕ್ತಿಯಾಗಿರುವುದರಿಂದ, ಅವರು ಸರಿಯಾಗಿ ಕೆಲಸ ಮಾಡಿಲ್ಲ ಎಂದು ಹೇಳುವುದು ಸರಿಯಲ್ಲ ಎಂದು ನನ್ನ ಭಾವನೆ. ಇನ್ನು ನಮ್ಮ ಡಿ. ಐ. ಜಿ. ಪಾವಟೆಯವರು ಸಹ ಸರಿಯಾದಂಥ ರೀತಿಯಲ್ಲಿ ಸಂಪೂರ್ಣವಾಗಿ ಪೋಲೀಸ್ ಜೊತೆಯಲ್ಲಿ ಬಂದು ಅಲ್ಲಿನ ಪರಿಸ್ಥಿತಿಯನ್ನು ಕಂಟ್ರೋಲ್‌ಗೆ ತಂದು ಶಾಂತಿ ಕಾಪಾಡುವ ಸಲುವಾಗಿ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಕೇಂದ್ರ ಸರ್ಕಾರದ ಪರವಾಗಿ ನಮ್ಮ ಜಾಫರ್ ಷರೀಫ್ ಅವರು ಬಂದು ಹೋದರು, ನಮ್ಮ ಸರ್ಕಾರದ ಪರವಾಗಿ ಜೆ. ಹೆಚ್. ಪಟೇಲ್ ಅವರು ಬಂದು ಹೋದರು, ಈ ರೀತಿಯಲ್ಲಿ ಹಲವಾರು ಪ್ರಮುಖರು ಬಂದು ಹೋದುದರಿಂದ ಅಲ್ಲಿ ಶಾಂತಿ ವಾತಾವರಣ ವ್ಯವಸ್ಥೆ ಮಾಡಲಿಕ್ಕೆ ಅನುಕೂಲವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇದು ಆದಮೇಲೆ ಪಾರ್ಲಿಮೆಂಟ್ ಸದಸ್ಯರು ಆಗಾಗ ಬಂದು ಭೇಟಿಕೊಟ್ಟು ಅಲ್ಲಿರತಕ್ಕ ಜನರಿಗೆ ತಿಳುವಳಿಕೆ ನೀಡಿದ್ದಾರೆ. ಕೇಂದ್ರ ಸರ್ಕಾರದ ಮಂತ್ರಿಗಳಾದ ಜಾಫರ್ ಷರೀಫ್ ಅವರು ಬಂದು ಮೈನಾರಿಟಿ ಕಮ್ಯುನಿಟಿಗೆ ಸಂಬಂಧಪಟ್ಟವರು ಒಳ್ಳೆಯವರಾಗಬೇಕು. ನೀವೆಲ್ಲರೂ ಬುದ್ಧಿವಂತರಾಗಬೇಕು, ಸರಿಯಾದಂಥ ಕೆಲಸ ಮಾಡಬೇಕೆಂದು ಹೇಳಿದರು. ಅಲ್ಲಿದ್ದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮುಂದೆ ನೀವೆಲ್ಲಾ ನಮ್ಮ ದೇಶದ ನಾಯಕರಾಗುವವರು ಎನ್ನುವ ಬುದ್ಧಿ ಮಾತನ್ನು ಹೇಳಿ ಹೋಗಿದ್ದಾರೆ. ಮಾನ್ಯ ಲೈಕುದ್ದೀನ್ ಮತ್ತು ನಾವೆಲ್ಲರೂ ಕೂಡಿ ಒಳ್ಳೆಯ ಕೆಲಸವನ್ನು ಮಾಡಿದ್ದೇವೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾನ್ಯ ವೀರಪ್ಪಮೊಯಿಲಿಯವರು ಮಾತನಾಡುವಾಗ ಒಂದು ಮಾತನ್ನು ಹೇಳುತ್ತಾ ಮುಖ್ಯ ಮಂತ್ರಿಯವರಿಗೆ ಫೋನ್ ಮಾಡಿದರೂ ಅವರಿಗೆ ಮಾತನಾಡಲಿಕ್ಕೆ ಆಗಲಿಲ್ಲ ಎನ್ನುವ ವಿಚಾರ

ವನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಎಂ. ಪಿ. ಯವರಾದ ಸೂರ್ಯವಂಶಿಯವರು ಏನು ಹೇಳಿದರು ಅಂದರೆ, ಯಾವುದೇ ಒಬ್ಬ ಮಂತ್ರಿಯೂ ಕೂಡ ಮಾತನಾಡಲಿಲ್ಲ. ಅವರು ಸಾಯಂಕಾಲ ಬಂದಮೇಲೆ ೧೭ನೇ ತಾರೀಖಿನ ದಿವಸ ಶ್ರೀಮಾನ್ ಬೊಮ್ಮಾಯಿಯವರು ಫೋನ್ ಮುಖಾಂತರ ಮಾತನಾಡಿದ್ದಾರೆ. ಪರಿಸ್ಥಿತಿ ಏನಿದೆ ಎನ್ನುವುದನ್ನು ಅರ್ಥ ಮಾಡಿಕೊಂಡಿದ್ದಾರೆಂದು ಹೇಳಿದರು. ಈಗ ನಾವು ಇಲ್ಲಿ ಶಾಂತಿ ಭಂಗದ ಬಗ್ಗೆ ಮಾತನಾಡುವುದು ಬೇಡ. ನಮ್ಮ ಜಿಲ್ಲೆಯಲ್ಲಿ ಎಲ್ಲರೂ ಬಹಳ ಒಳ್ಳೆಯವರು ಇದ್ದಾರೆ. ಅಲ್ಲಿದ್ದಂಥ ಎಸ್. ಪಿ. ಯವರು ಸಿಖ್ ವಿದ್ಯಾರ್ಥಿಗಳನ್ನೆಲ್ಲಾ ಗುರುನಾನಕ್ ಸ್ಥಳದಲ್ಲಿ ಸಂಗ್ರಹ ಮಾಡಿದ್ದರು. ಅನಂತರ ಡಿ. ಐ. ಜಿ. ನಿಜಾಮುದ್ದೀನ್ ಅವರು ಬಂದಮೇಲೆ ಎಲ್ಲರೂ ಸೇರಿಕೊಂಡು ಪೋಲೀಸ್ ಪ್ರೊಟೆಕ್ಷನ್ ಕೊಟ್ಟು, ಸರ್ಕಾರಿ ಬಸ್ಸಿನಲ್ಲಿ ಬೇರೆ ಬೇರೆ ಜಾಗಕ್ಕೆ ಕಳುಹಿಸುವ ವ್ಯವಸ್ಥೆ ಮಾಡಿದರು. ಅಲ್ಲಿರತಕ್ಕ ಕಾಲೇಜನ್ನು ಒಂದು ತಿಂಗಳವರೆಗೆ ಮುಚ್ಚಬೇಕೆಂದು ಸ್ಥಳೀಯರೆಲ್ಲಾ ಸೇರಿ ತೀರ್ಮಾನ ತೆಗೆದುಕೊಂಡು ಆದೇಶ ಕೊಟ್ಟಿದ್ದೇವೆ. ಈ ವಿಷಯದ ಬಗ್ಗೆ ಇನ್ನೂ ಹೆಚ್ಚು ಹೇಳುವಂಥ ಅವಶ್ಯಕತೆ ಇಲ್ಲ. ನಮ್ಮಲ್ಲಿರತಕ್ಕ ಹರಿಜನರಲ್ಲೂ ಕೂಡ ಬಹಳ ಒಳ್ಳೆಯ ಪ್ರವೃತ್ತಿಯುಳ್ಳವರಿದ್ದಾರೆ. ನಮ್ಮ ಮುಖ್ಯಮಂತ್ರಿಯವರು ಸಹ ಇದರಲ್ಲಿ ಯಾವುದೇ ತರಹದ ರಾಜಕೀಯ ತರುವುದು ಬೇಡ ಎನ್ನುವ ಮಾತನ್ನು ಹೇಳಿದ್ದಾರೆ. ಈಗ ಏನಾಗಿದೆ ಎಂದರೆ, ಅಲ್ಲಿಗೆ ಬೂಟಾಸಿಂಗ್ ಬರುತ್ತಾರೆಂದು ಪದೇ ಪದೇ ಪ್ರದೇಶ ಸಮಾಚಾರದಲ್ಲಿ ಹೇಳುವುದರಿಂದ ಜನರಲ್ಲಿ ಒಂದು ತರಹದ ಭಾವನೆ ಬರುತ್ತಿದೆ. ಈಗಾಗಲೇ ನಮ್ಮ ಮಾನ್ಯ ಮುಖ್ಯಮಂತ್ರಿಯವರು ನ್ಯಾಯಾಂಗ ತನಿಖೆ ಮಾಡುತ್ತೇವೆಂದು ಹೇಳಿದ್ದಾರೆ. ಅದರ ಮುಖಾಂತರ ಯಾವುದೇ ಒಬ್ಬ ವ್ಯಕ್ತಿ ಅಥವಾ ಅಧಿಕಾರಿ ಇದಕ್ಕೆ ಸಂಬಂಧಪಟ್ಟಿರತಕ್ಕವರು ಇದ್ದರೆ ಅವರ ಮೇಲೆ ಸರ್ಕಾರ ಕಠಿಣ ಕ್ರಮವನ್ನು ತೆಗೆದುಕೊಳ್ಳುತ್ತದೆ. ಈಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇವೊತ್ತು ಅಲ್ಲಿ ಶಾಂತಿ ಕಾಪಾಡುವ ದೃಷ್ಟಿ ನಮ್ಮ ಮತ್ತು ನಿಮ್ಮಗಳ ಕರ್ತವ್ಯವಾಗಿದೆ. ಈ ಒಂದು ಸಂದರ್ಭದಲ್ಲಿ ಈ ಘಟನೆಯ ಬಗ್ಗೆ ತುಂಬಾ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ನಮ್ಮ ಹಿಂದೂ ಮತ್ತು ಮುಸ್ಲಿಂ ಭಾಂದವರ ಆಸ್ತಿಪಾಸ್ತಿ ನಷ್ಟವಾಗಿದೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಈ ಮಾತನ್ನು ಮಾನ್ಯ ಲೈಕುದ್ದೀನ್ ಅವರು ಮಾತನಾಡುವಾಗ ಹೇಳಿದ್ದಾರೆ. ಹಿಂದೂಸಮಾಜದ, ಮುಸ್ಲಿಂ ಸಮಾಜದ ಆಸ್ತಿಪಾಸ್ತಿ ನಾಶವಾಗಿದೆ. ಇದು ಸಮಾಜವಿರೋಧಿ ಚಟುವಟಿಕೆಗಳಿಂದಾಗಿದೆ. ಈ ಸಮಾಜವಿರೋಧಿ ಚಟುವಟಿಕೆ ಮಾಡುವವರು ಯಾರೇ ಇದ್ದರೂ ಸಹ ಅವರಮೇಲೆ ಸರ್ಕಾರ ಕಠಿಣಕ್ರಮ ಜರುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಆಸ್ತಿಪಾಸ್ತಿ ನಷ್ಟವಾಗಿರುವವರಿಗೆ ಈಗಾಗಲೇ ಸಾಕಷ್ಟು ಪರಿಹಾರವನ್ನು ಕೊಟ್ಟಿದ್ದಾರೆ. ಈಗ ಹೆಚ್ಚಿನ ಆಸ್ತಿಪಾಸ್ತಿ ನಷ್ಟವಾಗಿರುವುದನ್ನು ನೋಡಿ ಅದರ ಬಗ್ಗೆ ಅಧ್ಯಯನಮಾಡಿ ಹೆಚ್ಚು ಹಾನಿಗೊಳಗಾದವರಿಗೆ ಹೆಚ್ಚಿನ ಪರಿಹಾರ ಕೊಡಬೇಕು. ಇವೊತ್ತು ಬೇರೆ ಬೇರೆ ಸಮಾಜದವರ ಭಾವನೆ ಏನಿದೆ ಅಂದರೆ ಸಿಖ್‌ರು ಯಾವಾಗ ಬರುತ್ತಾರೋ, ಯಾವಾಗ (ಹೊಡೆಯುತ್ತಾರೋ) ಎನ್ನುವ ಭಾವನೆ ಬಂದಿದೆ. ಇಂತಹ ಭಯದ ವಾತಾವರಣ ಅಲ್ಲಿ ಕಲ್ಪಿತವಾಗಿದೆ. ಜನರು ಹಾದಿಯಲ್ಲಿ ಹೋಗುವವರು ಏನು ಭಾವನೆ ಮಾಡುತ್ತಿದ್ದಾರೆಂದರೆ ನಾವು ಒಬ್ಬೊಬ್ಬರೇ ಬೀದಿಯಲ್ಲಿ ಹೇಗೆ ಹೋಗಬೇಕು ಎಂದು ಭಯ ಬೀಳುತ್ತಿದ್ದಾರೆ. ಇದರ ಬಗ್ಗೆ ಹೆಚ್ಚಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಮ್ಮ ಎಲ್ಲಾ ಮಾನ್ಯ ಸದಸ್ಯರೂ ಪಕ್ಷಾತೀತವಾಗಿ ಅಲ್ಲಿ ಕೆಲಸ ಮಾಡಿದ್ದಾರೆಂದು ನಾನು ತಮಗೆ ಹೇಳಬಯಸುತ್ತೇನೆ. ಮಾನ್ಯ ಭೀಮಣ್ಣ ಖಂಡ್ರೆಯವರ ಬಗ್ಗೆ ಅಲ್ಲಿನ ಒಂದು ಹಿಂದಿ ಪತ್ರಿಕೆಯಲ್ಲಿ ಒಂದು ಸ್ಟೇಟ್‌ಮೆಂಟ್ ಬಂತು. ಅದೇನೆಂದರೆ ಭೀಮಣ್ಣ ಖಂಡ್ರೆಯವರ ಕೈವಾಡ ಇದರಲ್ಲಿದೆ ಎಂದು ಬಂತು. ನಾವೆಲ್ಲರೂ ಕೂಡಿಕೊಂಡು ಅವರು ಕೊಟ್ಟಂಥ ಸ್ಟೇಟ್‌ಮೆಂಟ್ ಖಂಡನೆ ಮಾಡಿ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇವೆ. ಇದರಲ್ಲಿ ಯಾವುದೇ ಒಂದು ಪಕ್ಷದ ಸಂಬಂಧ ಕೂಡ ಇಲ್ಲ. ಈರೀತಿ ಹೇಳಿಕೆಯನ್ನು ಕೊಡುವುದರಿಂದ ನಮ್ಮ ಬೀದರ್‌ನಲ್ಲಿ ಶಾಂತಿ ಕದಡುವುದಕ್ಕೆ ಅವಕಾಶ ವಾಗುತ್ತದೆಂದು ಅಲ್ಲಿ ಎಲ್ಲಾ ಪಕ್ಷದ ಸದಸ್ಯರೂ, ಮುಖಂಡರೂ ಕೂಡಿಕೊಂಡು ಆ ಹೇಳಿಕೆಯನ್ನು ಖಂಡಿಸಿದ್ದೇವೆ. ಯಾವುದೇ ಪಕ್ಷದವರು ಪಂಗಡದವರು ಯಾವುದೇ ಕುಲ-ಗೋತ್ರದವರು ಇದ್ದರೂ ಕೂಡ ಒಟ್ಟಿಗೇ ಕೂಡಿ ಇದರಬಗ್ಗೆ ನಾವು ಸಂಪೂರ್ಣ ಸಹಕಾರವನ್ನು ಮಾಡಿದ್ದೇವೆ. ಎಲ್ಲರೂ ಕೂಡಿ ಅಲ್ಲ ಶಾಂತಿ ತರುವುದಕ್ಕಾಗಿ ಪ್ರಯತ್ನ ಮಾಡಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಿಕೆಯವರಾದ ಶ್ರೀಮತಿ ನಾಗರತ್ನಮ್ಮನವರು ಆ ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಅಲ್ಲಿಯ ಹೆಣ್ಣುಮಕ್ಕಳ ಗೋಳನ್ನು ಹೇಳುವುದಕ್ಕಾಗುವುದಿಲ್ಲ. ಇದಕ್ಕಾಗಿ ಅಲ್ಲಿ ಎಲ್ಲಾ ಪ್ರಮುಖರು ಕೂಡಿಕೊಂಡು ಸರಿಯಾದ ರೀತಿಯಲ್ಲಿ ಶಾಂತಿ ತರುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅಲ್ಲಿ ಒಂದು ಭಯದ ವಾತಾವರಣ ಜನರಲ್ಲಿ ಮೂಡಿದೆ. ಈ ಸಿಖ್ಖರು ಯಾವಾಗ ಬಂದು ನಮ್ಮನ್ನು ಹೊಡೆದು ಹಾಕುತ್ತಾರೋ ಎಂಬ ಭಾವನೆ ಇದೆ. ಇದನ್ನು ನಿವಾರಿಸಲು ಸರ್ಕಾರದವರು ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಈ ಸಂದರ್ಭದಲ್ಲಿ ಏನು ಒಂದು ದುರ್ಘಟನೆ ನಡೆದಿದೆ ಅದರ ಬಗ್ಗೆ ನಮ್ಮ

ವಿಷಾದವನ್ನು ವ್ಯಕ್ತಪಡಿಸಿ ಈ ವಿಚಾರದಲ್ಲಿ ಒಂದೆರಡು ಮಾತನ್ನು ಆಡುವುದಕ್ಕೆ ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಗುರುಪಾದಪ್ಪ ನಾಗಮಾರ ಪಲ್ಲಿ (ಔರಾದ್).—ಮಾನ್ಯ ಸಭಾಧ್ಯಕ್ಷರೆ, ಬೀದರ್ ಜಿಲ್ಲೆ ಬಹಳ ಶಾಂತವಾದ ಜಿಲ್ಲೆ. ನಮ್ಮ ಮಾನ್ಯ ಸ್ನೇಹಿತರು ಹೇಳಿದಂತೆ ಜಗಜ್ಯೋತಿ ಬಸವಣ್ಣನವರು ಹುಟ್ಟಿದಂಥ ಸ್ಥಳ ಇದಾಗಿದೆ. ಇದು ಬಹಳ ಒಳ್ಳೆಯ ಜಾಗ. ಶಾಂತವಾದ ಜಾಗ. ಹಿಂದೆ ಅಲ್ಲಿ ಯಾವಾಗಲೂ ಇಂಥ ಒಂದು ಘಟನೆ ಆಗಿರಲಿಲ್ಲ. ಇದು ಮೊಟ್ಟ ಮೊದಲನೆಯಬಾರಿಗೆ ಆಗಿದೆ. ಸಿಖ್ಖರೇ ಸಾಯಲಿ, ಬೇರೆ ಯಾರೇ ಸಾಯಲಿ, ಸತ್ತಿದ್ದಕ್ಕೆ ನಾವು ನಮ್ಮ ವಿಷಾದವನ್ನು ವ್ಯಕ್ತಪಡಿಸುತ್ತೇವೆ. ಇವತ್ತು ಬೀದರ್‌ಜಿಲ್ಲೆ ಶಾಂತವಾಗಿರಬೇಕೋ, ಬೇಡವೋ ? ಇಂಥ ಘಟನೆ ಆಗಬಾರದಿತ್ತು, ಆದರೆ ಏನೋ ಆಗಿಹೋಯಿತು. ಈಗ ಇದನ್ನು ನಾವು ಚರ್ಚೆಮಾಡಿ ಬೀದರ್‌ನಲ್ಲಿರತಕ್ಕ ಶಾಂತಿಯನ್ನುವ ಭಂಗ ಮಾಡಬೇಕೆ ? ಈಗ ಅಲ್ಲಿ ನಡೆದಿರುವ ಘಟನೆಗೆ ನಮ್ಮ ವಿಷಾದವನ್ನು ವ್ಯಕ್ತಪಡಿಸಿ ಅದನ್ನು ಹೇಗೆ ಸರಿಪಡಿಸಬೇಕು, ಅದು ಏತಕ್ಕೆ ಹೀಗೆ ಆಯಿತೆಂಬುದನ್ನು ನಾವು ಯೋಚನೆ ಮಾಡಬೇಕು, ಶ್ರೀಮತಿ ನಾಗರತ್ನಮ್ಮನವರು ಸರಿಯಾಗಿ ಹೇಳಿದ್ದಾರೆ. ಏಕೆಂದರೆ ಅವರ ಎದುರಿಗೆ ಹೆಣ್ಣು ಮಕ್ಕಳು ತಮ್ಮ ಎಲ್ಲ ಗೋಳನ್ನು ಹೇಳಿಕೊಂಡಿದ್ದಾರೆ. ಆದರೆ ಇಲ್ಲಿ ನಿಜವಾದ ಪರಿಸ್ಥಿತಿಯನ್ನು ಯಾರೂ ಹೇಳುತ್ತಿಲ್ಲ. ನಿಜವಾದ ವಿಚಾರವನ್ನು ಹೇಳುವುದಕ್ಕೆ ಎಲ್ಲರೂ ಭಯಪಡುತ್ತಿದ್ದಾರೆ. ಸಿಖ್ಖರು ಎಲ್ಲಿ ಬಂದು ನಮಗೆ ಗುಂಡು ಹಾಕುತ್ತಾರೋ, ಬಾಂಬ್ ಹಾಕುತ್ತಾರೋ ಎಂದು ಅದ್ದರಿಂದ ನಾವು ಇದನ್ನು ಹೇಳುವುದು ಬೇಡವೆಂದು ಭಯದಿಂದ ಸುತ್ತಿ, ಸುತ್ತಿ ಹೇಳುತ್ತಿದ್ದಾರೆ. ಈಗ ಬೀದರ್‌ನ ಜನರು ಬಹಳ ಕಷ್ಟದಲ್ಲಿದ್ದಾರೆ. ಇಂಥ ಘಟನೆ ಆಗಬಾರದಿತ್ತು. ಏನೋ ಆಗಿದೆ. ಇದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಈಗ ಬೀದರ್‌ನ ಜನರು ಶಾಂತಿಯಿಂದ ಇರಬೇಕೇ, ಬೇಡವೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಆ ಜನರು ಶಾಂತಿಯಿಂದ ಇರಬೇಕಾದರೆ ನಾವು ಯಾರು ರಾಜಕೀಯವನ್ನು ಇದರಲ್ಲಿ ಬೆರೆಸಬಾರದು. ಅಲ್ಲಿ ಬಹಳಷ್ಟು ಜನರ ಆಸ್ತಿಪಾಸ್ತಿಯನ್ನು ಸುಟ್ಟಿದ್ದಾರೆ. ಅಲ್ಲಿ ಸುಟ್ಟಿಲ್ಲವೆಂದು ನಾನು ಹೇಳುವುದಿಲ್ಲ. ಸುಟ್ಟಿರುವುದು ನಿಜ. ಆದರೆ ಯಾರ ಆಸ್ತಿ ಸುಟ್ಟಿದೆ ಎಂದರೆ ಯಾರು ತಮ್ಮ ಮನೆಗೆ ೧೦–೧೫ ಸಾವಿರ ರೂಪಾಯಿ ಅಡ್ವಾನ್ಸ್ ತೆಗೆದುಕೊಂಡು ೫೦,೦೦೦೦ ರೂಪಾಯಿಗೆ ಬಾಡಿಗೆಗೆ ಕೊಟ್ಟಿದ್ದರು, ಬಾಡಿಗೆ ಆಸೆಯಿಂದ ಯಾರಿಗೆ ತೊಂದರೆ ಕೊಟ್ಟಿದ್ದರು ಅವರ ಮನೆಗಳನ್ನು ಸುಟ್ಟಿದ್ದಾರೆ. ಅವರು ಕೇವಲ ಮುಸಲ್ಮಾನರ ಮನೆಗಳನ್ನೇ ಸುಟ್ಟಿಲ್ಲ, ಕೇವಲ ಹಿಂದೂಗಳ ಮನೆಗಳನ್ನೇ ಸುಟ್ಟಿಲ್ಲ. ಎಲ್ಲರ ಆಸ್ತಿಪಾಸ್ತಿಗಳನ್ನೂ ಸುಟ್ಟಿದ್ದಾರೆ. ಹಿಂದೂಗಳ ಮನೆಗಳನ್ನು ಸುಟ್ಟಿದ್ದಾರೆ, ಹಿಂದೂಗಳ ಸೈಕಲ್ ಮೋಟಾರ್‌ಗಳನ್ನೂ ಸುಟ್ಟಿದ್ದಾರೆ. ಹಿಂದೂಗಳ ಕೈ ಕಡಿದಿದ್ದಾರೆ, ಕಾಲುಗಳನ್ನು ಕಡಿದಿದ್ದಾರೆ. ನಾನು ಈಗ ಅವನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲಾ. ಅದೆಲ್ಲಾ ಜ್ಯುಡಿಷಯಲ್ ಎನ್‌ಕ್ವೈರಿಯಲ್ಲಿ ಬರುತ್ತದೆ. ಅಲ್ಲಿ ಹೆಣ್ಣುಮಕ್ಕಳು ಲೆಟ್ರಿನ್‌ಗೆ ಹೋಗುವುದು ಬಹಳ ಕಷ್ಟವಾಗಿದೆ. ಹೆಣ್ಣುಮಕ್ಕಳು ಸ್ನಾನ ಮಾಡುವಾಗ ಅವರ ಫೋಟೋಗಳನ್ನು ತೆಗೆದುಕೊಂಡು ಬ್ಲಾಕ್‌ಮೇಲ್ ಮಾಡಿದ್ದಾರೆ. ಅದನ್ನೆಲ್ಲಾ ಇಲ್ಲಿ ಹೇಳಬೇಕೇ ? ನಾನು ಅದನ್ನೆಲ್ಲಾ ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲಾ. ಅದೆಲ್ಲಾ ಜ್ಯುಡಿಷಿಯಲ್ ಎನ್‌ಕ್ವೈಯರಿಯಲ್ಲಿ ಬರುತ್ತದೆ. ಆದರೆ ಇದರಲ್ಲಿ ಯಾರೂ ಕೂಡ ರಾಜಕೀಯವನ್ನು ಬಳಸಬಾರದು. ಮಾನ್ಯ ಸದಸ್ಯರಾದ ಜಯಕುಮಾರ್‌ರವರು ಒಂದು ಮಾತನ್ನು ಹೇಳಿದರು. ಎಲ್ಲೆಲ್ಲೋ ಏನೇನೋ ನಡೆಯುತ್ತದೆ. ಅದನ್ನೆಲ್ಲಾ ಬಿಟ್ಟು ಯಾವುದೋ ಒಂದು ಪೇಪರ್‌ನಲ್ಲಿ ಒಂದು ಹೆಡ್‌ಲೈನ್ ಬಂದರೆ ಅದನ್ನೇ ದೊಡ್ಡದು ಮಾಡಿದರು ಎಂದು ಅವರು ಹೇಳಿದರು ಆರೀತಿ ಏತಕ್ಕೆ ಮಾಡಬೇಕು ? ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಹೋಂ ಮಿನಿಷ್ಟರ್‌ರವರು ಬರಬೇಕಾದ ಅವಶ್ಯಕತೆ ಏನಿತ್ತು ಎಂದು ಹೇಳಿದರು. ಅವರು ಪಂಜಾಬಿಗೆ ಏತಕ್ಕೆ ಹೋಗಲಿಲ್ಲ ? ಅಲ್ಲಿಗೆ ಏತಕ್ಕೆ ಹೋಗಬಾರದಿತ್ತು ?

೩–೦೦ ಪಿ. ಎಂ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀವು ಮಾಡುವುದೆಲ್ಲ ಸರಿ ಎಂದು ಹೇಳುವುದಾದರೆ ಚರ್ಚೆಯೇ ಬೇಡ. ಚರ್ಚೆ ಏತಕ್ಕೆ ಮಾಡಬೇಕು.

ಅಧ್ಯಕ್ಷರು.—ಮಾನ್ಯ ಗುರುಪಾದಪ್ಪನವರೇ, ತಾವು ಪ್ರಚೋದನೆ ಆಗದಂತ ರೀತಿಯಲ್ಲಿ ಮಾತನಾಡಬೇಕು.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಗುರುಪಾದಪ್ಪ ನಾಗಮರಪಲ್ಲಿ.—ಸ್ವಾಮಿ ನಾನು ಪ್ರಚೋದನೆ ಉಂಟಾಗುವಂತಹ ರೀತಿಯಲ್ಲಿ ಮಾತನಾಡುತ್ತಿಲ್ಲ. ಬೀದರ್ ಜಿಲ್ಲೆ ಶಾಂತವಾಗಿರಬೇಕಾದರೆ......ನಾವು ಶಾಂತಿ ಬಿಟ್ಟು ಬಿಟ್ಟಿದ್ದೇವೆ. ರಾಜಕೀಯ ತರುತ್ತಿದ್ದೇವೆ. ಬಡಜನರ ಕಾಸಿನ ಮೇಲೆ ರಾಜಕೀಯ ಮಾಡುತ್ತಿದ್ದೇವೆ.

ಅಧ್ಯಕ್ಷರು.—ರಾಜಕೀಯ ಬಿಟ್ಟು ಮಾತನಾಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಯಾರು ರಾಜಕೀಯದ ಮಾತನಾಡಿದ್ದಾರೆ. ಅವರೇ ರಾಜಕೀಯದ ಮಾತನಾಡುತ್ತಿರುವುದು.

ಅಧ್ಯಕ್ಷರು.—ರಾಜಕೀಯ ಅವರು ಮಾಡಲಿಲ್ಲ. ನೀವೂ ಮಾಡಲಿಲ್ಲ. ಅಲ್ಲಿ ಆಗಿರುವ ಘಟನೆ ಬೇರೆ ಇದೆ. ಅದರ ಬಗ್ಗೆ ಏನು ಮಾಡಬೇಕು ಅದನ್ನು ಹೇಳಿ, ಅವರು ಹೇಳಲಿ, ನೀವೂ ಹೇಳಿ.

ಶ್ರೀ ಗುರುಪಾದಪ್ಪ ನಾಗಮರಪಲ್ಲಿ.—ಶಾಂತಿಯಿಂದ ಜನರು ಜೀವನ ನಡೆಸಲಿ ಎಂದು ಹೇಳುತ್ತಿದ್ದೇನೆ. ಬೀದರ್ ಜನರು ಶಾಂತಿಯಿಂದ ಬಾಳಲು ಬೇಡವೇ ಎಂದು ಕೇಳುತ್ತಿದ್ದೇನೆ. ಅಲ್ಲಿ ಆಗಿರುವ ಪರಿಸ್ಥಿತಿಯ ಬಗ್ಗೆ ಹೇಳುತ್ತಿದ್ದೇನೆ. ಈ ರೀತಿಯಾದ ಒಂದು ಪರಿಸ್ಥಿತಿಯಾಗಬಾರದಿತ್ತು ನಿಜ. ಇದನ್ನು ಯಾರು ಮಾಡಿದ್ದಾರೆಂಬ ಬಗ್ಗೆ ಸಂಪೂರ್ಣವಾಗಿ ಕಂಡುಹಿಡಿಯಲು ಜುಡಿಷಿಯಲ್ ಎನ್‌ಕ್ವಯರಿಗೆ ಆಜ್ಞೆ ಮಾಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅದರಲ್ಲಿ ಎಲ್ಲ ಬರುತ್ತದೆ. ಆದ್ದರಿಂದ ಈವತ್ತು ಅವರ ಮೇಲೆ ಇವರ ಮೇಲೆ ದಯವಿಟ್ಟು ಎತ್ತಿ ಕಟ್ಟುವುದು ಬೇಡ ಭೀಮಣ್ಣ ಖಂಡ್ರೆ ಹಾಗೂ ಬೀದರ್ ಜಿಲ್ಲೆ ಶಾಸಕರು ಒಂದಾಗಿದ್ದೇವೆ. ಯಾವ ರಾಜಕೀಯವನ್ನು ಮಾಡಲಿಲ್ಲ. ಕಣ್ಣು ಮುಚ್ಚಿದಂತಹ ಪರಿಸ್ಥಿತಿಯಲ್ಲಿ ನಾನು ಮಾನ್ಯ ಸದಸ್ಯರಾದ ಲೈಕುದ್ದೀನ್, ಮಾನ್ಯ ಬಸವರಾಜ ಅಟ್ಟೂರ್, ಕಲ್ಯಾಣರಾವ್ ಎಲ್ಲರೂ ಹೋಗಿ ಐ.ಜಿ.ಪಿ. ಅವರನ್ನು ಡಿ.ಎಸ್.ಪಿ. ಅವರನ್ನು ಕರೆಸಿಕೊಂಡು ಶಾಂತಿಯನ್ನುಂಟು ಮಾಡಲು ಶ್ರಮಿಸಿದ್ದೇವೆ. ಜನರಿಗೆ ಊಟ ಇರಲಿಲ್ಲ. ಸ್ವಲ್ಪ ಜನರು ತೊಂದರೆಯಲ್ಲಿದ್ದರು. ವರ್ಷದಲ್ಲಿ ಬೆಳೆದ ಬೆಳೆಯಲ್ಲಿ ಒಂದು ಕಾಳು ಇಲ್ಲದಂತೆ ನಾಶವಾಗಿದೆ. ಅಲ್ಲಿ ಮಳೆ ಜಾಸ್ತಿಯಾಗಿದ್ದರೂ ಕೂಡ ಏನಾದರು ಬೆಳೆ ಆಗಿದ್ದರೆ ಅದನ್ನು ತರಲಿಕ್ಕೂ ಕೂಡ ಆಗುತ್ತಿಲ್ಲ ಅಷ್ಟು ತೊಂದರೆಯಾಗಿದೆ. ಆ ತೊಂದರೆಯನ್ನು ಸರಿಪಡಿಸುವುದಕ್ಕೆ ಎಲ್ಲ ಶಾಸಕರು ಶ್ರಮಿಸಿದ್ದೇವೆ. ಅಲ್ಲಿ ಎಲ್ಲರೂ ಒಂದಾಗಿ ಹೋಗುವುದಕ್ಕೆ ಯಾವ ಅಡ್ಡಿಯೂ ಬರಲಿಲ್ಲ. ಆದರೆ ಇಲ್ಲಿ ಬಂದರೆ ಅಡ್ಡಿ ಆಗುತ್ತಿದೆ. ಅಲ್ಲಿರತಕ್ಕಂಥ ಸಂಘ ಸಂಸ್ಥೆಗಳಾಗಲಿ ಬೇರೆ ಯಾರು ಲೀಡರ್ಸ್ ಇದ್ದಾರೆ ಅವರನ್ನು ಕೂಡಿಸಿ ಎದುರುಗಡೆ ಮಾತನಾಡಬೇಕು. ಆ ರೀತಿ ಮಾಡಿದರೆ ಒಳ್ಳೆಯದಾಗುತ್ತದೆ. ಮುಂದೆ ಏನು ತೊಂದರೆಯಾಗುವುದಿಲ್ಲ. ನೀವು ನಾವೇ ತೀರ್ಮಾನ ತೆಗೆದುಕೊಳ್ಳುವುದಾದರೆ ಏನು ಪ್ರಯೋಜನವಾಗುತ್ತದೆ. ಅಲ್ಲಿಯ ಜನರು ಬಹಳ ತೊಂದರೆ ಪಡುತ್ತಿದ್ದಾರೆ. ಮಿಷನ್‌ಗನ್ ತೆಗೆದುಕೊಂಡು ಬಂದಿದ್ದಾರೆ, ಬಾಂಬ್ ಸಿಡಿಸಿದ್ದಾರೆ. ಇದರಿಂದಾಗಿ ಎಷ್ಟೋ ಜನ ಹೆಣ್ಣು ಮಕ್ಕಳು ಭಯಪಟ್ಟು ಬೀದರ್ ಬಿಟ್ಟು ಹೋಗಿದ್ದಾರೆ. ಜನರ ಭಯ ಹೋಗಬೇಕಾದರೆ ನಾವು ಒಂದು ವಿಶೇಷವಾದ ಸಮಿತಿಯನ್ನು ಸ್ಥಾಪನೆ ಮಾಡಬೇಕು. ಲೋಕಲ್ ಲೀಡರ್ಸನ್ನು ಕರೆದು ಮಾತನಾಡಬೇಕು. ಇದು ಮೆಡಿಕಲ್ ಕಾಲೇಜಿಗೆ ಸಂಬಂಧಪಟ್ಟದಲ್ಲ. ತನಗೆ ತಾನೆ ಬೇಜಾರಾಗಿ ಜನತೆ ರೊಚ್ಚಿಗೆದ್ದಿದ್ದಾರೆ. ಎರಡು ವರ್ಷಗಳ ಹಿಂದೆ ಗಲಭೆಯಾದಾಗ ಕೇಸ್ ರಿಜಿಸ್ಟರ್ ಆಗಿದೆ. ಶಾಂತಿಯಿಂದ ಇದ್ದ ಬೀದರ್ ಜನರು ರೊಚ್ಚಿಗೇಳುವಂಥ ಕೆಲಸ ಮಾಡಿದ್ದಾರೆ. ಇದೆಲ್ಲ ಹಿಂದಿನ ಘಟನೆಗಳು ನಡೆದಿದ್ದರಿಂದ ಜನರು ರೊಚ್ಚಿಗೆದ್ದಿದ್ದಾರೆ. ಇದರಲ್ಲಿ ಯಾವ ರಾಜಕೀಯವು ಇಲ್ಲ. ದಯವಿಟ್ಟು ಜ್ಯುಡಿಷಿಯಲ್ ಎನ್‌ಕ್ವಯರಿ ಮಾಡಿಸಿ. ಆಮೇಲೆ ಎಸ್.ಪಿ. ಯವರ ಮೇಲೆ ಹೇಳಿದ್ದಾರೆ. ಅಲ್ಲಿ ಎಸ್.ಪಿ. ಯವರು ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತಿತ್ತು. ಒಬ್ಬ ಸಬ್ ಇನ್‌ಸ್ಪೆಕ್ಟರ್ ತಲೆಕಡಿಯುವ ಸಂದರ್ಭದ ಹಿನ್ನೆಲೆಯಲ್ಲಿ ಫೈರ್ ಮಾಡಿದರು. ಇಲ್ಲದಿದ್ದರೆ ಅವರ ಜೀವ ಉಳಿಯುತ್ತಿರಲಿಲ್ಲ. ಸಾವಿರಾರು ಜನರನ್ನು ಕಂಟ್ರೋಲ್ ಮಾಡುವುದಕ್ಕಾಗುತ್ತಿರಲಿಲ್ಲ. ಅಂದು ಗಣೇಶ ಚತುರ್ಥಿ ಇದ್ದ ಕಾರಣ ಎಲ್ಲ ಕಡೆ ಬಂದೋಬಸ್ತು ಮಾಡಿದ್ದರು. ಅವರು ಎಷ್ಟು ಬಂದೋಬಸ್ತು ಮಾಡಲು ಸಾಧ್ಯವೋ ಅಷ್ಟೋ ಬಂದೋಬಸ್ತ್ ಮಾಡಿದ್ದರು. ಇಲ್ಲದಿದ್ದರೆ ಸಾವಿರಾರು ಜನರು ಸಾಯುತಕ್ಕಂಥ ಪರಿಸ್ಥಿತಿ ಇತ್ತು. ಎಲ್ಲರು ಒಟ್ಟಾಗಿ ಹೋಗಿ ಬಂಗಲೆಯ ಸುತ್ತ ಸುತ್ತಾಡಿ ಅಲ್ಲಿನ ಕಂಬವನ್ನು ಒಡೆದು ಹಾಕಿ ಗಲಾಟೆ ಮಾಡಿರುತ್ತಾರೆ. ಆ ಕಡೆ ಜನರು ಈ ಕಡೆ ಸಿಕ್ಕರು ಇದ್ದು ಗಲಭೆ ನಡೆಯುತ್ತಿದ್ದಾಗ ಪೋಲೀಸ್‌ನವರು ಗಲಭೆಯನ್ನು ಹತೋಟಿಗೆ ತಂದುದರಿಂದ ಇಷ್ಟಾದರೂ ಉಳಿದಿದೆ. ಇಲ್ಲವಾಗಿದ್ದಲ್ಲಿ ಇನ್ನು ಹೆಚ್ಚಿನ ಹಾನಿ ಆಗತಕ್ಕಂಥ ಪರಿಸ್ಥಿತಿ ಇತ್ತು. ಈಗಲೂ ಕೂಡ ಇದರಲ್ಲಿ ಯಾರೂ ಸಹ ರಾಜಕೀಯವನ್ನು ತರಬಾರದು. ಒಳ್ಳೆಯ ರೀತಿಯಿಂದ ಶಾಂತಿಪೂರ್ವಕವಾಗಿ ಜೀವನ ಮಾಡುವುದಕ್ಕೆ ಏನು ಮಾಡಬೇಕೋ ಆ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ವಿಶೇಷವಾಗಿ ಚರ್ಚೆ ಮಾಡಿ ಅವರ ಮನಸ್ಸಿಗೆ ನೋವಾಗುವ

ಕೆಲಸ ಆಗಬಾರದು. ಚರ್ಚೆ ಮಾಡುವಾಗ ಸಿಖ್‌ರ ಕಡೆಯವರು, ಹಿಂದುಗಳ ಕಡೆಯವರು ಎಂಬ ಭಾವನೆ ಬರಬಾರದು. ಆ ಭಾವನೆ ಬಾರದಂತೆ ಎಲ್ಲರೂ ಸೆನ್ಸಿಟೀವ್ ಆಗಿ ಹೋಗಬೇಕು. ದಯವಿಟ್ಟು ಇದರ ಬಗ್ಗೆ ಹೆಚ್ಚಿಗೆ ಚರ್ಚೆ ಮಾಡುವುದು ಬೇಡ. ಒಟ್ಟಿನಲ್ಲಿ ಈ ನಿಲುವಳಿ ಸೂಚನೆಯನ್ನು ಏನು ತಂದಿದ್ದಾರೆ ಅದನ್ನು ತಳ್ಳಿ ಹಾಕಬೇಕೆಂದು ಹೇಳಿ, ನನಗೆ ಈ ಎರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಲ್ಯಾಣರಾವ್ ಎನ್. ಮೊಳಕೇರಿ (ಭಾಲ್ಕಿ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಬೀದರ್‌ನಲ್ಲಿ ನಡೆದಿರತಕ್ಕ ಘಟನೆ ಬಗ್ಗೆ ಎಲ್ಲಾ ಹಿರಿಯರು ಸಾಕಷ್ಟು ಮಾತನಾಡಿದ್ದಾರೆ. ನಾನು ಹೆಚ್ಚಿನ ವಿವರಕ್ಕೆ ಹೋಗುವುದಿಲ್ಲ. ನಾನು ವಿದ್ಯಾನಗರ ಕಾಲೋನಿಯಲ್ಲಿ ವಾಸವಾಗಿರುವುದರಿಂದ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ೧೪ನೇ ತಾರೀಖಿನ ದಿವಸ ದೊಡ್ಡ ಘಟನೆ ನಡೆಯಿತು, ಅವತ್ತಿನ ದಿವಸ ಮುಂಜಾಗರೂಕತೆ ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತು ಎಂದು ಎಲ್ಲರೂ ಹೇಳಿದ್ದಾರೆ. ಆದರೆ ೧೪ರಂದು ಹೇಳಿಕೊಳ್ಳತಕ್ಕ ರೀತಿಯಲ್ಲಿ ಯಾವ ಘಟನೆಯೂ ನಡೆದಿಲ್ಲ. ಆ ದಿವಸದ ಒಂದು ಸಮಾಚಾರವನ್ನು ಹೇಳುತ್ತಿದ್ದಾರೆ. ಗಣೇಶನ ಚಂದಾ ವಸೂಲ್ಮಾಡುವಾಗ ಒತ್ತಾಯ ಮಾಡಿದ್ದರಿಂದ ಒಂದು ಕಿರಿಕಿರಿ ಪ್ರಾರಂಭವಾಯಿತು ಎಂದು ಒಂದು ಕಡೆ ಹೇಳಿದರೆ ಇನ್ನೊಂದು ಕಡೆ ಹೇಳುತ್ತಿದ್ದಾರೆ, ಏನೆಂದರೆ, ರೈಲ್ವೆ ಸ್ಟೇಷನ್ನಿಗೆ ಬರತಕ್ಕ ಸಂದರ್ಭದಲ್ಲಿ ಸಿಖ್ ವಿದ್ಯಾರ್ಥಿಗಳು ಹೆಣ್ಣುಮಕ್ಕಳನ್ನು ಚುಡಾಯಿಸಿದ್ದರಿಂದ ಕಿರಿಕಿರಿ ಪ್ರಾರಂಭವಾಯಿತು ಎಂದು. ಅಷ್ಟರೊಳಗೆ ವಿದ್ಯಾರ್ಥಿಗಳು ಆ ಕಡೆ ಹೋದರು, ಅಲ್ಲಿ ಜಗಳ ಪ್ರಾರಂಭವಾಯಿತು. ಇಂಥ ಜಗಳಗಳು ಹತ್ತಾರು ಸಾರಿ ನಡೆದಿವೆ. ಕೇಸ್ ಕೊಟ್ಟಿದ್ದರೆ ಕೇಸ್ ರಿಜಿಸ್ಟರ್ ಆಗುತ್ತಿತ್ತು. ಸಿಖ್ ವಿದ್ಯಾರ್ಥಿಗಳು ಸುಮಾರು ೪–೫ ಮನೆಯೊಳಗೆ ರೂಂ ಮಾಡಿಕೊಂಡು ಇದ್ದರು. ಅವರು ಒಂದೇ ರೂಂನಲ್ಲಿ ಇದ್ದಾರೆಂದರೆ ಮಾತು ಬೇರೆ ಆಗುತ್ತದೆ. ವಿದ್ಯಾನಗರ ಕಾಲೋನಿಯಲ್ಲಿ ಪತ್ರಕರ್ತರ ಕಾಲೋನಿಯಲ್ಲಿ, ಗಾಂಧಿನಗರದಲ್ಲಿ ಹೀಗೆ ಎಲ್ಲಾ ಕಡೆ ರೂಂ ಮಾಡಿಕೊಂಡು ಇದ್ದಾರೆ. ನನ್ನ ಸ್ವಂತ ಮನೆ ವಿದ್ಯಾನಗರ ಕಾಲೋನಿಯಲ್ಲಿ ಇದೆ. ನಾನು ರಾತ್ರಿ ಸ್ವಲ್ಪ ತಡವಾಗಿ ಜೀಪ್ ತೆಗೆದುಕೊಂಡು ಹೋದಾಗ ಅಲ್ಲಿ ಅಂಜಿಕೊಂಡು ಹೋಗತಕ್ಕ ಪ್ರಸಂಗ ಒದಗಿತು. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ೧೪ರಂದು ಗಣೇಶ ಚತುರ್ಥಿಯ ದಿವಸ ಚಂದಾ ವಸೂಲಿಯ ಸಂದರ್ಭದಲ್ಲಿ ಸಣ್ಣಪುಟ್ಟ ಘಟನೆಗಳು ಗಾಂಧಿನಗರದಲ್ಲಿ ಮತ್ತು ವಿದ್ಯಾನಗರ ಕಾಲೋನಿಯಲ್ಲಿ ನಡೆದಿರಬಹುದು. ಪೊಲೀಸರು ರಾತ್ರಿ ಬಂದಾಗ ಅಂಥ ಯಾವುದೇ ದೊಡ್ಡ ಘಟನೆ ನಡೆಯಲಿಲ್ಲ. ಮುಂಜಾನೆ ೧೧ ಗಂಟೆಯವರೆಗೆ ಅಂಥ ಯಾವುದೇ ಘಟನೆ ನಡೆಯಲಿಲ್ಲ. ನೂರಾರು ಜನ ಸಿಖ್ ವಿದ್ಯಾರ್ಥಿಗಳು ತಳವಾರ ತೆಗೆದುಕೊಂಡು ಓಡಾಡಿಕೊಂಡು ಜಯಕಾರ ಮಾಡುತ್ತಾ ಜನರ ಮಧ್ಯೆ ಬಂದಾಗ ಐಯ್ಯಂಗಾರ್ ಸಬ್ ಇನ್ಸ್‌ಪೆಕ್ಟರ್ ಕೃಷ್ಣಪ್ಪ ಎಂಬ ಸಬ್ ಇನ್ಸ್‌ಪೆಕ್ಟರಿಗೆ ಸಿಖ್ ಜನ ಬಂದಿದ್ದಾರೆಂದು ಫೋನ್ ಮಾಡಿದ್ದಾರೆ ಐಯ್ಯಂಗಾರ್ ಸಬ್ ಇನ್ಸ್‌ಪೆಕ್ಟರ್ ಸಿಖ್ ವಿದ್ಯಾರ್ಥಿಗಳ ಮೇಲೆ ಹೊಡೆಯುವುದಕ್ಕೆ ಹೋದರು ಎಂದು ತಪ್ಪಿಸಿಕೊಂಡು ಬಂದಾಗ ಬೇರೆ ಜನ ಸುತ್ತಮುತ್ತ ಇದ್ದವರು ರೊಚ್ಚಿಗೆದ್ದ ಕಾರಣ ಕೃಷ್ಣಪ್ಪ ಎಂಬ ಸಬ್ ಇನ್ಸ್‌ಪೆಕ್ಟರ್ ಫೈರಿಂಗ್ ಮಾಡಿದಾಗ ವಿಜ್ಞಾನ ಕಾಲೇಜಿನೊಳಗೆ ಸಿಖ್ ವಿದ್ಯಾರ್ಥಿಗಳು ಓಡುವುದಕ್ಕೆ ಪ್ರಾರಂಭಿಸಿದರು. ಅವತ್ತಿನ ದಿವಸ ಇಡೀ ಜಿಲ್ಲಾ ಮಟ್ಟದಲ್ಲಿ ಗಣೇಶ ಚತುರ್ಥಿ ನಡೆಯುತ್ತಿದ್ದುದರಿಂದ ಅಲ್ಲೆಲ್ಲ ಪೊಲೀಸ್ ವ್ಯವಸ್ಥೆ ಮಾಡಲಾಗಿತ್ತು. ಹೀಗಾಗಿ ಹೆಡ್‌ಕ್ವಾರ್ಟರ್ಸ್‌ನಲ್ಲಿ ೫–೬ ಜನ ಪೊಲೀಸರನ್ನು ಬಿಟ್ಟರೆ ಬೇರೆ ಇರಲಿಲ್ಲ. ಉಳಿದವರೆಲ್ಲ ಗಣೇಶೋತ್ಸವ ನಡೆಯುತ್ತಿದ್ದ ಕಡೆಗಳಿಗೆಲ್ಲ ಇಬ್ಬಿಬ್ಬರು ಹೋಗಿದ್ದರು. ವಿದ್ಯಾನಗರ ಕಾಲೋನಿಯಲ್ಲಿ ಗಲಭೆ ಪ್ರಾರಂಭವಾದಾಗ ಇದ್ದಂತಹ ಪೊಲೀಸರು ಹಾಗೂ ಡಿ. ವೈ. ಎಸ್. ಪಿ. ಮತ್ತು ಎಸ್. ಐ. ಬಂದು ತಕ್ಷಣ ಸಿಖ್ ವಿದ್ಯಾರ್ಥಿಗಳು ಎಲ್ಲಿದ್ದಾರೆಂದು ಪತ್ತೆ ಮಾಡಿ ಎಲ್ಲಾ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ಒಂದು ಕಡೆ ಇಟ್ಟರು. ಹೀಗಾಗಿ ಸಾವಿರಾರು ಸಿಖ್ ವಿದ್ಯಾರ್ಥಿಗಳು ಒಂದು ಕಡೆ ಆದರು. ಪೊಲೀಸ್ ಫೈರಿಂಗ್ ಮಾಡಿ ೧೦–೨೦ ಜನರನ್ನು ಕೊಲ್ಲಬಹುದು. ಅದಕ್ಕಿಂತ ಹೆಚ್ಚು ಜನರನ್ನು ಕೊಲ್ಲುವುದಕ್ಕೆ ಸಾಧ್ಯವಿಲ್ಲ. ಅಂಥ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಒಂದು ಕಡೆ ತೆಗೆದುಕೊಂಡು ಹೋಗುವ ಪ್ರಯತ್ನ ನಡೆಯಿತು. ಮನೆ ಸುಡತಕ್ಕ ಕಾರ್ಯಕ್ರಮ ಯಾವಾಗ ಪ್ರಾರಂಭವಾಯಿತು ಎಂದರೆ ಇಂಜಿನಿಯರಿಂಗ್ ಕಾಲೇಜು ಮಗ್ಗುಲಲ್ಲಿ ಗಾಂಧೀನಗರ ಕಾಲೋನಿ ಎಂದು ಇದೆ. ಆ ಗಾಂಧಿನಗರ ಕಾಲೋನಿ ಮತ್ತು ಗುರುನಾನಕ್ ಇಂಜಿನಿಯರಿಂಗ್ ಕಾಲೇಜು ಬಾರ್ಡರ್ ದಾಟಿ ವಿದ್ಯಾರ್ಥಿಗಳು ಮನೆ ಸುಡತಕ್ಕ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರು. ಅಲ್ಲಿರತಕ್ಕ ಒಬ್ಬನಿಗೆ ಕಾಲು ಕಡಿದಿದ್ದಾರೆ. ಒಬ್ಬ ಹೆಣ್ಣುಮಗಳ

---

†ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಹೊಟ್ಟೆಯ ಮೇಲೆ ಒದ್ದಿದ್ದರಿಂದ ಅವಳಿಗೆ ಹೊಟ್ಟೆ ನೋವು ಪ್ರಾರಂಭವಾಗಿದೆ. ಮೂರು ನಾಲ್ಕು ಮನೆಗಳನ್ನು ಸುಟ್ಟಿದ್ದಾರೆ. ಆದಾದಾಗ ಅದರ ರಿಪರ್‌ಕೇಷನ್ಸ್ ಮತ್ತೊಂದು ಕಡೆ ಆಗಿದೆ. ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ನಮ್ಮ ಮನೆ ಸುಡುತ್ತಿದ್ದಾರೆ ಎಂದು ಜನ ತಿಳಿದು ಕೊಂಡರು. ಆಗ ವಿದ್ಯಾನಗರ ಕಾಲೋನಿಯಲ್ಲಿ ಇದ್ದಂಥ ಪೋಲೀಸ್ ಫೋರ್ಸನ್ನು ಈ ಕಡೆ ತಂದರು. ಮತ್ತೆ ಗಾಂಧೀನಗರದಲ್ಲಿ ಗಲಭೆ ಆದಾಗ ಈ ಪೋಲೀಸರನ್ನು ಅಲ್ಲಿಗೆ ಕಳುಹಿಸಿದರು. ಹೀಗಾಗಿ ಅಲ್ಲಿರತಕ್ಕ ಪೋಲೀಸರಿಂದ ಗಲಭೆಯನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಗುರುನಾನಕ್ ಭವನದಲ್ಲಿ ಕಾರ್‌ಸೇವೆ ಮಾಡತಕ್ಕ ಜನರು ನಗರದಲ್ಲಿ ಬಂದು ಗುರುನಗರ ಕಾಲೋನಿಯಲ್ಲಿ ಮೂರು ನಾಲ್ಕು ಜನರ ಮನೆಯಲ್ಲಿ ಹಾನಿ ಮಾಡಿದ್ದಾರೆ. ಅಲ್ಲಿ ಜಿಲ್ಲಾ ಪರಿಷತ್ತಿನ ಕಾಂಗ್ರೆಸ್ ಸದಸ್ಯರಾದ ಸುಭಾಷ್ ಕಶ್ಯಪ್ ಎನ್ನುವವರಿಗೂ ಹೊಡೆದಿದ್ದಾರೆ. ಸೈಕಲ್ ಮೋಟಾರ್ ಸುಟ್ಟಿದ್ದಾರೆ. ಇದೆಲ್ಲಾ ಆದಾಗ ಗುರುನಗರದಲ್ಲಿರತಕ್ಕ ವಿದ್ಯಾರ್ಥಿಗಳಿಗೂ ಮತ್ತು ಬೇರೆ ಬೇರೆ ಜನರಿಗೂ ಮಧ್ಯ ಗಲಭೆ ಸ್ಟಾರ್ಟ್ ಆಗಿ ಬಿಯಾಂಡ್ ಕಂಟ್ರೋಲ್ ಆಗತಕ್ಕ ರೀತಿಯಲ್ಲಿ ನಗರದಲ್ಲಿ ವಾತಾವರಣ ನಿರ್ಮಾಣವಾಗಿತು. ಅಷ್ಟರೊಳಗೆ ಮಾನ್ಯ ಲೈಕುದ್ದೀನ್ ಸಾಹೇಬರು, ಸೂರ್ಯವಂಶಿ ಅವರು ಮತ್ತು ನಾನು ಪೋಲೀಸರ ಜೊತೆ ಸಂಪರ್ಕ ಬೆಳೆಸಿದೆವು. ಪೋಲೀಸ್ ಡಿ. ಐ. ಜಿ. ಅವರಿಗೆ ಮತ್ತು ಡಿ. ಜಿ. ಪಿ. ಅವರಿಗೆ ಫೋನ್ ಮೂಲಕ ಮಾತನಾಡಿದೆವು. ಮಾನ್ಯ ಮುಖ್ಯಮಂತ್ರಿಗಳನ್ನೂ ಫೋನ್ ಮೂಲಕ ಸಂಪರ್ಕ ಬೆಳೆಸಲು ಪ್ರಯತ್ನ ಪಟ್ಟಾಗ ಅವರು ಸಿಗಲಿಲ್ಲ. ಅವರು ಬಂದಕೂಡಲೇ ನನಗೆ ಫೋನ್ ಮಾಡಬೇಕೆಂದು ತಿಳಿಸಿದೆ. ೭ ಗಂಟೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಫೋನ್‌ನಲ್ಲಿ ನನ್ನ ಜೊತೆ ಮಾತನಾಡಿದರು. ಈಗಾಗಲೇ ಎಲ್ಲಾ ವಿಷಯಗಳನ್ನು ತಿಳಿದುಕೊಂಡಿದ್ದೇನೆ, ತಕ್ಷಣ ಎಲ್ಲಾ ಬಂದೋಬಸ್ತು ಮಾಡುತ್ತಿದ್ದೇನೆ, ಡಿ. ಐ. ಜಿ. ಬರುತ್ತಿದ್ದಾರೆ, ಡಿ. ಜಿ. ಪಿ. ಗೆ ಹೋಗುವುದಕ್ಕೆ ಹೇಳಿದ್ದೇನೆ, ತಾವೆಲ್ಲಾ ಸ್ಥಳಕ್ಕೆ ಹೋಗಿ ಶಾಂತಿಸ್ಥಾಪನೆ ಮಾಡಬೇಕು ಎಂದು ಮುಖ್ಯಮಂತ್ರಿಗಳು ತಿಳಿಸಿದರು. ಸೂರ್ಯವಂಶಿ ಅವರು ಮತ್ತು ನಾವು ಒಬ್ಬರಿಗೊಬ್ಬರು ರಾತ್ರಿಯೆಲ್ಲಾ ಮಾತನಾಡಿ ಕೊಂಡು ಶಾಂತ ವಾತಾವರಣ ಕಲ್ಪನೆ ಆಗುವಂತಹ ವ್ಯವಸ್ಥೆಯನ್ನು ಮಾಡಿಕೊಂಡೆವು. ನಾನು ಇಷ್ಟೇ ವಿನಂತಿ ಮಾಡುತ್ತಿದ್ದೇನೆ. ಈ ದುರ್ಘಟನೆ ನಮ್ಮ ಭಾಗದಲ್ಲಿ ಆಗಬಾರದಾಗಿತ್ತು, ಆದರೂ ಆಗಿ ಹೋಗಿದೆ. ಇದಕ್ಕೆ ಕೆಲವು ಜನರು ಮೆಡಿಕಲ್ ಕಾಲೇಜಿಗೆ ಸಂಬಂಧಪಟ್ಟಂತೆ ಈ ಘಟನೆ ೧೪ನೇ ತಾರೀಖು ೧೫ನೇ ತಾರೀಖು ನಡೆಯಿತು ಎಂದು ಹೇಳುತ್ತಿದ್ದಾರೆ. ಅದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳಬಹುದು. ಏಕೆಂದರೆ ಅಲ್ಲಿರತಕ್ಕ ಸಂಘಸಂಸ್ಥೆಗಳು ಆಗಲೀ ಜನರು ಆಗಲೀ ಅಲ್ಲಿ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್ ಬಂದನಂತರ ೯೦ ಪರ್ಸೆಂಟ್ ಜನ ಪಂಜಾಬಿನಿಂದ ಬಂದು ವಾಸ ಮಾಡುತ್ತಿದ್ದಾರೆ. ಹೊರಗಡೆಯವರಿಗೆ ಇಂಜಿನಿಯರಿಂಗ್ ಕಾಲೇಜು ಕೊಟ್ಟು ಸಾಕಾಗಿದೆ, ಮೆಡಿಕಲ್ ಕಾಲೇಜನ್ನೂ ಮತ್ತೆ ಕೊಟ್ಟರೆ ಮತ್ತಷ್ಟು ತೊಂದರೆಯಾಗುತ್ತದೆ ಎಂದು ಸರ್ವೇಸಾಧಾರಣವಾಗಿ ಜನರಲ್ಲಿ ಅಭಿಪ್ರಾಯವಿತ್ತು. ಅದಕ್ಕಾಗಿ ಅನೇಕ ಜನ ಶಾಸಕರು, ಪ್ರತಿಷ್ಠಿತ ಜನರು ಅವರಿಗೆ ಮೆಡಿಕಲ್ ಕಾಲೇಜು ಕೊಡಬೇಡಿ, ಕೊಡುವುದಿದ್ದರೆ ಲೋಕಲ್ ಜನರಿಗೆ ಕೊಡಿ, ಹೊರಗಡೆಯವರಿಗೆ ಕೊಟ್ಟು ಹೊಸ ವಾತಾವರಣ ಕ್ರಿಯೇಟ್ ಮಾಡಬೇಡಿ ಎಂದು ಅನೇಕ ವರ್ಷಗಳಿಂದ ಹೇಳುತ್ತಿದ್ದೆವು. ಆವತ್ತಿನ ಸಂದರ್ಭಕ್ಕೂ ಈ ಇಷ್ಯೂವಿಗೂ ಏನು ಸಂಬಂಧ ಇಲ್ಲ. ೧೪ನೇ ತಾರೀಖು ಸಣ್ಣಪುಟ್ಟ ಕಿರಿಕಿರಿ ಏನಾಯಿತು ಅಂಥದ್ದು ಅಲ್ಲಿ ಎಷ್ಟೋ ಸಾರಿ ಆಗಿವೆ. ಅಲ್ಲಿಗೆ ಹೆಚ್ಚಿನ ಪೋಲೀಸ್ ಫೋರ್ಸ್ ತರಬೇಕು, ಸಿಕ್ಕರು ಬರುತ್ತಾರೆ, ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಆಗುತ್ತದೆ ಎಂಬ ಕಲ್ಪನೆ ನಮಗೂ ಇರಲಿಲ್ಲ, ಜನರಿಗೂ ಇರಲಿಲ್ಲ. ಸ್ಪಾಂಟೇನಿಯಸ್ಸಾಗಿ ಇದು ನಡೆದಿದೆ. ಸಿಕ್ ವಿದ್ಯಾರ್ಥಿಗಳ ಅಸಭ್ಯ ವರ್ತನೆಗಳ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಜ್ಯುಡಿಷಿಯಲ್ ಎನ್‌ಕ್ವೈರಿ ಆದಾಗ ಎಲ್ಲಾ ಗೊತ್ತಾಗುತ್ತದೆ. ಅವರು ಹೆಣ್ಣುಮಕ್ಕಳ ಜೊತೆ ಯಾವ ರೀತಿ ವರ್ತನೆ ಮಾಡುತ್ತಿದ್ದರು, ಸೈಕಲ್ ಮೋಟಾರ್‌ನಲ್ಲಿ ಯಾವರೀತಿ ಬರುತ್ತಿದ್ದರು, ಸಿನಿಮಾ ಥಿಯೇಟರ್‌ನಲ್ಲಿ ಯಾವರೀತಿ ವರ್ತನೆ ಮಾಡುತ್ತಿದ್ದರು ಎಂಬುದು ಎಲ್ಲರಿಗೂ ಗೊತ್ತಿದೆ. ಅದೇ ಕಮ್ಯುನಿಟಿಯವರನ್ನು ಚುಡಾಯಿಸುವುದಾಗಲೀ ಲವ್ ಅಫೇರ್ಸ್ ಮಾಡುವುದಾಗಲೀ ಮಾಡಿದರೆ ದೊಡ್ಡದಾಗುವುದಿಲ್ಲ. ಆದರೆ ಒಂದು ಸಮಾಜದವರು ಇನ್ನೊಂದು ಸಮಾಜದವರಿಗೆ ಆ ರೀತಿ ಮಾಡಿದರೆ ದೊಡ್ಡ ಘಟನೆಯಾಗುತ್ತದೆ. ಆ ರೀತಿ ಸಿಕ್ ಸಮಾಜದವರೇ ಓಡಾಡುತ್ತಾರೆ ಎಂದು ಹೇಳುವುದಿಲ್ಲ. ಎಲ್ಲ ಸಮಾಜದವರೂ ಓಡಾಡುತ್ತಾರೆ. ೧೪ನೇ ತಾರೀಖು ಘಟನೆ ಆದನಂತರ ಪರಿಸ್ಥಿತಿ ವಿಕೋಪಕ್ಕೆ ಹೋಗುವ ರೀತಿಯಲ್ಲಿ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು ವರ್ತನೆ ಮಾಡಿದ್ದರಿಂದ ಈ ದುರ್ಘಟನೆ ನಡೆದಿದೆ. ಇದು ಕೇವಲ ಕೆಲವು ಗುಂಪುಗಳ ನಡುವೆ ನಡೆದಿರತಕ್ಕ ಘಟನೆ. ಇದರಲ್ಲಿ ಯಾವುದೇ ರಾಜಕೀಯ ಪಕ್ಷದ್ದಾಗಲೀ, ಯಾವುದೇ ಆರ್ಗನೈಜೇಸನ್‌ನ ಕೈವಾಡವಾಗಲೀ ಇಲ್ಲ. ಕಾಂಗ್ರೆಸ್, ಜನತಾ, ಬಿಜೆಪಿ, ಹೀಗೆ ಯಾವುದೇ ರಾಜಕೀಯ ಪಕ್ಷಗಳ ಕೈವಾಡ

ಇದರಲ್ಲಿ ಇಲ್ಲ. ಈಗಾಗಲೇ ಸರ್ಕಾರ ಈ ಒಂದು ಘಟನೆಯ ಬಗ್ಗೆ ನ್ಯಾಯಾಂಗ ವಿಚಾರಣೆಗೆ ಆಜ್ಞೆ ಮಾಡಿದೆ. ವಿಚಾರಣೆಯಾಗಿ ನಿಜಾಂಶ ಹೊರಗೆ ಬರಲಿ. ಅದು ಹೊರಗೆ ಬಂದ ಮೇಲೆ ಯಾರು ತಪ್ಪಿತಸ್ಥರು ಇದ್ದಾರೆ, ಅವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಲಾಗುವುದೆಂದು ಸರ್ಕಾರ ಈಗಾಗಲೇ ಹೇಳಿದೆ. ಈಚೆಗೆ ಅಲ್ಲಲ್ಲಿ ಸ್ಟೇಟ್‌ಮೆಂಟ್‌ಗಳು ಬರುತ್ತಿವೆ. ಅದು ಯಾವ ರೀತಿಯದ್ದು ಎಂದರೆ, ದೆಹಲಿಯಲ್ಲಿರುವ ಕರ್ನಾಟಕ ಭವನವನ್ನು ಸ್ಫೋಟಿಸುತ್ತೇವೆ, ಮತ್ತೆ ಕಾವೇರಿ ಎಂಪೋರಿಯಂ ಅನ್ನು ಸ್ಫೋಟನೆ ಮಾಡುತ್ತೇವೆ ಎಂಬುದಾಗಿ ಸ್ಟೇಟ್‌ಮೆಂಟ್‌ಗಳು ಬರುತ್ತಿವೆ. ಇದರಿಂದ ಪುನಃ ಉಳಿದಿರತಕ್ಕ ಸುಮಧುರ ಭಾವನೆಗೆ ತದ್ವಿರುದ್ಧವಾದ ಪರಿಣಾಮ ಬೀರುತ್ತದೆ. ಆದ್ದರಿಂದ ಈ ವೇದಿಕೆ ಮುಖಾಂತರ ಹಾಗೂ ಮಾನ್ಯ ಅಧ್ಯಕ್ಷರ ಮೂಲಕ ನಮ್ಮ ಸಿಖ್ ಬಾಂಧವರಿಗೆ ಕಳಕಳಿಯಿಂದ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಭಾರತದಲ್ಲಿರತಕ್ಕ ಪ್ರತಿಯೊಬ್ಬ ನಾಗರೀಕರೂ ನಮ್ಮ ಬಂಧು ಭಾಂದವರೆ, ನಮ್ಮ ಬೀದರ್ ಜನರಿಂದ ಏನಾದರೂ ತಪ್ಪುಗಳಾಗಿದ್ದಲ್ಲಿ ಅದನ್ನು ಮನ್ನಿಸಿ ಕೊಳ್ಳಬೇಕು. ವಿಚಾರಣೆಯಾದ ಮೇಲೆ ತಪ್ಪಿತಸ್ಥರು ಯಾರೇ ಇರಲಿ ಅವರಿಗೆ ಶಿಕ್ಷೆಯಾಗುತ್ತದೆ. ಕೇಂದ್ರ ಸರ್ಕಾರ ಕೂಡ ಈಗಾಗಲೇ ಇದಕ್ಕೆ ತಮ್ಮ ಸಹಕಾರ ಕೊಡುವುದಾಗಿ ತಿಳಿಸಿದೆ. ಎಲ್ಲಾ ದೃಷ್ಟಿಯಿಂದ ಈ ಗಲಭೆಯನ್ನು ಸಿಖ್ ಬಾಂಧವರು ಹಾಗೂ ಹಿಂದೂಗಳ ನಡುವೆ ಆದಂತಹ ಘಟನೆ ಎಂಬುದಾಗಿ ತಿಳಿದುಕೊಳ್ಳದೆ, ಇದು ಒಂದು ತಿಳಿಯದ ಗುಂಪಿನ ನಡುವೆ ಆಗಿರತಕ್ಕ ಘಟನೆ ಎಂಬುದಾಗಿ ತಿಳಿದುಕೊಳ್ಳಬೇಕು. ಆಗಿರತಕ್ಕ ಘಟನೆಯನ್ನು ಎಲ್ಲರೂ ಖಂಡಿಸೋಣ. ಈ ಅಧಿವೇಶನ ಮುಗಿದ ನಂತರ ಎಲ್ಲ ಪಕ್ಷದ ಶಾಸಕರು ಸೇರಿ ಕೊಂಡು ವಿವಿಧ ಮತಗಳ ಮುಖಂಡರುಗಳನ್ನು ಕರೆದು ಕೊಂಡು ಹೋಗಿ ಗಲಭೆಗೆ ಒಳಗಾಗಿರುವಂತಹ ಮನೆಗಳಿಗೆ ಹೋಗಿ, ಅವರು ಹಿಂದೂ ಇರಬಹುದು, ಮುಸ್ಲೀಂ ಇರಬಹುದು, ಕ್ರಿಶ್ಚಿಯನ್ ಇರಬಹುದು, ಅವರೆಲ್ಲರನ್ನೂ ಕುರಿತು, ಆಗಿರತಕ್ಕ ಘಟನೆಯನ್ನು ಮರೆತು ಬಿಡಿ, ತಪ್ಪಿತಸ್ಥರು ಯಾರು ಇದ್ದಾರೆ, ಅವರ ಮೇಲೆ ಕಾನೂನು ಕ್ರಮ ತೆಗೆದು ಕೊಳ್ಳುವ ಕೆಲಸವನ್ನು ಸರ್ಕಾರ ಮಾಡುತ್ತದೆ, ಎಂಬುದಾಗಿ ಎಲ್ಲರಿಗೂ ಹೇಳಬೇಕೆಂದು ನಮ್ಮ ಜಿಲ್ಲೆಯ ಎಲ್ಲ ಪಕ್ಷದ ನಾಯಕರು ಒಂದು ಒಮ್ಮತಕ್ಕೆ ಬಂದಿದ್ದೇವೆ. ಸೂರ್ಯವಂಶಿಯವರು, ಬಸವರಾಜ್ ಪಾಟೀಲ್ ಅಟ್ಟೂರ್ ಅವರು ಭೀಮಣ್ಣ ಖಂಡ್ರೆಯವರು, ಹುಮ್ನಾಬಾದಿನ ಬಸವರಾಜ್ ಪಾಟೀಲ್ ರವರು ಕೂಡಿ ಕೊಂಡು ಅಲ್ಲಿ ಶಾಂತಿ ನೆಲೆಸುವಂತಹ ಕೆಲಸ ಮಾಡುತ್ತೇವೆ. ಅದಕ್ಕೆ ತಾವುಗಳೆಲ್ಲರೂ ನಮಗೆ ಶಕ್ತಿಯನ್ನು ತುಂಬಬೇಕು. ಇಲ್ಲಿ ಇರತಕ್ಕ ಎಲ್ಲ ರಾಜಕೀಯ ಪಕ್ಷಗಳ ಹಿರಿಯರ ತಿಳುವಳಿಕೆ ಹಾಗೂ ಮಾರಲ್ ಸಪೋರ್ಟ್ ನಮಗೆ ಬೇಕು. ಬೀದರ್‌ನಲ್ಲಿ ಮತ್ತೊಮ್ಮೆ ಇಂತಹ ದುರ್ಘಟನೆ ನಡೆಯದ ಹಾಗೆ ರಾಜ್ಯ ಸರ್ಕಾರ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಅಲ್ಪಸಂಖ್ಯಾತರು, ದೀನದಲಿತರು ಹಾಗೂ ಇನ್ನಿತರ ಬೇರೆ ಜನಾಂಗದವರು ಯಾರ್‍ಯಾರು ಇದ್ದಾರೆ, ಅವರಿಗೆ ಇನ್ನು ಮುಂದಾದರೂ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳಲು ಸರ್ವ ಪ್ರಯತ್ನ ಮಾಡುತ್ತೇನೆಂಬ ಆತ್ಮ ವಿಶ್ವಾಸವನ್ನು ನಾನು ವ್ಯಕ್ತಪಡಿಸುತ್ತೇನೆ. ಬೀದರ್‌ನಲ್ಲಿ ಆಗಿರತಕ್ಕ ಘಟನೆ ಆಕಸ್ಮಿಕವೇ ಹೊರತು ದುರುದ್ದೇಶದಿಂದ ಕೂಡಿದ್ದು ಅಲ್ಲವೆಂದು ಮತ್ತೊಮ್ಮೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ಇದರಲ್ಲಿ ಯಾವುದೇ ರಾಜಕೀಯ ಪಕ್ಷಗಳ ಕೈವಾಡ ಇಲ್ಲ. ಅದು ಏನೇ ಇದ್ದರೂ ಕೂಡ ನ್ಯಾಯಾಂಗ ವಿಚಾರಣೆಯಾದ ಮೇಲೆ ಸತ್ಯಾಂಶ ಹೊರಗೆ ಬರುತ್ತದೆ. ತಪ್ಪಿಸ್ತರು ಯಾರೇ ಇರಲಿ, ಎಷ್ಟೇ ದೊಡ್ಡವರು ಇರಲಿ, ಅವರ ಬಗ್ಗೆ ಉಗ್ರ ಕ್ರಮ ತೆಗೆದುಕೊಳ್ಳಬೇಕೆಂದು ಒಂದೇ ಮನಸ್ಸಿನಿಂದ ನಾವೆಲ್ಲರೂ ನಮ್ಮಗಳ ಏಕಾಭಿಪ್ರಾಯವನ್ನು ವ್ಯಕ್ತಪಡಿಸೋಣ. ಬೀದರ್ ಜಿಲ್ಲೆಯ ಜಿಲ್ಲಾ ಪೋಲೀಸ್ ಅಧಿಕಾರಿಗಳು ಘಟನೆಯನ್ನು ಕಂಟ್ರೋಲ್ ಮಾಡುವುದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆಗಿದೆ. ಅದಕ್ಕೆ ಹೆಚ್ಚಿನ ಮಹತ್ವ ಕೊಡಬಾರದು. ಅಲ್ಲಿ ಈಗಾಗಲೇ ಶಾಂತಿ ವಾತಾವರಣ ಮೂಡುತ್ತಿದೆ. ಅಲ್ಲಿ ಮತ್ತಷ್ಟು ಶಾಂತ ವಾತಾವರಣ ಮೂಡುವ ಹಾಗೆ ನಾವುಗಳೆಲ್ಲರೂ ಪ್ರಯತ್ನ ಮಾಡೋಣ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಬೀದರ್ ಜಿಲ್ಲೆಯ ಎಲ್ಲ ಶಾಸಕರಿಗೂ ಅವಕಾಶ ಮಾಡಿಕೊಟ್ಟಿದ್ದೇನೆ. ಅದರಲ್ಲಿ ಶ್ರೀಮತಿ ಶಿವಕಾಂತ ಚತುರೆ ಇಲ್ಲ, ಅದೇ ಶ್ರೀ ಗುರುಪಾದಪ್ಪ ಇಲ್ಲ. ಈಗ ಶ್ರೀ ಬಿ. ಎಸ್. ಯಡಿಯೂರಪ್ಪನವರು ಮಾತನಾಡಲಿ.

†ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೆ, ಅನೇಕ ವರ್ಷಗಳಿಂದ ಬೀದರ್‌ನಲ್ಲಿ ಸೌಹಾರ್ದ ಮನೋಭಾವದಿಂದ ಜೀವನ ನಡೆಸುತ್ತಿರತಕ್ಕಂತಹ ಸಿಖ್ ಮತ್ತು

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಹಿಂದೂ ಬಾಂಧವರ ನಡುವೆ ನಡೆದಿರತಕ್ಕ ಈ ಘಟನೆ ತುಂಬಾ ಅಮಾನುಷವಾದುದು. ಇದು ಯಾರಿಗೂ ಗೌರವ ತರುವ ವಿಷಯವಲ್ಲ. ಸ್ಥಳೀಯ ಶಾಸಕರು, ಅಲ್ಲಿ ನಡೆದಿರತಕ್ಕ ಘಟನೆಗೆ ಕಾರಣಗಳು ಏನೇನು ಎಂಬುದರ ನೈಜ ಸಂಗತಿಗಳನ್ನು ತಿಳಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅಲ್ಲಿ ವ್ಯಾಸಂಗ ಮಾಡುತ್ತಿರತಕ್ಕಂತಹ ಸಿಖ್ ವಿದ್ಯಾರ್ಥಿಗಳು ಅಲ್ಲಿನ ಹೆಣ್ಣು ಮಕ್ಕಳ ಜೊತೆ ನಡೆದುಕೊಳ್ಳುವ ರೀತಿ ಮಿತಿ ಮೀರಿ ನಡೆದಿತ್ತು. ಇದನ್ನು ನೋಡಿದ ಆ ಭಾಗದ ಕರ್ನಾಟಕದ ಬಾಂಧವರು ಬೇಸರಪಟ್ಟುಕೊಂಡಿದ್ದರು ಎಂಬ ಹಿನ್ನೆಲೆಯನ್ನು ಕೆಲವು ಸ್ಥಳೀಯ ಶಾಸಕರು ಹೇಳಿದರು. ಮುಖ್ಯ ಮಂತ್ರಿಗಳು ಹಾಗೂ ರಾಜ್ಯದ ಇತರ ಮಂತ್ರಿಗಳು ಅಲ್ಲಿಗೆ ಹೋದಾಗ ಅವರಿಗೆ ಅಲ್ಲಿನ ಜನ ನಡೆದ ವಿಷಯವನ್ನು ತಿಳಿಸಿದ್ದಾರೆ. ಇವತ್ತಿನ ದಿವಸ ಪಂಜಾಬ್‌ನಲ್ಲಿ ನಡೆಯುತ್ತಿರುವ ಘಟನೆಗಳನ್ನು ನೋಡಿ ಭಯಭೀತರಾಗಿರುವ ವಾತಾವರಣದಲ್ಲಿ ಅಲ್ಲಿರುವ ಸಿಖ್ ಜನತೆಗೆ ಇಲ್ಲಿಯ ಘಟನೆ ಬಗ್ಗೆ ತಪ್ಪು ಕಲ್ಪನೆ ಮೂಡಿಸಿರಬಹುದು. ಇಲ್ಲಿನ ಘಟನೆಯ ನಿಜಸ್ಥಿಯನ್ನು ಅವರಿಗೆ ಮನವರಿಕೆ ಮಾಡಿದಲ್ಲಿ ಈ ರೀತಿ ಅಭಿಪ್ರಾಯಗಳು ಬರಲಾರವು. ಈ ಬಗ್ಗೆ ವಿಶೇಷ ಗಮನ ಕೊಟ್ಟು ಯಾರೇ ಈ ರೀತಿ ಮಾಡಿದರೂ ಪೋಲೀಸರು ಎಚ್ಚರಿಕೆ ವಹಿಸಿ ಕ್ರಮವಹಿಸಿದ್ದರೆ ಈ ಒಂದು ಘಟಕ್ಕೆ ಇದು ತಲುಪುತ್ತಾ ಇರಲಿಲ್ಲ. ಈ ಸಮಯದಲ್ಲಿ ಸರ್ಕಾರದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ರಾಜಕೀಯ ಪಕ್ಷಗಳ ಮುಖಂಡರನ್ನು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಏನೆಂದರೆ ಸಿಕ್ ಮುಖಂಡರಲ್ಲಿ ಯಾವ ರೀತಿ ಈ ಘಟನೆ ಆಯಿತು ಎಂದು ಹೇಳಿ ಅವರ ಮನಸ್ಸನ್ನು ಒಲಿಸಿಕೊಳ್ಳಬೇಕು ಆ ಜಿಲ್ಲೆಯಲ್ಲಿ ಎಲ್ಲರೂ ಅಣ್ಣತಮ್ಮಂದಿರ ಹಾಗೆ ಏನು ಹಿಂದಿನಿಂದ ಸೌಹಾರ್ದಯುತವಾಗಿ ಬೆಳೆದು ಬರುತ್ತಿದ್ದಾರೆ ಅದನ್ನು ಮುಂದುವರೆಸಿಕೊಂಡು ಹೋಗುವ ಬಗ್ಗೆ ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಬೇಕು. ಇವತ್ತು ಸಿಕ್ ವಿದ್ಯಾರ್ಥಿಗಳು ಏನು ವಿದ್ಯಾಭ್ಯಾಸವನ್ನು ಅರ್ಧಕ್ಕೆ ಬಿಟ್ಟು ಹೋಗಿದ್ದಾರೆ ಅವರ ವಿದ್ಯಾಭ್ಯಾಸದ ಬಗ್ಗೆಯೂ ಅನುಕೂಲ ಮಾಡಿಕೊಡಬೇಕಾಗುತ್ತದೆ. ನಾವೆಲ್ಲರೂ ಅಣ್ಣತಮ್ಮಂದಿರ ರೀತಿಯಲ್ಲಿ ಬಾಳಬೇಕಾಗುತ್ತದೆ. ಇವತ್ತು ಅಲ್ಲಿನ ಭಯದ ವಾತಾವರಣವನ್ನು ಹೋಗಲಾಡಿಬೇಕಾಗಿದೆ. ಇವತ್ತು ಅಲ್ಲಿನ ಜನರ ಅವರವರ ಮೊಹಲ್ಲಾದಲ್ಲಿ ಇಲ್ಲ ಎಂದು ಶಾಸಕರು ಹೇಳಿದ್ದಾರೆ. ಎಲ್ಲಾ ಜನರು ವಾಪಸ್ ಬಂದು ಅಲ್ಲಿ ವಾಸ ಮಾಡಬೇಕಾಗಿದೆ. ಇಂತಹ ಘಟನೆಗಳು ಮರುಕಳಿಸಬಾರದು. ಇಂತಹ ಸಮಯದಲ್ಲಿ ಪೋಲೀಸರೂ ಕೂಡ ವಿಶೇಷ ಗಮನಹರಿಸಿದ್ದರೆ, ಒಳ್ಳೆಯ ಪ್ರಯತ್ನ ಮಾಡಿದ್ದರೆ ಇಂತಹ ಘಟನೆಗಳು ನಡೆಯುತ್ತಿರಲಿಲ್ಲ. ಇವತ್ತು ಕಂಪ್ಲೇಂಟ್ ಬರಲಿ, ಆಮೇಲೆ ನೋಡುತ್ತೇವೆ ಎನ್ನುವ ಪ್ರವೃತ್ತಿ ಸರಿಯಾದುದಲ್ಲ. ಕೆಲವು ಸಾರಿ ತನ್ನ ಮಗಳ ಮಾನ ಹೋದಾಗ ಮತ್ತೆ ಇದನ್ನು ಪೋಲೀಸ್‌ರವರಿಗೆ ಎಳೆದು ಮಗಳ ಮಾನವನ್ನು ಬೀದಿಪಾಲು ಮಾಡಲು ಇಷ್ಟಪಡದೆ ತಂದೆ ಕಂಪ್ಲೆಂಟ್ ಕೊಡದೆ ಇರಬಹುದು. ಇಂತಹದನ್ನು ಗಮನಿಸುವ ಬಗ್ಗೆ ಪೋಲೀಸರು ವಿಶೇಷ ಗಮನ ಕೊಡಬೇಕು. ಈ ಘಟನೆ ಹಿಂದೆ ಏನಾದರೂ ತಪ್ಪು ಪ್ರಯತ್ನ ನಡೆಯುತ್ತಿದ್ದರೆ ಅದು ಆಗಕೂಡದು. ಇಂತಹ ಘಟನೆ ಬಗ್ಗೆ ಹಿಂದಿನಿಂದಲೂ ಸೂಕ್ತ ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದರೆ ಈ ರೀತಿ ಆಗುತ್ತಾ ಇರಲಿಲ್ಲ. ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲಿ ಶಾಂತಿಯ ವಾತಾವರಣವನ್ನು ಮೂಡಿಸಬೇಕಾಗಿದೆ. ಒಳ್ಳೆಯ ರೀತಿಯ ಅಭಿಪ್ರಾಯ ಸಿಖ್ ಸಮುದಾಯಕ್ಕೆ ಬರಬೇಕು ಮತ್ತೊಮ್ಮೆ ಇಂತಹ ಘಟನೆಗಳು ಆಗಬಾರದು, ಯಾರೂ ಇಂಥಾದನ್ನು ಮಾಡಬಾರದು. ಇವತ್ತು ಸಿಕ್ ಮುಖಂಡರು ಏನು ಅಭಿಪ್ರಾಯಕ್ಕೆ ಬರುತ್ತಿದ್ದಾರೆ ಅದು ಸರಿಯಲ್ಲ. ಈ ಘಟನೆ ಬಗ್ಗೆ ಶಾಸಕರು ಇಲ್ಲಿ ಸರಿಯಾದ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಸದನದಲ್ಲಿ ಮಾತನಾಡುವಾಗ ಹೊರಗಡೆ ಯಾವುದೇ ಅಹಿತಕರ ಘಟನೆ ಆಗಬಾರದು ಎನ್ನುವ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಎಚ್ಚರಿಕೆಯಿಂದ ಇಲ್ಲಿ ಮಾತನಾಡುವ ಸಂದರ್ಭದಲ್ಲಿ ಮಾನ್ಯ ವೆಂಕಟರಾಮಯ್ಯನವರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಕಾಂಗ್ರೆಸ್ ಅಥವಾ ಆರ್‌ಎಸ್‌ಎಸ್ ಬಗ್ಗೆ ಅವರು ಏಕೆ ಹೇಳಿದರೋ ಗೊತ್ತಿಲ್ಲ. ಇವತ್ತಿನ ದಿವಸ ಬೀದರ್‌ಗೆ ಆರ್‌ಎಸ್‌ಎಸ್‌ನವರು ಪ್ರಚಾರಕ್ಕೆ ಹೋದ ಸಂದರ್ಭದಲ್ಲಿ ಆ ದೇವಸ್ಥಾನದಲ್ಲಿ ಉಳಿಯುತ್ತಾರೆ. ಆದರೆ ಅವರು ಏಕೆ ಈ ರೀತಿ ಹೇಳಿದರೋ ಗೊತ್ತಾಗಲಿಲ್ಲ ಬೀದರ್‌ನಲ್ಲಿ ಬಿಜೆಪಿ ಶಾಸಕರೊಬ್ಬರು ಎಜುಕೇಷನಲ್ ಇನ್‌ಸ್ಟಿಟ್ಯೂಷನ್ ನಡೆಸುತ್ತಾರೆಂದು ಹೇಳಿದರು. ನನಗೆ ತಿಳಿದಹಾಗೆ ಅಲ್ಲಿ ಬಿಜೆಪಿ ಶಾಸಕರ್ಯಾರು ಇಲ್ಲ. ಹಿಂದೆ ಕೂಡ ಅಲ್ಲಿ ಅಂತಹವರು ಇದ್ದಂತಿಲ್ಲ. ಇವತ್ತಿನ ದಿವಸ ಇಡೀ ರಾಜ್ಯದ ಬಿಜೆಪಿ ಕಾರ್ಯಕರ್ತರಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯ ಬರಬಾರದು. ಇವತ್ತಿನದಿವಸ ಕೆಟ್ಟವಾತಾವರಣ ನಿರ್ಮಾಣ ಮಾಡುವುದು ಬೇಡ . ಇವತ್ತಿನದಿವಸ ಅಲ್ಲಿ ಇಂತಹದ್ದು ಮರುಕಳಿಸದಹಾಗೆ ಒಂದು ತನಿಖೆ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ. ಇವತ್ತು ಯಾವುದೇ ಪೋಲೀಸ್ ಅಧಿಕಾರಿ ಯಾವುದೇ ದೂರಿಗೆ ಕಾಯಿದೆ ಒಂದು ಒಳ್ಳೆಯ ವಾತಾವರಣವನ್ನು ಮೂಡಿಸುವ ಕಡೆ ಗಮನ ಕೊಡಬೇಕು, ಸಮಾಜದಲ್ಲಿನ ರೀತಿನೀತಿಗಳಿಗೆ ವಿರುದ್ಧವಾಗಿ ಯಾರೇ ಆಗಲಿ ದುರ್ವರ್ತನೆಯ ಹಾದಿಯಲ್ಲಿ ನಡೆದರೂ ಅವರಿಗೆ ಎಚ್ಚರಿಕೆ ಕೊಡುವ ಜವಾಬ್ದಾರಿ ಪೋಲೀಸರಿಗೆ ಇದೆ. ಈಗಾಗಲೇ ವಿಚಿತ್ರ ವಾತಾವರಣ ಏನು ಅಲ್ಲಿ ನಿರ್ಮಾಣ

ವಾಗಿದೆ ಅದರಿಂದ ಯಾರೂ ಕೂಡ ನಿರ್ಭೀತಿಯಿಂದ ಬದುಕುವುದಕ್ಕೆ ಸಾಧ್ಯವಿಲ್ಲ. ಸಿಕ್ಕರಾಗಲೀ, ಮುಸ್ಲಿರಾಗಲಿ, ಇವತ್ತು ಸೌಹಾರ್ದಯುತ ಬಾಳ್ವೆಯನ್ನು ನಡೆಸಬೇಕಾಗುತ್ತದೆ. ಅಲ್ಲಿನ ಘಟನೆಗಳಿಗೆ ಬೇರೆ ಬಣ್ಣ ಕೊಟ್ಟರೆ ಇದಕ್ಕೆ ಸಂಬಂಧವಿಲ್ಲದ ಅನೇಕ ಜನರು ಬಲಿಯಾಗಬಹುದು. ಆದ್ದರಿಂದ ಇದಕ್ಕೆ ಸೂಕ್ಷ್ಮವಾದ ತನಿಖೆಯ ಅಗತ್ಯ ಇದೆ. ಸರ್ಕಾರ ಕೂಡ ಇದರ ಬಗ್ಗೆ ಎಚ್ಚರಿಕೆ ವಹಿಸಿ ತನ್ನ ಗಮನ ಹರಿಸಿದರೆ ನಿಜವಾಗಿಯೂ ಕೂಡ ನ್ಯಾಯಾಂಗ ತನಿಖೆಯನ್ನು ಸನ್ನಿಗತ ಮಾಡ ಬೇಕಾಗುತ್ತದೆ. ಇನ್ನು ವಿಶೇಷವಾಗಿ ಪ್ರಯತ್ನ ಮಾಡಿ ಅಲ್ಲಿಯ ಜನ ನೆಮ್ಮದಿಯ ಜೀವನ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡುವುದಕ್ಕೆ ಪ್ರಯತ್ನ ಮಾಡಿ. ಅಲ್ಲಿ ಇನ್ನೂ ಹೆಚ್ಚಿನ ಪೋಲೀಸ್ ಬಂದೋಬಸ್ತು ಮಾಡಿ ಘಟನೆ ಮರುಕಳಿಸದಂತೆ ಎಚ್ಚರಿಕೆಯನ್ನು ವಹಿಸಬೇಕು. ತಾವು ಮಾಡತಕ್ಕ ಕೆಲಸವನ್ನು ಮುಂದುವರಿಸಿ ವಿಶೇಷ ಎಚ್ಚರಿಕೆಯನ್ನು ವಹಿಸಿ ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿ ಕೊಳ್ಳುತ್ತಾ ಬೀದರ್ ಘಟನೆಯ ಬಗ್ಗೆ ಮಾತನಾಡಲಿಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಬಿ. ಶಾಣಪ್ಪ (ಶಾಹಬಾದ್).—ಮಾನ್ಯ ಅಧ್ಯಕ್ಷರೆ, ಸೆಪ್ಟೆಂಬರ್ ತಿಂಗಳಿನಲ್ಲಿ ನಡೆದಂತಹ ಬೀದರ್ ಘಟನೆ ಅದರಲ್ಲೂ ಸಿಕ್ ಜನಾಂಗ ಮತ್ತು ಬೇರೆ ಜನಾಂಗಗಳ ಮಧ್ಯೆ ನಡೆದಂತಹ ಘರ್ಷಣೆಯನ್ನು ನಾವು ನೋಡಿದಾಗ ಯಾವುದೇ ಒಂದು ಪೊಲಿಟಿಕಲ್ ಘರ್ಷಣೆಇದಲ್ಲ. ಸುಮಾರು ೪೫೦ ವರ್ಷಗಳಿಂದ ಬೀದರ್‌ನಲ್ಲಿ ಸಿಕ್ಕರು ಇದ್ದಾರೆ. ಖಲಿಸ್ಥಾನ ಮೂವ್‌ಮೆಂಟ್ ೧೦–೧೫ ವರ್ಷಗಳಿಂದ ನಡೆದಿದೆ. ಈ ಅವಧಿಯಲ್ಲಿ ಅನೇಕ ಸಿಕ್ಕರನ್ನು ಪಂಜಾಬಿನಲ್ಲಿ ಹೊಡೆದರು, ಇನ್ನು ಅನೇಕ ಕಡೆಗಳಲ್ಲಿ ಹೊಡೆದರು. ಆದರೆ ಬೀದರ್‌ನಲ್ಲಿದ್ದಂತಹ ಸಿಕ್ಕರನ್ನು ಯಾರೂ ಸಹ ಟಚ್ ಮಾಡಲಿಲ್ಲ. ಬೇರೆಕಡೆ ಆದಂತಹ ಘಟನೆಗಳನ್ನು ತೆಗೆದುಕೊಂಡು ಸಿಕ್ಕರನ್ನು ಎದುರಿಸಲಿಲ್ಲ. ಇದರ ಹಿನ್ನೆಲೆಯನ್ನು ಕಂಡು ಹಿಡಿಯುಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸರ್ಕಾರದವರು ಜುಡಿಸಿಯಲ್ ಎನ್‌ಕ್ವಯರಿ ಮಾಡಲಿಕ್ಕೆ ಒಪ್ಪಿದ್ದಾರೆ. ಅಲ್ಲಿ ಏನಾಗಿದೆಯೆಂಬುದು ಶಾಸಕರಿಗೆ ಬಹಳಷ್ಟು ಗುರುತು ಇದೆ ನಮಗೂ ಗುರುತು ಇದೆ. ಅಲ್ಲಿ ಏನಾಗಿದೆಯೆಂದರೆ ಗಣೇಶ ಉತ್ಸವ ನಡೆಸಿದರು ಆಗ ಅಲ್ಲಿಗೆ ಬಂದ ಸಿಕ್ ಹುಡುಗರನ್ನು ಇವರು ಹೊಡೆದರು, ಅವರು ಇವರನ್ನು ಹೊಡೆದರು, ಆಮೇಲೆ ಅವರು ಅಯ್ಯಂಗಾರ್ ಹುಡುಗರನ್ನು ಬೆನ್ನುಹತ್ತಿದರು ಎಂಬವಿಚಾರಸರಿಯಲ್ಲ. ಜನವರಿ ತಿಂಗಳಿನಲ್ಲಿ ಮಾನ್ಯ ಲೈಕುದ್ದೀನ್‌ರವರು ಹೇಳಿದರು. ಎಜುಕೇಶನ್ ಸಂಸ್ಥೆಯನ್ನು ನಡೆಸುವ ಬಗ್ಗೆ ಇದ್ದಂತಹ ಸಣ್ಣ ಪುಟ್ಟ ಘರ್ಷಣೆ ಆಗಿನ ಕಾಲದ್ದು. ಅದು ಈಗಿನ ಕಾಲದ್ದಲ್ಲ ಅದು ಸುಮಾರು ಆರು ತಿಂಗಳಿಂದ ಇದೆ. ರಷೀದ್ ಕೊಲೆ ನಡೆದದ್ದು ಸಹ ಒಂದು ಎಜುಕೇಶನ್ ಸೊಸೈಟಿಯಿಂದ ಎಂದು ಹೇಳುತ್ತಾರೆ. ಜೋಗ್‌ಸಿಂಗ್‌ರವರದ್ದು ಎಜುಕೇಶನ್ ಸೊಸೈಟಿ ಇದೆ. ಎಜುಕೇಷನ್ ಸೊಸೈಟಿಗಳ ಬಗ್ಗೆ ಸರ್ದಾರ್‌ಗಳ ಬಗ್ಗೆ ಅವರ ಮಕ್ಕಳ ಬಗ್ಗೆ ಅನೇಕ ವರದಿಗಳು ಡೆಕ್ಕನ್ ಹೆರಾಲ್ಡ್, ಲಂಕೇಶ್‌ಪತ್ರಿಕೆ, ರಾಜ್ಯದ ದಿನಪತ್ರಿಕೆಗಳ ಮುಖಪುಟಗಳಲ್ಲಿ ವರದಿ ಬಂದಿದೆ. What was there behaviour ? ಅಲ್ಲಿನ ವಿದ್ಯಾರ್ಥಿಗಳು ಯಾವ ಪ್ರಕಾರ ನಡೆದುಕೊಂಡಿದ್ದಾರೆಂಬುದನ್ನು ವಿವರವಾಗಿ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿದ್ದಂತಹ ಜನರನ್ನು ಕೇಳಿದಾಗ ನಿಜ ಪರಿಸ್ಥಿತಿ ಗೊತ್ತಾಗುತ್ತದೆ. ರಾಜಕೀಯವಾಗಿ ಎಲ್ಲರೂ ಇದನ್ನು ಹೇಳುವುದು ಸರಿಯಲ್ಲ. ಈ ಘಟನೆ ನಡೆದಾಗ ಸಿಕ್ಕರನ್ನು ಹೊಡೆಯಬೇಕೆಂದು ಪ್ರಿಪ್ಲಾನ್ಡ್ ಏನೂ ಮಾಡಿಲ್ಲ. ಅಲ್ಲಿದ್ದಂತಹ ಗುರುನಾನಕ್ ಸಂಸ್ಥೆಯ ಮುಖ್ಯಸ್ಥರಾದ ಜೋಗಾಸಿಂಗ್‌ರವರು ಈ ಬಗ್ಗೆ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, ಅಲ್ಲಿರುವ ಮುಸಲ್ಮಾನರು, ಹಿಂದುಗಳು ಸಿಕ್ಕರ ಮಕ್ಕಳನ್ನು ಮನೆಯಲ್ಲಿಟ್ಟು ಕೊಂಡು ಉಳಿಸಿದ್ದಾರೆನ್ನುವ ಹೇಳಿಕೆಯನ್ನು ಕೊಟ್ಟಿದ್ದಾರೆ ಅದನ್ನು ನಾವೆಲ್ಲರೂ ಓದಿದ್ದೇವೆ. ಇಷ್ಟೆಲ್ಲಾ ಘಟನೆ ನಡೆದ ಮೇಲೆ ಆರು ಜನ ಸತ್ತಿದ್ದಂತೂ ನಿಜ. ವಿದ್ಯಾರ್ಥಿಗಳನ್ನು ಗಲಭೆಯಲ್ಲಿ ಕೊಂದಿದ್ದಾರೆ. ಗಲಭೆ ಹೇಗಾಯಿತು, ಯಾರು ಕೊಂದರು ಯಾರು ಯಾರನ್ನು ಹೊಡೆದರು ಎಂಬುದು ತನಿಖೆ ಮಾಡಿದಾಗ ಗೊತ್ತಾಗುತ್ತದೆ. ಆರು ಜನರನ್ನು ಕೊಂದು ಬಾವಿಯಲ್ಲಿ ಹಾಕಿದರು. ಮಾರನೆಯ ದಿನ ತಕ್ಷಣ ಪೋಲಿಸ್‌ನವರು ಕ್ರಮ ತೆಗೆದುಕೊಂಡಿದ್ದಾರೆ. ಅಲ್ಲಿರುವ ಪೋಲೀಸ್ ಅಧಿಕಾರಿ ಆದಂಥ ಉಮಾಪತಿಯವರ ಬಗ್ಗೆ ನಾನು ಕೇಳಿದ್ದೇನೆ. ಇದಕ್ಕಿಂಥ ಮುಂಚಿತವಾಗಿ ಅವರ ಬಗ್ಗೆ ಯಾವುದೇ ಆರೋಪವಿಲ್ಲ. ಆದರೆ ಅಂತಹ ಸಂದರ್ಭದಲ್ಲಿ ತಕ್ಷಣ ಅಲ್ಲಿದ್ದಂತಹ ಪೋಲೀಸ್ ಪೋರ್ಸನ್ನು ತೆಗೆದುಕೊಂಡು ಘಟನೆ ಮುಂದುವರಿಸದಹಾಗೆ ನೋಡಿದ್ದಾರೆ. Unless and until he gets more forces 120 Kms away from Bidar he cannot

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

control the situation. But they have controlled the entire situation with the available forces. ಪೋಲೀಸ್ ಫೋರ್ಸ್ ಬರುವುದರೊಳಗೆ ಆರು ಜನರನ್ನು ಕೊಂದಿದ್ದಾರೆ. ಅನಂತರ they have controlled the situation.

೩-೩೦ ಪಿ. ಎಂ.

ಇದಕ್ಕೆ ಮುಂಚಿತವಾಗಿ ಅಲ್ಲಿ ಸುಮಾರು ಎರಡು-ಮೂರು ಇನ್‌ಸ್ಟಿಟ್ಯೂಶನ್‌ಗಳನ್ನು ನಡೆಸುವವರು ಈ ಜೋಗಾಸಿಂಗ್ ಇನ್‌ಸ್ಟಿಟ್ಯೂಶನ್‌ಗೆ ಮೆಡಿಕಲ್ ಕಾಲೇಜನ್ನು ಕೊಟ್ಟರೆ ನಾವು ಬೀದರ್‌ನಲ್ಲಿ ದೊಡ್ಡ ಹೋರಾಟ ಮಾಡುತ್ತೇವೆ ಎಂದು ಪ್ರಕಟಣೆ ಕೊಟ್ಟಿದ್ದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಆದರಲ್ಲಿ ಬರೀ ಜನತಾಪಾರ್ಟಿಯವರಲ್ಲ, ಬಿ. ಜೆ. ಪಿ. ಯವರಲ್ಲ, ಕಾಂಗ್ರೆಸ್‌ನವರಲ್ಲ ಒಟ್ಟು ಜನ ಸೈನ್‌ಮಾಡಿ ಶ್ರೀ ಹೆಗಡೆಯವರಿಗೆ ಮನವಿ ಕೊಟ್ಟಿದ್ದಾರೆ. ಅವರು ಏನು ಹೇಳಿದರು ಎಂದರೆ, ನೀವು ಆರು ತಿಂಗಳಲ್ಲಿ ಆಸ್ಪತ್ರೆಯನ್ನು ಕಟ್ಟಿರಿ, ನಿಮಗೆ ಕಾಲೇಜನ್ನು ಕೊಡುತ್ತೇವೆ, ಸರ್ದಾರ್‌ಜಿ ಕಮ್ಯುನಿಟಿಗೆ ಕೊಡುವುದಿಲ್ಲ ಎಂದು ಹೇಳಿದರು. ಆದರೆ ಅದನ್ನು ಈಡೇರಿಸಲಿಕ್ಕೆ ಆಗಲಿಲ್ಲ. ಆ ಸಿಟ್ಟು ಜನರಲ್ಲಿ ಹಾಗೆಯೇ ಉಳಿದಿತ್ತು. ಈ ಹುಡುಗರ ವರ್ತನೆ ಬಗ್ಗೆ ನಾನು ಹೋಗಿ ಕೇಳಿದ್ದೇನೆ. ಯಾರಿಗಾದರೂ ಸಂತೋಷ ಮಾಡುವುದಕ್ಕೆ ಅಥವಾ ಹೆದರಿ ಮಾತನಾಡುವುದು ನನಗೆ ಬೇಕಾಗಿಲ್ಲ. ಅವರ ವರ್ತನೆ ಏನಿತ್ತು ? ಅನೇಕ ಜನ ಏನು ಹೇಳುತ್ತಾರೆಂದರೆ ವಿಡಿಯೋ ಕ್ಯಾಸೆಟ್ ಮಾಡಿ ಮುಂದಿಗೆ ಹೆದರಿಸುತ್ತಿದ್ದರು ಎಂದು. Is it a fact that they have to be protected ? ಅವರನ್ನು ಕೊಲ್ಲಬೇಕೆಂಬ ಅಧಿಕಾರವನ್ನು ಯಾರಿಗೂ ಕೊಟ್ಟಿಲ್ಲ. ಆದರೆ ಅವರು ಮಾಡಿದ್ದನ್ನು ನೋಡಿದರೆ ಇಲ್ಲಿ ಹೇಳಲಿಕ್ಕೆ ನಾಚಿಕೆ ಬರತಕ್ಕಂಥ ಪರಿಸ್ಥಿತಿ ಇದೆ. ಅವರನ್ನು ಕೊಂದಿದ್ದಕ್ಕೆ ನಾವೇನೂ ಸಪೋರ್ಟ್ ಮಾಡಬೇಕಾಗಿಲ್ಲ. ಯಾರು ಕೊಂದಿದ್ದಾರೆ ಅವರನ್ನು ಅರೆಸ್ಟ್ ಮಾಡಬೇಕು ಮತ್ತು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಎಂ. ಎಸ್. ಐ. ಎಲ್. ಅಥವಾ ಕರ್ನಾಟಕ ಭವನಕ್ಕೆ ಮುತ್ತಿಗೆ ಹಾಕಿ ಬಾಂಬ್ ಹಾಕುತ್ತೇವೆ, ಗುಂಡು ಹಾರಿಸುತ್ತೇವೆ ಎಂದು ಹೇಳಿದರೆ ಅದಕ್ಕೆ ಹೆದರಿ ಇಲ್ಲಿ ಮಾತನಾಡಬೇಕಾದ್ದಿಲ್ಲ. ಸರ್ಕಾರದವರು ಯಾರ್‍ಯಾರು ಹೊಡೆದಿದ್ದಾರೆ ಅವರನ್ನು ಅರೆಸ್ಟ್ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ನೀವು ಏನು ಮಾಡುತ್ತಿದ್ದೀರಿ ? At least you would have arrested the peole who have done all these things. ೧೫ ದಿನ ಆಯಿತು ಕರ್ನಾಟಕದ ಜನ, ಕರ್ನಾಟಕ ರಾಜ್ಯ ಈ ಕಲ್‌ಪ್ರಿಟ್ಸ್‌ಗೆ ಪ್ರೊಟೆಕ್ಷನ್ ಕೊಡುತ್ತಿಲ್ಲ. ಕರ್ನಾಟಕ ಭವನವನ್ನು ಹಾರಿಸುತ್ತೇವೆ ಎಂದು ಹೇಳಿದರೆ ಅದಕ್ಕೆ ಹೆದರಬೇಕಾಗಿಲ್ಲ. ಆದರೆ ಕರ್ನಾಟಕರಾಜ್ಯದ ಆಡಳಿತವನ್ನು ನಡೆಸತಕ್ಕಂಥ ಸರ್ಕಾರಕ್ಕೆ ಜವಾಬ್ದಾರಿ ಇದೆ. ಅವರನ್ನು ಅರೆಸ್ಟ್ ಮಾಡಬೇಕು. ಏಕೆಂದರೆ ಯಾರು ಯಾರನ್ನು ಕೊಲ್ಲಬೇಕು ಎಂದು ನಮ್ಮ ದೇಶದ ಸಂವಿಧಾನದಲ್ಲಿ ಹೇಳಿಲ್ಲ. ಯಾರು ತಪ್ಪು ಮಾಡಿದರೂ, ಅದು ಪಂಜಾಬ್‌ನಲ್ಲಿ ನಡೆದಿರಬಹುದು, ಬೀದರ್‌ನಲ್ಲಿ ನಡೆದಿರಬಹುದು. ಆದರೆ ಕರ್ನಾಟಕದಲ್ಲಿ ಇದು ಮತ್ತೆ ನಡೆಯಕೂಡದು ಎಂದು ನಮ್ಮ ಸರ್ಕಾರ ಹೇಳಬೇಕಾಗಿದೆ. ಈ ವಿಷಯ ಬಹಳಷ್ಟು ವಿಕೋಪಕ್ಕೆ ಈಗಾಗಲೇ ಹೋಗಿದೆ. ಮತ್ತೆ ಸುಟ್ಟು ಹೋದಮೇಲೆ ಪುನಃ ಅದಕ್ಕೆ ಪೆಟ್ರೋಲ್ ಹಾಕುವುದು ಬೇಡ. ಏನೋ ಆಯಿತು. ಬಿಹಾರ್‌ನಲ್ಲಿ ೧೩ ಜನ ಹರಿಜನರನ್ನು ಎರಡು ತಿಂಗಳಲ್ಲಿ ಸುಟ್ಟರು. ಕರ್ನಾಟಕದಿಂದ ೧೪ ಮಂದಿ ಅಸೆಂಬ್ಲಿ ಮೆಂಬರ್‌ಗಳು ಹೋಗಿದ್ದರು. ಅವರು ೬೬ ಮಂದಿ ಇದ್ದರೆ ನಾವು ಎರಡು ಮೂರು ಜನ ಇದ್ದರೆ ಮಾತನಾಡಕೂಡದೇನು ? ನಮಗೆ ಹೇಳುವುದನ್ನು ಬಂದ್ ಮಾಡುವುದಕ್ಕೆ ಅಧಿಕಾರ ತಮಗೆ ಕೊಟ್ಟಿಲ್ಲ. ನಾನು ಮಾತನಾಡುತ್ತೇನೆ. ಬಿಹಾರ್‌ನಲ್ಲಿ ೨೫ ಜನರನ್ನು ಕೊಂದರಲ್ಲ, ಆಗ ಪಿ. ಎಂ. ಸಾಹೇಬರಿಗೆ ನಿಯೋಗ ಕಳಿಸಿ ಬೂಟಾ ಸಿಂಗ್‌ರನ್ನು ಕಳಿಸಿ ಅಂತ ಯಾರೂ ಹೇಳಲಿಲ್ಲ. ೧೫-೨೦ ದಿನಗಳೊಳಗೆ ೧೩ ಜನ ಹರಿಜನರನ್ನು ಅಲ್ಲಿ ಸುಟ್ಟರು ನೀವು ಪಂಜಾಬ್‌ಗೆ ಕಳಿಸಿರಿ, ಬೀದರ್‌ಗೂ ಕಳಿಸಿರಿ, ನಾನು ಬೇಡವೆಂದು ಹೇಳುವುದಿಲ್ಲ. ಆದರೆ ಪದೇಪದೇ ಮೇಲಿಂದ ಮೇಲೆ ಜನರು ಬರುವುದರಿಂದ ಆರಬೇಕಾದ ಬೆಂಕಿಯನ್ನು ಮತ್ತೆ ಪುಟಿಯುವ ಹಾಗೆ ಮಾಡಬೇಡಿ. ಇಂತಹ ಸಂದರ್ಭಗಳನ್ನು ಟೆರರಿಸ್ಟ್‌ಗಳು ಉಪಯೋಗ ಮಾಡಿಕೊಳ್ಳುತ್ತಾರೆ. ಇಲ್ಲಿಯವರೆಲ್ಲ ಪಂಜಾಬ್‌ನಲ್ಲಿ ಸೇರಬೇಕು, ಅಲ್ಲಿದ್ದ ಹಿಂದುಗಳೆಲ್ಲ ಆ ಕಡೆಗೆ ಹೋಗಬೇಕು ಎಂದು ಅವರು ಪ್ರಯತ್ನ ಮಾಡಿದರೆ ಅದಕ್ಕೆ ಅವಕಾಶ ಮಾಡಿಕೊಡದೆ ಇದನ್ನು ಎಲ್ಲರೂ ವಿರೋಧಿಸಿ ಇದನ್ನು ಪೊಲಿಟಿಕಲ್ ಆಗಿ ಮಾಡದೆ ಕರ್ನಾಟಕದ ಜನ ಯಾರೂ ಕೂಡ ಇಂತಹ ಕಮ್ಯುನಲ್ ವಯಲೆನ್ಸ್‌ಗಳನ್ನು ಹತ್ತಿಕ್ಕಲು ಎಲ್ಲರೂ ಒಂದಾಗಿ ಇದನ್ನು ಸಾಧ್ಯವಾಗುವಂತೆ ಪ್ರೂವ್‌ಮಾಡಿ ತೋರಿಸಬೇಕಾಗಿದೆ ಎಂದು ಹೇಳಿ ಒಂದು ವಿಷಯದ ಬಗ್ಗೆ ಮಾನ್ಯ ಅಧ್ಯಕ್ಷರನ್ನು ಕೇಳಬೇಕಾಗಿದೆ. ಏನೆಂದರೆ, ನನ್ನ ಆರುವರ್ಷಗಳ ಶಾಸಕ ಪ್ರವೃತ್ತಿ ಏನಿದೆ, ಈ ಆರುವರ್ಷಗಳಲ್ಲಿ ಈ ಅಡ್ಜರ್ನ್‌ಮೆಂಟ್ ಮೋಶನ್ ಏನಿದೆ, ಇದರ ಬಗ್ಗೆ ನಾನು ಇನ್ನೋಸೆಂಟ್ ಆಗಿಕೇಳಬೇಕೆಂದು

ಇದ್ದೇನೆ. ಈ ಅಡ್ಜರ್ನ್‌ಮೆಂಟ್ ಮೋಷನ್‌ಗೆ ನಾನೂ ಕೂಡಾ ಸಹಿ ಮಾಡಿದ್ದೇನೆ. ಈ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಮಂಡನೆ ಮಾಡಲು ತಮ್ಮ ಮನವೊಲಿಸಿದ ನಂತರ ಏನು ಹೇಳಬೇಕೋ, ಅದಕ್ಕಿಂತ ಮುಂಚೆಯೇ ಎಲ್ಲವನ್ನೂ ಹೇಳಿದ್ದೇವೆ. ಆದ್ದರಿಂದ ಇದು ಏನು ಅಡ್ಜರ್ನ್‌ಮೆಂಟ್ ಮೋಷನ್ ಎಂದು ನಾವು ಹೇಳಬೇಕು, ಇನ್ನು ಇದರಲ್ಲಿ ಉಳಿಯುವುದು ಏನು ? ಇದಕ್ಕೆ ತಾವು ದಯವಿಟ್ಟು ಉತ್ತರ ಹೇಳಬೇಕು. ಇಷ್ಟು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ಧರ್ಮಸಿಂಗ್.—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ, ಸದನದಲ್ಲಿ ಬಹಳ ವಿವರವಾಗಿ ಎಲ್ಲಾ ಹಿರಿಯರೂ, ಬೀದರ್ ಜಿಲ್ಲೆಯ ಶಾಸಕರೂ ವಿಸ್ತಾರವಾಗಿ, ಬೀದರ್‌ನಲ್ಲಿ ನಡೆದ ಘಟನೆಯ ಬಗ್ಗೆ ತಮ್ಮ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಮಾನ್ಯ ಕೆ. ಬಿ ಶಾಣಪ್ಪನವರು ಹೇಳಿದ ಹಾಗೆ, ಮಾನ್ಯ ವೆಂಕಟರಾಮಯ್ಯನವರು ಪೂರ್ವಭಾವಿಯಾಗಿ ಪ್ರಸ್ತಾಪ ಮಾಡಿದ್ದಾರೆ. ಈ ದೇಶದಲ್ಲಿ, ಬೇರೆ ಬೇರೆ ರಾಜ್ಯಗಳಲ್ಲಿ ನಡೆಯುವ ಘಟನೆಗಳನ್ನೂ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ. ಆಗರೆ ಬೇರೆ ಬೇರೆ ಕಡೆ ಏನಾಗುತ್ತಿದೆ. ಎಂದು ನೋಡಿದಾಗ ಇವತ್ತು ಪಂಜಾಬ್‌ನಲ್ಲಿ ಹತ್ಯೆಗಳಾಗುತ್ತಿವೆ, ಬಿಹಾರದಲ್ಲಿ ಆಗುತ್ತಿವೆ, ಇದನ್ನು ನಾನು ಒಪ್ಪುತ್ತೇನೆ. ಆದರೆ ಬೀದರ್, ಬೀದರ್‌ನಲ್ಲಿ ಆದ ರೀತಿಯ ಘಟನೆ ಎಲ್ಲೂ ಆಗಿಲ್ಲ. ಮಾನ್ಯ ಬೊಮ್ಮಾಯಿಯವರು ಮುಖ್ಯಮಂತ್ರಿಯಾದ ಮೇಲೆ ಕರ್ನಾಟಕದಲ್ಲಿ ಪ್ರಪ್ರಥಮವಾಗಿ ಈ ಘಟನೆ ಬೀದರ್‌ನಲ್ಲಿ ಜರುಗಿದೆ.........

(ಗೊಂದಲ)

ಶ್ರೀ ಬಸವರಾಜಪಾಟೀಲ್‌ಅನ್ವರಿ.—ಮಾನ್ಯ ಅಧ್ಯಕ್ಷರೇ. ಮಾನ್ಯ ಸದಸ್ಯರು ಈ ರೀತಿಯಾಗಿ ಮಾತನಾಡಬಾರದು. ಈ ಕಡೆಯವರು ಮಾತನಾಡಿದರೆ, ರಾಜಕೀಯ ಎಂದು ಹೇಳುತ್ತಾರೆ. ಅವರು ಮಾತನಾಡುವುದು ರಾಜಕೀಯ ಅಲ್ಲವೇ ? ಹೇಳುವಂತಾದ್ದನ್ನು ಹೇಳಲಿ. ಈ ರೀತಿ.........

(ಗೊಂದಲ)

ಅಧ್ಯಕ್ಷರು.—ಈ ಕಡೆಯವರೂ, ಆ ಕಡೆಯವರೂ ''ಹೌದು'' ಎನ್ನುವ ರೀತಿಯಲ್ಲಿ ತಾವು ಹೇಳಬೇಕು. ಸರ್ಕಾರಕ್ಕೆ ಒಳ್ಳೆಯ ಸಲಹೆ, ಸೂಚನೆಗಳನ್ನು ತಾವು ಕೊಡಬೇಕು,......

† ಶ್ರೀ ಆರ್. ಧರ್ಮಸಿಂಗ್.—ಮಾನ್ಯ ಲೈಕುದ್ದೀನ್‌ರವರು ಬೀದರ್ ಜಿಲ್ಲೆಯ ಶಾಸಕರಾಗಿದ್ದಾರೆ, ಅವರು ಬೀದರ್ ಪಟ್ಟಣವನ್ನು ಪ್ರತಿನಿಧಿಸುತ್ತಾರೆ. ಅವರೂ ಕೂಡ ಅಲ್ಲಿ ನಡೆದಿರತಕ್ಕಂಥ ಘಟನೆಗಳ ಬಗ್ಗೆ ಹೇಳಿದ್ದಾರೆ. ಮಾನ್ಯ ಗುರುಪಾದಪ್ಪನವರೂ ಹೇಳಿದ್ದಾರೆ, ಮಾನ್ಯ ಖರ್ಗೆಯವರೂ ಹೇಳಿದ್ದಾರೆ, ಮಾನ್ಯ ವಿರೋಧ ಪಕ್ಷದ ನಾಯಕರೂ ಹೇಳಿದ್ದಾರೆ, ಮಾನ್ಯ ವೀರಪ್ಪ ಮೊಯಿಲಿಯವರೂ ಹೇಳಿದ್ದಾರೆ. ಈ ಬಗ್ಗೆ ನಾನು ಏನು ಹೇಳುತ್ತಿದ್ದೇನೆಂದರೆ, ಅಲ್ಲಿಯ ಎಸ್.ಪಿ.ಯವರಾದ ಉಮಾಪತಿಯವರು ಕೂಡ ಸರ್ಕಾರದ ಒಂದು ಭಾಗ. ಇವರ ಎದುರುಗಡೆ ಆದಂಥ ಘಟನೆ ಇದು. ನಾನು ಈ ಮುಖ್ಯಮಂತ್ರಿಗಳ ಆಡಳಿತದಲ್ಲಿ ಯಾವರೀತಿಯಾಗಿ ಗಲಭೆಯಾಗಿದೆ ಎಂಬ ಮಾತನ್ನು ಪ್ರಸ್ತಾಪ ಮಾಡಬಾರದೇ ? ಇವತ್ತು ಅಲ್ಲಿರತಕ್ಕ ಸಿಖ್‌ರು ಏನಾದರೂ ತೊಂದರೆ ಕೊಡುತ್ತಿದ್ದರೆ, ಹಿಂಸೆ ಕೊಡುತ್ತಿದ್ದರೆ, ಅಲ್ಲಿ ಪೋಲೀಸ್ ಸೂಪರಿಂಟೆಂಡೆಂಟ್ ಏನು ಇದ್ದಾರೆ, ಅವರು ಈ ಬಗ್ಗೆ ಕ್ರಮ ತೆಗೆದುಕೊಂಡಿದ್ದರೆ, ಆ ಬಗ್ಗೆ ಏನಾದರೂ ದಾಖಲೆಗಳು ಇವೆಯೇ ? ಸಿಖ್ ಜನಾಂಗದವರ ಮೇಲೆ ಕೇಸಸ್ ಹಾಕಬಹುದಾಗಿತ್ತು. ಮುಂದೆ ಉದ್ಭವವಾಗತಕ್ಕ ಗಂಭೀರ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಕ್ರಮ ತೆಗೆದುಕೊಳ್ಳಬಹುದಿತ್ತು. ಈ ದೇಶದ ಪ್ರಜಾಪ್ರಭುತ್ವದಲ್ಲಿ ನಾನಾ ಪಕ್ಷಗಳು ಇವೆ. ಬೇರೆ ಬೇರೆ ವಿಚಾರಧಾರೆಗಳು ಇವೆ. ಗಣೇಶ ಹಬ್ಬ ಪ್ರಾರಂಭವಾದ ನಂತರ ಯಾವುದೇ ಪಟ್ಟಣದಲ್ಲಿ ಆಗತಕ್ಕ ಘಟನೆಗಳನ್ನೂ ಕೂಡ ನಾವು ಹಿನ್ನೆಲೆಯಾಗಿ ನೋಡಬೇಕು. ೧೯೫೦ರಲ್ಲಿ ಇದೇರೀತಿಯಾಗಿ ಬೀದರ್‌ನಲ್ಲಿ ಗಲಭೆ ಆಗಿತ್ತು. ಆಗಲೂ ಸಾಕಷ್ಟು ಮನೆಗಳನ್ನು ಸುಟ್ಟಿದ್ದಾರೆ, ಈ ವಿಚಾರದಲ್ಲಿ ನಮಗೆಲ್ಲಾ ಇತಿಹಾಸ ಇದೆ. ಸಿಖ್ ಜನಾಂಗದ ಜೋಗಾಸಿಂಗ್ ನಡೆಸತಕ್ಕ ಶಿಕ್ಷಣ ಸಂಸ್ಥೆ ಬಗ್ಗೆ ಕೆಲವು ಜನರಿಗೆ ಆಗುವುದಿಲ್ಲ. ಅಲ್ಲಿಯ ವಿದ್ಯಾರ್ಥಿಗಳ ನಡಿವಳಿಕೆಗಳು ಬೇರೆ ಜನಗಳಿಗೆ ಆಗುವುದಿಲ್ಲ. ಇದನ್ನು ನೋಡಿದರೆ, ಅಲ್ಲಿನ ಪೋಲೀಸ್ ವ್ಯವಸ್ಥೆ ಏನು ಮಾಡಿದೆ ಎಂಬುದು ಪ್ರಪ್ರಥಮವಾಗಿ ವಿಚಾರ ಮಾಡತಕ್ಕ ವಿಷಯವಾಗಿದೆ. ಇವತ್ತು ಇದೊಂದು ಘಟನೆಯನ್ನು ನಾವು ಹೇಳಬಹುದು. ಇನ್ನೂ ಎಷ್ಟೋ ಘಟನೆಗಳಲ್ಲಿ, ಎಷ್ಟೋ ಜನರ ಕೈಕಾಲು ಮುರಿದಿರಬಹುದು, ಕಣ್ಣುಗಳೂ ಕೂಡ ಹೋಗಿರ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬಹುದು. ಆದರೆ ಬಾರಾಬಂಕಿ ಎಂಬ ಊರಿನ ಇಬ್ಬರೂ ಸಿಖ್ ವಿದ್ಯಾರ್ಥಿಗಳು ಬೀದರ್ ನಗರದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದರು. ಅಲ್ಲಿ ಏನಾಗಿದೆ ಎಂದರೆ, ಎಂಜಿನಿಯರಿಂಗ್ ಕಾಲೇಜ್ ಹಾಸ್ಟೆಲ್‌ನಲ್ಲಿ ಫಸ್ಟ್ ಇಯರ್‌ಗೆ ಅಡ್ಮಿಷನ್ ಕೊಡುತ್ತಾರೆ. ಈ ವಿದ್ಯಾರ್ಥಿಗಳು ಫಸ್ಟ್ ಇಯರ್ ಕಂಪ್ಲೀಟ್ ಮಾಡಿಕೊಂಡು ನಂತರ ವಿದ್ಯಾನಗರದಲ್ಲಿ ರೂಮ್ ತೆಗೆದುಕೊಂಡು ಇದ್ದು ಬಿಟ್ಟಿದ್ದಾರೆ. ಒಂದೇ ಫ್ಯಾಮಿಲಿಯ ಇಬ್ಬರು ಹುಡುಗರು ಅವರು. ಎರಡನೇ ಹುಡುಗ ಬಂದು ಫಸ್ಟ್ ಇಯರ್ ಕಂಪ್ಲೀಟ್ ಮಾಡಿ ತನ್ನ ಜೊತೆಯಲ್ಲೇ ಇರಬಹುದು ಎಂದು ಮೊದಲನೆಯವನು ನೀನೂ ಬಂದು ಫಸ್ಟ್ ಇಯರ್ ಕಂಪ್ಲೀಟ್ ಮಾಡು, ನಾನು ರೂಮು ತೆಗೆದುಕೊಂಡಿದ್ದೇನೆ, ನನ್ನ ಜೊತೆಯಲ್ಲೇ ಇರಬಹುದು ಎಂದು ಹೇಳಿದ. ಅದೇ ರೀತಿ ಅವನೂ ಬಂದು ಇದ್ದ. ಇಬ್ಬರೂ ಜೊತೆಯಲ್ಲೇ ಇದ್ದರು. ೧೪ನೇ ತಾರೀಖಿನ ದಿವಸ ಗಣೇಶೋತ್ಸವದ ಚಂದಾ ಹಣ ಎತ್ತುವಾಗ ಈ ಟ್ರಬಲ್ ಸ್ಟಾರ್ಟ್ ಆಯಿತು. ಗಲಾಟೆ ಪ್ರಾರಂಭವಾದಾಗ ಪೋಲೀಸರು ಏನು ವ್ಯವಸ್ಥೆ ಮಾಡಿದ್ದರು ಎಂದರೆ, ಅವರು ಏನೂ ಆಕ್ಷನ್ ತೆಗೆದುಕೊಳ್ಳಲೇ ಇಲ್ಲ. ಎಲ್ಲಿ ಗಲಾಟೆ ಪ್ರಾರಂಭವಾಯಿತು, ಏತಕ್ಕೆ ಗಲಾಟೆ ಆಯಿತು, ಯಾರು ಮಾಡಿದರು ಎಂದು ನಾನು ಆಪಾದನೆ ಮಾಡುವುದಿಲ್ಲ. ಈ ಗಲಾಟೆ ಆದಂಥ ಸಮಯದಲ್ಲಿ ಇಬ್ಬರೂ ಹುಡುಗರು ಟೆರೇಸ್ ಮೇಲೆ ಓದುತ್ತಾ ಕುಳಿತಿದ್ದರು. ಆಗ ಈ ಇಬ್ಬರು ವಿದ್ಯಾರ್ಥಿಗಳನ್ನೂ ಕೆಳಗೆ ಎಳೆದು ತಂದರು. ಅವರು ನಾವು ಏನೂ ಮಾಡಲಿಲ್ಲ ಎಂದರೂ ಬಿಡದೇ, ಇಬ್ಬರು ವಿದ್ಯಾರ್ಥಿಗಳನ್ನು ಹಗ್ಗದಲ್ಲಿ ಕಟ್ಟಿ ಬೀದಿಯಲ್ಲಿ ಎಳೆದುಕೊಂಡು ಹೋಗುತ್ತಿದ್ದರು. ಎಳೆದುಕೊಂಡು ಹೋಗುತ್ತಿದ್ದ ಕಾಲದಲ್ಲಿ ದೊಡ್ಡವನು ಎಂದರೆ ಅಣ್ಣ ಏನು ಹೇಳುತ್ತಿದ್ದ ಎಂದರೆ, ನಾವಿಬ್ಬರೇ ಅಣ್ಣ ತಮ್ಮಂದಿರು ಇದ್ದೀವಿ, ನನ್ನನ್ನ ಬೇಕಾದರೆ ಹೊಡೆಯಿರಿ, ನನ್ನ ತಮ್ಮನನ್ನು ಬಿಟ್ಟುಬಿಡಿ, ಎಂದು ಹೇಳುತ್ತಿದ್ದ..

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಪೇಪರ್‌ನಲ್ಲಿ ಬಂದಿದ್ದನ್ನು ಇಲ್ಲಿ ಹೇಳುತ್ತೀರಲ್ಲ ಇದು ಸರಿಯೇ ?

ಶ್ರೀ ಧರ್ಮಸಿಂಗ್.—ಸಣ್ಣವನು ಏನು ಹೇಳುತ್ತಿದ್ದ ಎಂದರೆ, ಬೇಕಾದರೆ ನನಗೆ ಹೊಡೆಯಿರಿ, ದೊಡ್ಡವನನ್ನು ಬಿಟ್ಟುಬಿಡಿರಿ ಎಂದು ಹೇಳುತ್ತಿದ್ದ.

(ಗೊಂದಲ)

ಅಧ್ಯಕ್ಷರು.—ಧರ್ಮಸಿಂಗ್‌ರವರೇ, ಶಾಣಪ್ಪನವರು ಮಾತನಾಡಿದಹಾಗೆ ಮಾತನಾಡಿ. ಎರಡೂ ಕಡೆಯವರೂ ಹೌದು ಎನ್ನಬೇಕು ಆರೀತಿ ಮಾತನಾಡಿ.

ಶ್ರೀ ಧರ್ಮಸಿಂಗ್.—ರಾಜಕೀಯ ಲಾಭಕ್ಕಾಗಿ ನಾನು ಹೇಳುತ್ತಿಲ್ಲ. ರಾಜಕೀಯ ಲಾಭ ನನಗೆ ಬೇಕಾಗಿಲ್ಲ. ಇಂತಹ ಘಟನೆ ನಡೆದಾಗ, ಆ ಇಬ್ಬರು ಸಿಖ್ ವಿದ್ಯಾರ್ಥಿಗಳನ್ನು ಬೀದರ್ ನಗರದ ಎಲ್ಲಾ ಬೀದಿಗಳಲ್ಲಿ ಎಳೆದುಕೊಂಡು ಹೋಗಿ ಎಸ್.ಪಿ.ಯವರ ಮನೆಯ ಪಕ್ಕದಲ್ಲಿದ್ದಂಥ ಬಾವಿಗೆ ಹಾಕಿದರು. ನಾನು ಏನು ಹೇಳುತ್ತಿದ್ದೇನೆ ಎಂದರೆ, ಪೋಲೀಸರ ಸಮ್ಮುಖದಲ್ಲೇ ಇಂತಹ ಘಟನೆ ನಡೆಯುತಕ್ಕಂಥ ಸಂದರ್ಭದಲ್ಲಿ ಪೋಲೀಸರು ಏನು ಮಾಡುತ್ತಿದ್ದರು, ಎಸ್.ಪಿ. ಏನು ಮಾಡುತ್ತಿದ್ದರು ಎಂದು ನಾನು ಕೇಳುತ್ತೇನೆ ? ಎಸ್.ಪಿ.ಯವರನ್ನು ಸರ್ವೀಸ್‌ನಿಂದ ಡಿಸ್‌ಮಿಸ್ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಪತ್ರಿಕೆಯಲ್ಲಿ ಬಂದಿದೆ ಎಂದು ಅದನ್ನು ಇಲ್ಲಿ ಹೇಳುವುದು ಸರಿಯೇ, ಪತ್ರಿಕೆಯಲ್ಲಿ ಕಾಂಗ್ರೆಸ್‌ನವರು ಮಾಡಿಸಿದ್ದಾರೆ ಎಂದು ಬಂದಿದೆ ಎಂದು ನಾವು ಹೇಳಿದರೆ ನೀವು ಒಪ್ಪುತ್ತೀರಾ ?

(ಗೊಂದಲ)

ಶ್ರೀ ಧರ್ಮಸಿಂಗ್.—ಇಂತಹ ಘಟನೆ ಬೀದರ್ ನಗರದಲ್ಲಿ ಆದಮೇಲೆ, ಇಡೀ ಕರ್ನಾಟಕ ರಾಜ್ಯದಲ್ಲಿ ಹಾಗೂ ಇಡೀ ದೇಶದಲ್ಲಿ ಇದರ ಬಗ್ಗೆ ಪ್ರಸ್ತಾಪವಾದಾಗ ಇಲ್ಲಿರತಕ್ಕಂಥ ಆಡಳಿತ ಏತಕ್ಕೆ ಈ ಪರಿಸ್ಥಿತಿಯನ್ನು ನಿಯಂತ್ರಣ ಮಾಡಲಿಲ್ಲ ಎಂದು ಒಂದು ಪ್ರಶ್ನೆ ಮುಂದೆ ಬರುತ್ತಿದೆ. ಜುಡಿಷಿಯಲ್ ಎನ್‌ಕ್ವೈರಿಯಲ್ಲಿ ಯಾರು ಯಾರು ತಪ್ಪು ಮಾಡಿದರು ಎಂಬುದೆಲ್ಲಾ ಬರುತ್ತದೆ. ಅದು ಬೇರೆ. ಒಂದು ಜನಾಂಗವನ್ನು ಇನ್ನೊಂದು ಜನಾಂಗದ ಮೇಲೆ ಎತ್ತಿಕಟ್ಟತಕ್ಕಂಥ ಕೆಲಸವನ್ನು ನಾನು ಮಾಡುತ್ತಿಲ್ಲ. ಎಸ್.ಪಿ. ಏನು ಮಾಡುತ್ತಿದ್ದರು ಎಂಬುದರ ಬಗ್ಗೆ ಕೇಳುತ್ತಿದ್ದೇನೆ. ಅವರು ನಮ್ಮ ರಾಜ್ಯಕ್ಕೆ ಕೆಟ್ಟಹೆಸರು ತಂದಿದ್ದಾರೆ. ಇವತ್ತು ಇದು ಜನತಾ ಅಥವಾ ಕಾಂಗ್ರೆಸ್ ಪಕ್ಷಗಳ ಪ್ರಶ್ನೆ ಅಲ್ಲ. ಯಾವ ಎಸ್.ಪಿ. ಕರ್ನಾಟಕ ರಾಜ್ಯಕ್ಕೆ ಪೂರ್ಣವಾಗಿ ಕೆಟ್ಟ ಹೆಸರು ತಂದಿದ್ದಾರೆ, ಅಂತಹ ಎಸ್.ಪಿ.ಯನ್ನು ಮೊದಲು ಡಿಸ್‌ಮಿಸ್ ಮಾಡಬೇಕು. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ

ಎಂದರೆ, ಇಂತಹ ಘಟನೆ ಆಗತಕ್ಕಂಥ ಕಾಲದಲ್ಲಿ ಐದಾರು ತಾಸುಗಳವರೆಗೆ ಎಸ್.ಪಿ. ಏನು ಇದ್ದಾರೆ ಅವರು, ಅಲ್ಲಿನ ಜನರಿಗೆ ಯು ಆರ್ ಫ್ರೀ, ನೀವು ಏನು ಬೇಕಾದರೂ ಮಾಡಿಕೊಳ್ಳಬಹುದು ಎಂಬ ಮಾತನ್ನು ಹೇಳಿದ್ದಾರೆ ಎಂದು ನಮಗೆ ತಿಳಿದು ಬಂದಿದೆ. ಇವತ್ತು ಎಲ್ಲಾ ಕಡೆಗೂ ಗಲಾಟೆಗಳು ಆಗುತ್ತಿರುತ್ತವೆ. ಬೇಕಾದಷ್ಟು ಆಗುತ್ತವೆ. ಗಲಾಟೆಗಳನ್ನು ನಿಯಂತ್ರಣ ಮಾಡಬೇಕಾದುದು ಪೋಲೀಸ್ ವ್ಯವಸ್ಥೆಯ ಕೆಲಸ. ಪೋಲೀಸ್ ವ್ಯವಸ್ಥೆ ಏನು ಇದೆ, ಅವರು ಇದೆಲ್ಲಾ ಮಾಡಬೇಕಾಗುತ್ತದೆ. ಇವತ್ತು ಎಸ್.ಪಿ. ಇದ್ದಾರೆ, ಡಿ.ಸಿ. ಇದ್ದಾರೆ, ಅವರು ಏನು ಮಾಡಿದ್ದಾರೆ? ಮಂತ್ರಿಗಳು ಇರುತ್ತಾರೆ. ಅವರು ಏನು ಮಾಡಿದ್ದಾರೆ? ಇವತ್ತು ಅಲ್ಲಿದ್ದ ಎಸ್.ಪಿ.ಯವರು ಇದನ್ನು ನಿಯಂತ್ರಣ ಮಾಡಿದ್ದರೆ ಇವತ್ತು ಕರ್ನಾಟಕ ರಾಜ್ಯಕ್ಕೆ ಹಾಗೂ ಇಲ್ಲಿನ ಮುಖ್ಯಮಂತ್ರಿಗಳಿಗೆ ಈಗ ಏನು ಕೆಟ್ಟ ಹೆಸರು ಬಂದಿದೆ ಅದು ತಪ್ಪುತ್ತಿತ್ತು. ಬೀದರ್‌ನಲ್ಲಿ ಆದ ಘಟನೆ ಆಗುತ್ತಿರಲಿಲ್ಲ. ಇದಕ್ಕೆ ಕಾರಣರಾದ ಎಸ್.ಪಿ.ಯವರನ್ನು ಮೊದಲು ಡಿಸ್‌ಮಿಸ್ ಮಾಡಬೇಕು. ಇಲ್ಲವೇ ಸಸ್ಪೆಂಡ್ ಮಾಡಬೇಕು. ಈ ರೀತಿ ಮಾಡಿ You have to create confidence in the mass. ನೀವು ಎಲ್ಲಾ ಗುಂಪುಗಳ ಜನರನ್ನು ಸಮಾಧಾನಪಡಿಸಬೇಕು. ಇವತ್ತು ಎಲ್ಲರೂ ಶಾಂತರಾಗುತ್ತಿದ್ದಾರೆ. ಎಲ್ಲ ಮುಖಂಡರೂ ಹೋಗಿದ್ದಾರೆ. ಸಂತೋಷ್ ಮೋಹನ್ ದೇವ್‌ರವರು ಅಲ್ಲಿಗೆ ಬಂದು ನೋಡಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳಿಗೆ ಏನು ಹೇಳಿದ್ದಾರೆಂದರೆ ಇವತ್ತು ಅಲ್ಲಿ ಮಾಡತಕ್ಕ ಭೋಗ್ ಸರ್‌ಮನಿ ಕಾಲದಲ್ಲಿ ಬಂದೋಬಸ್ತು ಮಾಡಬೇಕಾಗಿದ್ದರೆ, ಸೂಕ್ತ ವ್ಯವಸ್ಥೆ ಮಾಡಬೇಕಾಗಿದ್ದರೆ, ಕೇಂದ್ರದ ನೆರವನ್ನು ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ಅವರೂ ಕೂಡಾ ೧೫-೧೬ನೇ ತಾರೀಖು ಆದಮೇಲೆ ಏನು ಪರಿಸ್ಥಿತಿ ಆಗಿದೆ, ಸರಕಾರ ಏನು ವ್ಯವಸ್ಥೆ ಮಾಡಿದೆ ಎಂಬುದನ್ನು ನೋಡಿ, ಅದಕ್ಕೆ ಅಭಿನಂದನೆಗಳನ್ನು ಕೊಟ್ಟಿದ್ದಾರೆ. ಆದರೆ ನಾನು ಏನು ಹೇಳುತ್ತಿದ್ದೇನೆ ಎಂದರೆ, ಈ ರೀತಿ ಘಟನೆ ಆಗತಕ್ಕಂಥ ಕಾಲದಲ್ಲಿ ಯಾರು ಪೋಲೀಸರು ರಕ್ಷಣೆ ಕೊಡಬೇಕಾಗಿತ್ತು ಅವರು ಕೊಟ್ಟಿಲ್ಲ. ಡಿ.ಐ.ಜಿ. ಪಾವಟೆಯವರು ಅಲ್ಲಿಗೆ ಹೋಗಲಾರದೇ ಇದ್ದರೆ ಇನ್ನೂ ಕೂಡಾ ಹೆಚ್ಚು ಅನಾಹುತ ಆಗುತ್ತಿತ್ತು. ಅಲ್ಲಿ ಗಲಾಟೆ ಮಾಡಿದವರು ಹೇಗೆ ಐಡೆಂಟಿಫೈ ಮಾಡಿ ಮನೆಗಳನ್ನು ಸುಟ್ಟಿದ್ದಾರೆ ಎಂದರೆ, ಕೇಲವ ಮುಸ್ಲಿಂ ಜನರ ಮನೆಗಳನ್ನು ಮಾತ್ರ ಸುಟ್ಟಿದ್ದಾರೆ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಹಿಂದೂ ಜನರ ಮನೆಗಳನ್ನೂ ಸುಟ್ಟಿದ್ದಾರೆ ಮುಸ್ಲಿಂ ಜನರ ಮನೆಗಳನ್ನು ಸುಟ್ಟಿದ್ದಾರೆ.

ಶ್ರೀ ಧರ್ಮಸಿಂಗ್.—ಅಲ್ಲಿ ಕೆಲವು ಮುಸ್ಲಿಂ ಮನೆಗಳನ್ನು ಸುಟ್ಟಿದ್ದಾರೆ. ಹಿಂದುಗಳ ಮನೆಗಳನ್ನು ಸುಟ್ಟಿಲ್ಲ.

ಶ್ರೀ ಗುರುಪಾದಪ್ಪ ನಾಗರಪಲ್ಲಿ.—ಅಲ್ಲಿ ಹಿಂದು ಜನರ ಮನೆಗಳನ್ನು ಸಹ ಸುಟ್ಟಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ದಯಮಾಡಿ ಕೇಳಿ. ಈ ಬಗ್ಗೆ ನನಗೆ ಅಲ್ಲಿನ ಡಿ. ಸಿ. ಯವರಿಂದ ಲಿಸ್ಟ್ ಬಂದಿದೆ. ಅನೇಕ ಹಿಂದು ಜನರ ಆಸ್ತಿಪಾಸ್ತಿ ನಷ್ಟವಾಗಿದೆ. ತಾವೇನಾದರೂ ಮಾತನಾಡುವಾಗ ಜವಾಬ್ದಾರಿಯಿಂದ ಮಾತನಾಡಬೇಕು. ಮುಸ್ಲಿಂ ಜನರ ಮನೆಗಳನ್ನು ಸುಟ್ಟಿದ್ದಾರೆ ಹಿಂದುಗಳ ಮನೆಗಳನ್ನು ಸುಟ್ಟಿಲ್ಲವೆಂದರೆ ಆಗ ಒಂದು ಭಾವನಾತ್ಮಕ ಭಾವನೆ ಬರುತ್ತದೆ. ನನ್ನಲ್ಲಿ ಲಿಸ್ಟ್ ಇದೆ. ಯಾರ್ಯಾರ ಆಸ್ತಿಪಾಸ್ತಿ ನಷ್ಟವಾಗಿದೆ ಎಂಬ ಬಗ್ಗೆ ಹೆಸರು ನಂಬರು ಎಲ್ಲಾ ಇದೆ.

ಅಧ್ಯಕ್ಷರು.—ಧರ್ಮಸಿಂಗ್‌ರವರೇ, ಸಾಕು ಮುಕ್ತಾಯ ಮಾಡಿ,

ಶ್ರೀ ಧರ್ಮಸಿಂಗ್.—ಅಲ್ಲಿ......

ಅಧ್ಯಕ್ಷರು.—ಆದಷ್ಟು ಬೇಗ ಮುಗಿಸಿ. ಉರಿಯುವ ಬೆಂಕಿಗೆ ನೀವು ಇನ್ನಷ್ಟು ಹುಲ್ಲು ಹಾಕಬೇಡಿ. ಮುಕ್ತಾಯ ಮಾಡಿ.

ಶ್ರೀ ಧರ್ಮಸಿಂಗ್.—ಅಲ್ಲಿನ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡು ಅನ್ಯಾಯವಾಗಿರುವ ಕುಟುಂಬಗಳಿಗೆ ಸಹಾಯ ಮಾಡಬೇಕೆಂದು ನಾನು ಕೇಳಿಕೊಂಡು ಈ ವಿಷಯದ ಬಗ್ಗೆ ಇನ್ನಷ್ಟು ಬೆಳಕು ಚೆಲ್ಲುವುದಕ್ಕೆ ನಮಗೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಬೀದರ್‌ನಲ್ಲಿ ನಡೆದಂತಹ ಘಟನೆ ಬಗ್ಗೆ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ವಿಷಯ ಬಹಳ ಪ್ರಾಮುಖ್ಯವಾದುದು ಎಂದು ತಾವು ಕೂಡ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮುಕ್ತ ಚರ್ಚೆಗೆ ಅವಕಾಶ ಮಾಡಿ ಕೊಟ್ಟಿದ್ದೀರಿ. ಈ ಬಗ್ಗೆ ನಾನು ಲಿಖಿತ ಹೇಳಿಕೆಯೊಂದನ್ನು ಕೊಟ್ಟು ನಂತರ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ.

೧. ಜಾತಿಯ ಸೌಹಾರ್ಧತೆಗೆ ಹೆಸರಾದ ಊರು ಬೀದರ್. ದಿವಂಗತ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಕೊಲೆ ಆದಾಗಲೂ ಸಹ ಬೀದರ್ ಅಹಿತಕರ ಘಟನೆಗಳಿಂದ ಮುಕ್ತವಾಗಿತ್ತು. ಈ ಹಿನ್ನಲೆಯಲ್ಲಿ ಸೆಪ್ಟೆಂಬರ್ ೧೪ ಮತ್ತು ೧೫ ರಂದು ಅಲ್ಲಿ ನಡೆದ ಘಟನೆಗಳಿಂದ ಆರು ವಿದ್ಯಾರ್ಥಿಗಳು ಸತ್ತು ೭೦ ಜನರಿಗೆ ಗಾಯವಾದದ್ದು ಮತ್ತು ೫೨ ಲಕ್ಷ ರೂ. ಗಳಷ್ಟು ಆಸ್ತಿಪಾಸ್ತಿ ನಷ್ಟವಾದದ್ದು ಒಂದು ದುರ್ದೈವ. ಈ ಅಹಿತಕರ ಘಟನೆಗಳಿಂದಾಗಿ ನನಗೆ ದಿಗ್ಭ್ರಮೆ ಹಾಗೂ ಅತೀವ ವೇಧನೆಯಾಗಿದೆ. ಕರ್ನಾಟಕದಲ್ಲಿ ಇಂತಹ ಘಟನೆಗಳು ನಡೆದಿದ್ದು ತೀರಾ ಶೋಚನೀಯ. ಬೀದರಿನ ಹಲವಾರು ಕಾಲೇಜುಗಳಲ್ಲಿ ಸುಮಾರು ೭೫೦ ಸಿಖ್ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಅವರಲ್ಲಿ ಹೆಚ್ಚಿನವರು ಗುರುದ್ವಾರ ಪ್ರಬಂಧಕ ಸಮಿತಿ ನಡೆಸುತ್ತಿರುವ ತಾಂತ್ರಿಕ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ದಿನಾಂಕ ೧೪–೯–೧೯೮೮ರ ರಾತ್ರಿ ಸುಮಾರು ೧೧ ಗಂಟೆಗೆ ಸಿಖ್ ಜನಾಂಗಕ್ಕೆ ಸೇರಿದ ಕೆಲವು ತಾಂತ್ರಿಕ ವಿದ್ಯಾರ್ಥಿಗಳು ಮತ್ತು ಬೀದರಿನ ಗಾಂಧಿಗಂಜದ ಗಣೇಶ ಮಂಡಳಿಯ ಕಾರ್ಯಕರ್ತರ ನಡುವೆ ಕಲಹವುಂಟಾಯಿತೆಂದು ವರದಿಯಾಗಿದೆ. ಈ ಎರಡು ಗುಂಪುಗಳ ನಡುವೆ ಮಾತುಗಳ ಮತ್ತು ಪ್ರಹಾರಗಳ ವಿನಿಮಯವೂ ನಡೆಯಿತು. ನಂತರ ಸಿಖ್ ವಿದ್ಯಾರ್ಥಿಗಳು ಅಲ್ಲಿಗೆ ಮಾರಕಾಸ್ತ್ರಗಳೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಂದರು. ಮತ್ತು ಅವರು ಚಪ್ಪರಕ್ಕೆ ಮತ್ತು ಅಲ್ಲಿ ನಿಲ್ಲಿಸಿದ್ದ ವಾಹನಗಳ ಮೇಲೆ ಕಲ್ಲು ತೂರಿ ಅವುಗಳಿಗೆ ಜಖಂ ಮಾಡಿದರು.

೨. ದಿನಾಂಕ ೧೫–೯–೧೯೮೮ರ ಬೆಳಿಗ್ಗೆ ಸಿಖ್ ವಿದ್ಯಾರ್ಥಿಗಳು ಮತ್ತು ಇತರರ ನಡುವೆ ಘರ್ಷಣೆ ಉಂಟಾಯಿತು. ಅಲ್ಲಲ್ಲಿ ಬೆಂಕಿ ಹಚ್ಚುವುದು ಮತ್ತು ಲೂಟಿ ಇತ್ಯಾದಿ ಪ್ರಕರಣಗಳು ನಡೆದವು. ಕೂಡಲೇ ಪೋಲೀಸರು ಕಾರ್ಯ ಪ್ರವೃತ್ತರಾಗಿ ಎರಡೂ ಗುಂಪುಗಳನ್ನು ಬೇರ್ಪಡಿಸಿ ಪರಿಸ್ಥಿಯನ್ನು ಹತೋಟಿಗೆ ತರಲು ಪ್ರಯತ್ನಿಸಿದರು. ಸುದ್ದಿ ಮುಟ್ಟಿದ ಕೂಡಲೇ ಅದೇ ದಿನ ಗುಲ್ಬರ್ಗಾದ ಡಿ. ಐ. ಜಿ. ಯವರು ಹೆಚ್ಚಿನ ಪೋಲೀಸು ತುಕಡಿಗಳೊಂದಿಗೆ ಬೀದರ್‌ಗೆ ಧಾವಿಸಿದರು. ಗಲಭೆಯಲ್ಲಿ ೪೪ ಮಂದಿ ಸಿಖ್ ವಿದಾರ್ಥಿಗಳು ಮತ್ತು ೧೦ ಮಂದಿ ಇತರರು ಗಾಯಗೊಂಡಿದ್ದಾರೆ. ಇದಲ್ಲದೆ ಇಬ್ಬರು ಸಿಖ್ ವಿದ್ಯಾರ್ಥಿಗಳು ಆಸ್ಪತ್ರೆಯಲ್ಲಿ ಮೃತಪಟ್ಟರು. ನಂತರ ಬೀದರ್‌ನ ಬಾವಿ ಒಂದರಲ್ಲಿ ೪ ಜನ ಸಿಖ್ ವಿದ್ಯಾರ್ಥಿಗಳ ಶವ ಕಂಡು ಬಂದು ಮೃತ ಪಟ್ಟವರ ಸಂಖ್ಯೆ ೬ಕ್ಕೆ ಏರಿತು. ಸೆಪ್ಟೆಂಬರ್ ೧೫ರಂದೇ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಹತೋಟಿಗೆ ತರಲಾಯಿತು. ಅಲ್ಲಿಂದೀಚೆಗೆ ಇದುವರೆಗೆ ಬೀದರಿಯಲ್ಲಿ ಯಾವ ಅಹಿತಕರ ಘಟನೆಗಳು ನಡೆದಿಲ್ಲ.

೩. ಗಲಭೆಯ ಸಂಬಂಧದಲ್ಲಿ ಇದುವರೆಗೆ ಪೋಲೀಸಿನವರು ೮೧ ಕೇಸುಗಳನ್ನು ದಾಖಲು ಮಾಡಿಕೊಂಡಿದ್ದಾರೆ ಹಾಗೂ ೧೨೭ ಮಂದಿಯನ್ನು ಬಂಧಿಸಿದ್ದಾರೆ. ಅವರ ಪೈಕಿ ೯೨ ಜನರನ್ನು ಕೋರ್ಟ್ ಜಾಮೀನಿನ ಮೇಲೆ ಬಿಡುಗಡೆ ಮಾಡಿದೆ ಹಾಗೂ ೩೪ ಮಂದಿಯನ್ನು ನ್ಯಾಯಾಂಗ ಅಭಿರಕ್ಷೆಗೆ ವಹಿಸಿದೆ. ಸಿ. ಓ. ಡಿ. ಘಟಕ ವಿಚಾರಣೆ ನಡೆಸುತ್ತಿದೆ. ವಿಚಾರಣೆಯ ಮೇಲ್ವಿಚಾರಣೆಯನ್ನು ವಿಶೇಷ ಐ. ಜಿ. ಪಿ. (ಸಿ. ಓ. ಡಿ.) ಇವರು ವಹಿಸಿಕೊಂಡಿದ್ದಾರೆ.

೪. ದಿನಾಂಕ ೧೫–೯–೮೮ರ ರಾತ್ರಿ ಎಲ್ಲಾ ಸಿಖ್ ವಿದ್ಯಾರ್ಥಿಗಳನ್ನು ಮತ್ತು ಆಸ್ಪತ್ರೆಗೆ ದಾಖಲಾಗಿದ್ದ ಇತರ ಹೊರ ರಾಜ್ಯದ ವಿದ್ಯಾರ್ಥಿಗಳನ್ನು ಸ್ಥಳೀಯ ಗುರುದ್ವಾರದಲ್ಲಿ ಅವರ ರಕ್ಷಣೆಯ ದೃಷ್ಟಿಯಿಂದ ಇರಿಸಲಾಯಿತು. ನಂತರ ಅವರನ್ನು ಉತ್ತರ ಭಾರತದ ಅವರವರ ಊರುಗಳಿಗೆ ಹೈದರಬಾದ್ ಮತ್ತು ದೆಹಲಿಯವರೆಗೆ ಪೋಲೀಸ್ ರಕ್ಷಣೆಯಲ್ಲಿ ಕಳುಹಿಸಲಾಯಿತು. ಸ್ಥಳೀಯ ಕಾಲೇಜು ಪ್ರಾಧಿಕಾರದವರಿಂದಾಗಲೀ ವಿದ್ಯಾರ್ಥಿಗಳ ರಕ್ಷಕರಿಂದಾಗಲೀ, ವಿದ್ಯಾರ್ಥಿಗಳು ಕಾಣೆಯಾಗಿರುವ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ.

೫. ಈ ಗಲಭೆಯ ಸುದ್ದಿ ತಿಳಿದ ತಕ್ಷಣ ಪರಿಸ್ಥಿತಿಯನ್ನು ಪರಿಶೀಲಿಸಲು ಹಾಗೂ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲು ನನ್ನ ಸಂಪುಟದ ಹಿರಿಯ ಸಚಿವರುಗಳಾದ ಶ್ರೀ ಜೆ. ಹೆಚ್. ಪಟೇಲ್ ಮತ್ತು ಶ್ರೀ ಪಿ. ಜಿ. ಆರ್. ಸಿಂಧಿಯ ಇವರನ್ನು ನಾನು ಬೀದರ್‌ಗೆ ಕಳುಹಿಸಿದೆನು. ಕರ್ನಾಟಕದ ಡಿ. ಜಿ. ಪಿ. ಯವರಾದ ಶ್ರೀ ಎ. ಆರ್ ನಿಜಾಮುದ್ದೀನ್‌ರವರು ಕೂಡ ಬೀದರ್‌ಗೆ ಭೇಟಿ ನೀಡಿ ನಗರದಲ್ಲಿ ಶಾಂತಿ ಹಿಂದಿರುಗಲು ಬೇಕಾದ ಎಲ್ಲಾ ಏರ್ಪಾಡುಗಳ ಮೇಲ್ವಿಚಾರಣೆಯನ್ನು ವಹಿಸಿದರು. ನನ್ನ ಸಹೋದ್ಯೋಗಿಗಳು ಗಲಭೆ ನಡೆದ ಸ್ಥಳಗಳ ಹಾಗೂ ಇಲ್ಲಿಯ ಗುರುದ್ವಾರಕ್ಕೆ ಭೇಟಿ ಇತ್ತು ಸಿಖ್‌ರನ್ನು ಒಳಗೊಂಡಂತೆ ಸ್ಥಳೀಯ ಮುಖಂಡರುಗಳೊಡನೆ ಮಾತುಕತೆ ನಡೆಸಿದರು. ಆ ಹಿನ್ನಲೆಯಲ್ಲಿ ಅಸ್ತಿತ್ವಕ್ಕೆ ಬಂದ ಶಾಂತಿ ಸ್ಥಾಪನೆ ಸಮಿತಿಯನ್ನು ಕೂಡ ಅವರು ಉದ್ದೇಶಿಸಿ ಮಾತನಾಡಿದರು.

೬. ಕೆ. ಎಸ್. ಆರ್. ಪಿ. ಯ ವಿಶೇಷ ಐ. ಜಿ. ಪಿ. ಮತ್ತು ಉತ್ತರ ವಲಯದ ಡಿ.ಐ.ಜಿ.ಪಿ. ಯವರು ದಿನಾಂಕ ೧೬-೯-೮೮ರಿಂದ ಸತತವಾಗಿ ಬೀದರಿನಲ್ಲಿ ಬೀಡು ಬಿಟ್ಟಿರುತ್ತಾರೆ. ೪೩ ಕಾದಿರಿಸಿದ ಸಶಸ್ತ್ರ ಪೋಲೀಸ್ ಪಡೆ, ೪ ಜಿಲ್ಲಾ ಸಶಸ್ತ್ರ ಪೋಲೀಸ್ ಪಡೆ, ೯ ಆಂಧ್ರ ಪ್ರದೇಶದ ಪೋಲೀಸ್ ಪಡೆ ಮತ್ತು ತಮಿಳುನಾಡಿನ ೩ ಪೋಲೀಸ್ ಪಡೆಯನ್ನು ಜನರ ಆಸ್ತಿಪಾಸ್ತಿ ಮತ್ತು ಜೀವದ ರಕ್ಷಣೆಗಾಗಿ ಬೀದರಿನಲ್ಲಿ ಸ್ಥಾಪಿಸಲಾಗಿದೆ. ಗಲಭೆಯಲ್ಲಿ ಮೃತಪಟ್ಟ ಸಿಖ್ ವಿದ್ಯಾರ್ಥಿಗಳ ಸ್ಮರಣಾರ್ಥ ದಿನಾಂಕ ೩೦-೯-೮೮ರಿಂದ ೨-೧೦-೮೮ರ ವರೆಗೆ ನಡೆಸಿದ ಭೋಗ್ ಆಚರಣೆಯ ಸಮಯದಲ್ಲಿ ಬಿಗಿ ಪೋಲೀಸ್ ಪಹರೆಯನ್ನು ಏರ್ಪಾಡಿಸಲಾಗಿತ್ತು,

೭. ಬೀದರ್ ಜಿಲ್ಲಾ ದಂಡಾಧಿಕಾರಿಗಳು ೧೪೪ನೇ ಸೆಕ್ಷನನ್ನು ಜಾರಿಗೊಳಿಸಿ ಇದನ್ನು ದಿನಾಂಕ ೧೦-೧೦-೮೮ರ ವರೆಗೆ ವಿಸ್ತರಿಸಿರುತ್ತಾರೆ. ಜಿಲ್ಲಾ ಆಡಳಿತವು ಪರಿಸ್ಥಿತಿಯ ಮೇಲೆ ತೀವ್ರ ನಿಗಾ ಇಡಲಾಗಿದ್ದು ಎಲ್ಲಾ ಮುಂಜಾಗ್ರತಾ ಕ್ರಮಗಳನ್ನೂ ಕೈಗೊಳ್ಳಲಾಗಿದೆ. ಶ್ರೀ ಎಂ. ಕೆ. ಶ್ರೀವಾತ್ಸವ, ಹೊಸ ಎಸ್. ಪಿ. ಯವರು ದಿನಾಂಕ ೨೯-೯-೮೮ರಂದು ಬೀದರಿನ ಪೋಲೀಸ್ ಸೂಪರಿಂಟೆಂಡೆಂಟರಾಗಿ ಅಧಿಕಾರ ವಹಿಸಿಕೊಂಡಿರುತ್ತಾರೆ.

೮. ದಿನಾಂಕ ೧೬-೯-೮೮ರಿಂದ ಯಾವುದೇ ಘ ಮತೀಯ ಗಲಭೆಯು ಅಲ್ಲಿ ನಡೆದಿರುವುದಿಲ್ಲ. ಆದರೂ ದಿ. ೨೫-೯-೮೮ರಂದು ಸಿಖ್ ಜನಾಂಗದ ಕೆಲವರು ಹತ್ತಿರದ ನೆರೆಯ ಜನವಾಡ ಗ್ರಾಮಕ್ಕೆ ತೆರಳಿ ಅಲ್ಲಿ ಸಿಖ್ ಬಾವುಟವನ್ನು ಒಂದು ಸಣ್ಣ ಗುರುದ್ವಾರದಲ್ಲಿ ಹಾರಿಸಿದರು. ಆ ನಂತರ ಅದನ್ನು ಗ್ರಾಮಸ್ಥರು ಎಳೆದು ಹಾಕಿದರಂದು. ಈ ಸಂಬಂಧದಲ್ಲಿ ಕ್ರೈಂ ಸಂ. ೫೬:೮೮ ರಲ್ಲಿ ಒಂದು ಮೊಕದ್ದಮೆಯನ್ನು ದಾಖಲಿಸಿ ೫೬ ಮಂದಿಯನ್ನು ಬಂಧಿಸಲಾಗಿದೆ. ಅವರನ್ನು ನ್ಯಾಯಾಂಗ ಅಭಿರಕ್ಷೆಗೆ ಕಳುಹಿಸಲಾಗಿದೆ. ದಿ. ೩೦-೯-೮೮ರಿಂದ ದಿ. ೨-೧೦-೮೮ರ ವರೆಗೆ ಸಿಖ್ ಮತದವರು ಆಚರಿಸಿದ ಭೋಗ್ ಆಚರಣೆ ಶಾಂತಿಯುತವಾಗಿ ನಡೆದಿದೆ.

೯. ಗುಲ್ಬರ್ಗ ವಿಶ್ವ ವಿದ್ಯಾಲಯದ ಉಪಕುಲಪತಿಗಳು ಬೀದರಿಗೆ ತೆರಳಿ ನವೆಂಬರ್ ೧೫, ೧೯೮೮ರಿಂದ ಪ್ರಾರಂಭವಾಗಬೇಕಾಗಿದ್ದ ಪರೀಕ್ಷೆಗಳನ್ನು ಡಿಸೆಂಬರ್ ೧೫, ೧೯೮೮ಕ್ಕೆ ಮುಂದುವರಿಸುವುದಾಗಿ ಘೋಷಿಸಿದರು.

೧೦. ಈ ಗಲಭೆಗಳಲ್ಲಿ ಸುಮಾರು ೮೦ ಮನೆಗಳು ಮತ್ತು ೧೦ ಅಂಗಡಿಗಳು ಹಾನಿಗೀಡಾಗಿವೆ ಅಥವಾ ಕೆಡವಲಾಗಿದೆ. ಹಾನಿಗೀಡಾದ ಅಥವಾ ನಷ್ಟವಾದ ಆಸ್ತಿ ಪಾಸ್ತಿಗಳ ಅಂದಾಜು ಮೌಲ್ಯ ರೂ. ೫೨ ಲಕ್ಷ. ಪೋಲೀಸರು ನಂತರ ಸುಮಾರು ೫ ಲಕ್ಷ ರೂ. ಗಳ ಆಸ್ತಿ ಪಾಸ್ತಿಗಳನ್ನು ವಶಪಡಿಸಿಕೊಂಡಿರುತ್ತಾರೆ.

೧೧. ದಿನಾಂಕ ೨೩-೯-೮೮ರಂದು ಸನ್ಮಾನ್ಯ ರಾಜ್ಯಪಾಲರು, ನಾನು ಹಾಗೂ ಮಾಜಿ ಮುಖ್ಯ ಮಂತ್ರಿಯವರಾದ ಶ್ರೀ ರಾಮಕೃಷ್ಣ ಹೆಗಡೆಯವರ ಜೊತೆ ಬೀದರಿಗೆ ಹೋಗಿ ಸ್ಥಳೀಯ ಶಾಸಕರು, ಲೋಕಸಭಾ ಸದಸ್ಯರು ಮತ್ತು ಸಿಖ್‌ರನ್ನು ಒಳಗೊಂಡಂತೆ ಎಲ್ಲಾ ಕೋಮುಗಳ ಮುಖ್ಯಸ್ಥರನ್ನು ಸಂದಿಸಿದೆವು. ಗಲಭೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿ ಹಾನಿಗೆ ಈಡಾದ ಕಟ್ಟಡಗಳನ್ನು ಕೂಡ ನೋಡಿದ್ದೇವೆ. ಆ ದಿನ ಮುಖಂಡರನ್ನು ಭೇಟಿ ಮಾಡಿದಾಗ ಅವರ ಸಹಕಾರವನ್ನು ಕೋರಿ ಬೀದರ್ ನಗರದಲ್ಲಿ ಶಾಶ್ವತವಾದ ಶಾಂತಿ ಹಾಗೂ ಸೌಹಾರ್ದತೆ ನೆಲೆಸುವ ಅತ್ಯಗತ್ಯತೆಯನ್ನು ಒತ್ತಿ ಹೇಳಿದ್ದೇವೆ.

೧೨. ತಕ್ಷಣದ ಪರಿಹಾರ ಕ್ರಮವಾಗಿ ಸರ್ಕಾರವು ಮೃತರ ಸಮೀಪ ಬಂಧುಗಳಿಗೆ ತಲಾ ರೂ. ೨೦,೦೦೦ ದಂತೆ ಮತ್ತು ಗಾಯಗೊಂಡವರಿಗೆ ರೂ. ೫೦೦ ರಿಂದ ರೂ. ೫೦೦೦ ಗಳ ವರೆಗೆ

ವಿತರಿಸಲು ಒಟ್ಟು ರೂ. ೨,೨೦,೦೦೦-೦೦ ಗಳನ್ನು ಬಿಡುಗಡೆ ಮಾಡಿದೆ. ಸ್ಥಾಯೀ ಸರ್ಕಾರಿ ಆದೇಶದಂತೆ ಆಸ್ತಿ ಪಾಸ್ತಿಗೆ ಉಂಟಾದ ಹಾನಿಯ ಮೌಲ್ಯವನ್ನು ನಿರ್ಧರಿಸಿ ಸೂಕ್ತ ಪರಿಹಾರ ನೀಡಲಾಗುವುದು. ಈ ಸಂಬಂಧದಲ್ಲಿ ಬೀದರ್ ಜಿಲ್ಲಾ ದಂಡಾಧಿಕಾರಿಗಳಿಂದ ಬಂದಿರುವ ವರದಿಯನ್ನು ಪರಿಶೀಲಿಸಲಾಗುತ್ತಿದೆ. ಈ ಮಧ್ಯೆ ನಷ್ಟಕ್ಕೊಳಗಾದ ವಿದ್ಯಾರ್ಥಿಗಳ ಪುಸ್ತಕ ಮತ್ತು ಹಲವಾರು ಇತರ ತಾಂತ್ರಿಕ ಶಿಕ್ಷಣ ಸಲಕರಣಗಳ ಬಗ್ಗೆ ಪೂರ್ತ ಪರಿಹಾರ ನೀಡಲಾಗುವುದೆಂದು ನಾನು ಘೋಷಿಸಿದ್ದೇನೆ.

೧೩. ಈ ಗಲಭೆಗಳಿಗೆ ಕಾರಣವನ್ನು ಕಂಡು ಹಿಡಿಯಲು ಮತ್ತು ಯಾರು ಜವಾಬ್ದಾರರು ಎಂದು ನಿಗದಿ ಪಡಿಸಲು, ತನಿಖಾ ಆಯೋಗದ ಕಾಯಿದೆ ೧೯೫೨ರ ಪ್ರಕಾರ ಕರ್ನಾಟಕದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನೊಳಗೊಂಡ ಒಂದು ತನಿಖಾ ಆಯೋಗವನ್ನು ರಚಿಸಲು ಸರ್ಕಾರವು ತೀರ್ಮಾನಿಸಿದೆ. ಈ ಬಗ್ಗೆ ಆದೇಶವನ್ನು ಉಚ್ಚ ನ್ಯಾಯಾಲಯವು ನ್ಯಾಯಾಧೀಶರ ಹೆಸರನ್ನು ಸೂಚಿಸಿದ ಬಳಿಕ ಹೊರಡಿಸಲಾಗುವುದು.

೧೪. ಈ ಅಹಿತಕರ ಘಟನೆಗಳಿಂದ ಉಂಟಾಗಿರುವ ಪ್ರಕ್ಷುಬ್ಧ ವಾತಾವರಣವನ್ನು ತಿಳಿಗೊಳಿಸಿ ಎಲ್ಲಾ ಧರ್ಮಗಳ ಜನರ ನಡುವೆ ಸೌಹಾರ್ದ ಸಂಬಂಧ ಮೂಡಿಸಲು ೮ ಮಂದಿ ಪ್ರತಿಷ್ಠಿತ ವ್ಯಕ್ತಿಗಳ ಸೌಹಾರ್ದ ನಿಯೋಗವೊಂದನ್ನು ನಾನು ರಚಿಸಿದ್ದೇನೆ. ಈ ಕೆಳಕಂಡ ೮ ಮಂದಿ ಪ್ರತಿಷ್ಠಿತ ವ್ಯಕ್ತಿಗಳ ಸೌಹಾರ್ದ ಸಮಿತಿಯನ್ನು ರಚಿಸಿದ್ದೇನೆ.

೧) ಶ್ರೀ ಎಸ್. ಎಸ್. ಬರ್ನಾಲ, ಪಂಜಾಬಿನ ಮಾಜಿ ಮುಖ್ಯಮಂತ್ರಿಗಳು.

೨) ಶ್ರೀ ಐ. ಕೆ. ಗುಜ್ರಾಲ್, ಮಾಜಿ ಕೇಂದ್ರ ಸಚಿವರು ಮತ್ತು ರಷ್ಯಾದ ಮಾಜಿ ಭಾರತದ ರಾಯಭಾರಿಗಳು.

೩) ಶ್ರೀ ಬಲವಂತ್ ಸಿಂಗ್, ಪಂಜಾಬಿನ ಮಾಜಿ ಹಣಕಾಸು ಸಚಿವರು.

೪) ಲೆಫ್ಟಿನೆಂಟ್ ಜನರಲ್ ಅರೋರಾ, ಎಂ. ಪಿ.

೫) ಪ್ರೊ॥ ದರ್ಶನ್ ಸಿಂಗ್ ರಾಗಿ, ಪ್ರಧಾನ ಅರ್ಚಕರು.

೬) ಶ್ರೀ ಮಂಜೀತ್ ಸಿಂಗ್, ಕಲ್ಕತ್ತಾ.

೭) ಶ್ರೀ ಜಿ. ಎಸ್. ಬಬ್ಬರ್, ಪ್ರಧಾನ ಕಾರ್ಯದರ್ಶಿ, ಅಖಿಲ ಭಾರತ ಸಿಖ್ ಸಮಿತಿ.

೮) ಶ್ರೀ ಚಡ್ಡಾ, ಬೆಂಗಳೂರು ಗುರುದ್ವಾರದ ಮುಖ್ಯಸ್ಥರು.

೧೫. ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವರಾದ ಶ್ರೀ ಸಂತೋಷ ಮೋಹನ್ ದೇವ್ ಅವರ ನಾಯಕತ್ವದಲ್ಲಿ ಕೇಂದ್ರದ ತಂಡ ಒಂದು ಬೀದರ್‌ಗೆ ದಿ. ೨೯-೯-೮೮ ರಂದು ಭೇಟಿ ಇತ್ತು ನಂತರ ಅದೇ ದಿನ ಸಾಯಂಕಾಲ ನನ್ನ ಮತ್ತು ನನ್ನ ಸಹೋದ್ಯೋಗಿಗಳ ಜೊತೆ ಮಾತುಕತೆ ನಡೆಸಿದರು. ಬೀದರ್‌ನಲ್ಲಿ ಶಾಂತಿ ಸೌಹಾರ್ದ ಮತ್ತೆ ನೆಲೆಸುವಂತೆ ಮಾಡಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳು ತಮಗೆ ತೃಪ್ತಿ ತಂದಿವೆಯೆಂದು ಶ್ರೀ ಸಂತೋಷ್ ಮೋಹನ್ ದೇವ್ ಅವರು ಅಭಿಪ್ರಾಯ ವ್ಯಕ್ತಪಡಿಸಿದರು ಹಾಗೂ ಶಾಂತಿ ಸ್ಥಾಪನೆಗೋಸ್ಕರ ಬೇಕಾದ ಸಹಾಯವನ್ನು ಕೇಂದ್ರ ಮಾಡುವುದಾಗಿ ಆಶ್ವಾಸನೆ ಇತ್ತಿದ್ದಾರೆ.

ಈ ಹಿನ್ನಲೆಯಲ್ಲಿ ಬೀದರ್ ನಗರದಲ್ಲಿ ಶಾಂತಿ ಕಾಪಾಡಲು ಬೀದರ್ ನಗರದ ಎಲ್ಲಾ ನಾಗರೀಕರ ಸಹಕಾರವನ್ನು ಕೋರುತ್ತೇನೆ. ಅದರಲ್ಲಿಯೂ ಅಲ್ಲಿಯ ಶಾಸಕರು, ಲೋಕಸಭಾ ಸದಸ್ಯರು ರಾಜಕೀಯ ಪಕ್ಷಗಳು, ಧಾರ್ಮಿಕ ಮುಖಂಡರು ಹಾಗೂ ವಿದ್ಯಾ ಸಂಸ್ಥೆಗಳ ಪ್ರಾಂಶುಪಾಲರು ಇವರುಗಳ ಸಹಕಾರ ಹಾಗೂ ಬೆಂಬಲ ಅತ್ಯಗತ್ಯ. ಬೀದರ್ ನಗರದಲ್ಲಿ ದುರ್ದೈವಿ ಘಟನೆಗಳು ನಡೆದ ನಂತರ ಸರ್ಕಾರವು ದಿಟ್ಟ ಕ್ರಮಗಳನ್ನು ಕೈಗೊಂಡಿದೆ ಹಾಗೂ ಶಾಂತಿ ಸೌಹಾರ್ದ ಸ್ಥಾಪನೆ ಮಾಡಲು ಸಾಧ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಂಡಿದೆಯೆಂದು ಮಾನ್ಯ ಸದಸ್ಯರಿಗೆ ನಾನು ಈ ಮೂಲಕ ತಿಳಿಸ ಬಯಸುತ್ತೇನೆ.

ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಈ ಬಗ್ಗೆ ಮೊದಲೇ ಮನವಿಯನ್ನು ಮಾಡಿಕೊಂಡಿದ್ದೆನು. ಏನೆಂದರೆ, ಈ ಘಟನೆಯು ಅತ್ಯಂತ ದುರ್ದೈವದ ಘಟನೆಯಾಗಿದೆ ಎಂದು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ನಾನು ಈ ಒಂದು ಘಟನೆ ದುರ್ದೈವಿ ಘಟನೆ ಎಂಬುದನ್ನು ಒಪ್ಪಿಕೊಂಡಿದ್ದೇನೆ. ಮತ್ತು ಈ ಘಟನೆಯು ಎಲ್ಲರೂ ತಲೆತಗ್ಗಿಸತಕ್ಕಂಥ ಘಟನೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ.

ರಾಜ್ಯದಲ್ಲಿ ಯಾವುದೇ ಸರಕಾರ ಇರಲಿ, ಇಂಥ ಘಟನೆಯು ಆಗಬಾರದು. ಈ ಘಟನೆಯ ಕುರಿತು ಒಂದೆರಡು ವಿಚಾರಗಳನ್ನು ನಾನು ಇಲ್ಲಿ ಹೇಳಿದರೆ ಈ ಕುರಿತು ಕರ್ನಾಟಕ ಸರಕಾರದ ಒಲವು, ನೀತಿ, ಯಾವ ರೀತಿಯಲ್ಲಿ ಇದೆ ಎಂದು ತಮಗೆ ತಿಳಿಯುತ್ತದೆ.

ನಾನು ಹೇಳಿಕೆಯಲ್ಲಿ ದಿವಂಗತ ಶ್ರೀಮತಿ ಇಂದಿರಾ ಗಾಂಧೀಜಿಯವರ ಕೊಲೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದು ಏಕೆಂದರೆ, ಅವರ ಕೊಲೆಯು ನಡೆದಾಗ ದೇಶದಾದ್ಯಂತ ಅಲ್ಲೋಲಕಲ್ಲೋಲ ಉಂಟಾಯಿತು. ಆಗ ನಮ್ಮ ರಾಜ್ಯದಲ್ಲಿಯೂ ಪ್ರತಿಕ್ರಿಯೆ ಉಂಟಾಯಿತು. ಆಗ ಮಾನ್ಯ ಮುಖ್ಯಮಂತ್ರಿಗಳಾಗಿದ್ದವರು ನ್ಯೂಯಾರ್ಕ್‌ನಲ್ಲಿ ಇದ್ದರು. ನಾನು ಉಸ್ತುವಾರಿ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಧಾನಿ ಇಂದಿರಾಜೀಯವರ ಕೊಲೆ ಆದ ನಂತರ ಬೀದರ್ ವಿಭಾಗದಲ್ಲಿ ಕೆಲವರು ಸ್ವೀಟ್‌ವಿಸೀಟ್ ಹಂಚಿದರು ಎಂದು ನಮಗೆ ಗೊತ್ತಾಯಿತು. ಆ ಸುದ್ದಿಯನ್ನು ತಿಳಿದ ತತ್‌ಕ್ಷಣವೆ ನಾನು ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳಿಗೆ ಹೇಳಿ, ಅಲ್ಲಿನ ಎಲ್ಲಾ ಸಿಖ್ ಮಕ್ಕಳನ್ನು ಅಲ್ಲಿಯ ಗುರುದ್ವಾರದಲ್ಲಿ ಮೂರು ದಿವಸಗಳ ಕಾಲ ಇಟ್ಟುಕೊಳ್ಳಲು ವ್ಯವಸ್ಥೆಯನ್ನು ಮಾಡಿದ್ದೆನು. ಇಂತಹ ಸಿಹಿ ಹಂಚಿದ ಸುದ್ದಿ ತಿಳಿದ ಕೂಡಲೇ ಬೀದರ್ ನಗರದ ವಿಭಾಗದಲ್ಲಿ ಒಂದು ರೀತಿಯಲ್ಲಿ ಪ್ರಕ್ಷುಬ್ಧ ವಾತಾವರಣ ಉಂಟಾಗಿತ್ತು. ಅದೇ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಸಿಖ್‌ರ ಲಾರಿಗಳು ಬರುತ್ತಾ ಇದ್ದುವು, ಅವುಗಳನ್ನು ಅಲ್ಲಿಯೇ ನಿಲ್ಲಿಸಲಿಕ್ಕೆ ವ್ಯವಸ್ಥೆ ಮಾಡಿದ್ದೆನು. ಮೂರು ದಿವಸಗಳ ಕಾಲ ಲಾರಿಯನ್ನು ಬಿಡಲಿಲ್ಲ. ಅವರಿಗೆ ಪೂರ್ಣ ರಕ್ಷಣೆಯನ್ನು ಕೊಟ್ಟಿದ್ದೆವು. ಯಾಕೆಂದರೆ ಈ ಸಮುದಾಯದ ಜನರ ಲಾರಿಗಳು ರಸ್ತೆಯಲ್ಲಿ ಹೋಗುವಾಗ ಏನಾದರೂ ಅನಾಹುತಗಳು ಜರುಗಬಹುದೆಂದು ಮುಂಜಾಗ್ರತಾ ಕ್ರಮವಾಗಿ ರಕ್ಷಣೆ ಕೊಟ್ಟು, ವಾತಾವರಣ ತಿಳಿಯಾದ ಮೇಲೆ ಅವುಗಳನ್ನು ಮುಂದಕ್ಕೆ ಹೋಗುವುದಕ್ಕೆ ವ್ಯವಸ್ಥೆ ಮಾಡಿದ್ದೆ.

೪. ೦೦ ಪಿ. ಎಂ.

ನಾನು ಶ್ರೀಮತಿ ಇಂದಿರಾಗಾಂಧಿಯವರ ಶವಸಂಸ್ಕಾರದಲ್ಲಿ ಭಾಗವಹಿಸಲು ಹೋಗಿದ್ದೆ. ಅಲ್ಲಿ ನಮ್ಮ ಪಕ್ಷದ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್ ಅವರು ಡೆಲ್ಲಿಯೊಳಗೆ ಹೋಗಿಬರೋಣ ಬನ್ನಿ ಎಂದಾಗ ನಾನು ಅವರ ಜೊತೆ ಹೋದೆ. ಅನೇಕ ಕಡೆ ಮಕ್ಕಳಿಗೆ ಹಾಲಿಲ್ಲ, ಬ್ರೆಡಿಲ್ಲ, ಊಟದ ವ್ಯವಸ್ಥೆ ಇರಲಿಲ್ಲ. ಆಗ ತಕ್ಷಣವೇ ೧೦ ಲಕ್ಷ ರೂ.ಗಳನ್ನು ಕರ್ನಾಟಕದ ಪರವಾಗಿ ಕಷ್ಟದಲ್ಲಿರುವವರಿಗೆ ಅಗತ್ಯ ವಸ್ತುಗಳನ್ನು ಒದಗಿಸುವುದಕ್ಕೆಂದು ಕೊಟ್ಟಿದ್ದೇನೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ನಮ್ಮ ಸರ್ಕಾರಕ್ಕೆ ಸ್ಪಷ್ಟವಾದ, ದೃಢವಾದ ನೀತಿ ಇದೆ. ಇಂತಹ ಘಟನೆಗಳು ಆಗಕೂಡದಗ್ಗು, ದುರ್ದೈವದಿಂದ ಆಗಿದೆ. ಈ ಘಟನೆಗೆ ನಾನು ಕಾರಣಗಳನ್ನು ವಿಶ್ಲೇಷಣೆ ಮಾಡುವುದಿಲ್ಲ. ಇದರ ಬಗ್ಗೆ ಅನೇಕ ಜನರು ಅಭಿಪ್ರಾಯ ಸರ್ಕಾರದವರ ಹೇಳಿಕೆ, ಪತ್ರಿಕೆಗಳಲ್ಲಿ ಬಂದಿದೆ. ಅವುಗಳಲ್ಲಿ ಬಹಳ ಇನ್‌ಫ್ಲೇಟೆಡ್ ರಿಪೋರ್ಟ್ಸ್ ಬಂದಿವೆ. ರಾಜಕೀಯ ಪಕ್ಷಗಳ ಮೇಲೆ ಗೂಬೆ ಇದೆ. ಸದಸ್ಯರ ಮೇಲೆ ಗೂಬೆ ಇದೆ. ಸಂಸ್ಥೆಗಳ ಮೇಲೆ ಗೂಬೆ ಇದೆ. ಅವನ್ನೆಲ್ಲ ನಾನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ೧೪ನೇ ತಾರೀಖು ರಾತ್ರಿ ನಡೆದ ಘಟನೆ ಬಗ್ಗೆ ವಿವಾದ ಇಲ್ಲ. ೧೫ನೇ ತಾರೀಖು ಬೆಳಿಗ್ಗೆ ನಡೆದ ಘಟನೆ ವಿಚಾರವಾಗಿ ಸ್ಥಳೀಯ ಶಾಸಕ ಶ್ರೀ ಲೈಕುದ್ದೀನ್‌ರವರು ಸ್ಪಷ್ಟವಾಗಿ ಹೇಳಿದ್ದಾರೆ. ಎಸ್. ಪಿ. ಯವರು ಏನು ಮಾಡಿದರು, ವಿದ್ಯಾರ್ಥಿಗಳನ್ನು ಯಾವ ರೀತಿ ಹಿಂದಕ್ಕೆ ಕರೆದುಕೊಂಡು ಹೋದರು, ಆಮೇಲೆನಾಯಿತು ಎಂಬುದನ್ನೆಲ್ಲ ಹೇಳಿದ್ದಾರೆ. ಅವರು ಕಂಡದನ್ನು ಹೇಳಿದ್ದಾರೆ, ಬೇರೆ ಸದಸ್ಯರು ಸಹ ತಮಗೆ ಕಂಡಿದ್ದನ್ನು ಹೇಳಿದ್ದಾರೆ. ಈ ಎಸ್. ಪಿ. ವಿಚಾರದಲ್ಲಿ ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ನಾನು ಸಿ. ಒ. ಡಿ. ಎನ್‌ಕ್ವಯರಿಗೆ ಆಜ್ಞೆ ಮಾಡಿದ್ದೇನೆ. ಅದರ ರಿಪೋರ್ಟ್ ಬಂದ ಮೇಲೆ ತಕ್ಕ ಕ್ರಮ ಕೈಗೊಳ್ಳಲು ನಾನು ಹಿಂದೆಮುಂದೆ ನೋಡುವುದಿಲ್ಲ. ಯಾರೇ ಇರಲಿ, ಎಷ್ಟೇ ದೊಡ್ಡವರಲಿ, ನಾನು ಸ್ಪೇರ್ ಮಾಡುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮೊದಲು ಆ ಎಸ್. ಪಿ. ಯನ್ನು ಸಸ್ಪೆಂಡ್ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಹಾಗೆ ಹೇಳುತ್ತೀರಿ, ಆದರೆ ಬೀದರ್ ಜಿಲ್ಲೆಯ ಎಲ್ಲ ಪಟ್ಟಣಗಳಲ್ಲಿ ಅವರನ್ನು ಸಸ್ಪೆಂಡ್ ಮಾಡಬೇಡಿ ಎಂದು ಜನ ಮೆರವಣಿಗೆ ಮಾಡುತ್ತಿದ್ದಾರಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—೧೪ನೇ ತಾರೀಖು ರಾತ್ರಿ ಒಂದೇ ನಡೆದಿದ್ದರೆ ಆಯಿತು ಅನ್ನಬಹುದಿತ್ತು ? ಆದರೆ ೧೫ನೇ ತಾರೀಖು ನಡೆದಿದೆಯಲ್ಲ. ಅದರ ಮೇಲಾದರೂ ಹೇಳಬೇಕಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—[illegible], ವಿರೋಧ ಹೀಗೆ ಎರಡೂ ರೀತಿಯ ಅಭಿಪ್ರಾಯ ಇದೆ. ಆದ್ದರಿಂದ ಎನ್‌ಕ್ವಯರಿ [illegible]ವುದಾಗಿ ಹೇಳಿದ್ದೇನೆ. ವರದಿ ಬಂದ ಮೇಲೆ ಕ್ರಮ ತೆಗೆದುಕೊಳ್ಳುವ ಭರವಸೆ ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಿಮಗೆ ನಿಜವಾಗಿಯೂ ಈ ಬಗ್ಗೆ ಏನು ಅನ್ನಿಸುತ್ತದೆ ಅದನ್ನು ಹೇಳಿ ನೋಡೋಣ, ಯಾವುದೇ ಅಡ್ಮಿನಿಸ್ಟ್ರೇಷನ್‌ನಲ್ಲಿ ೨೪ ಗಂಟೆ ಕಾಲ ಪೋಲೀಸ್ ಇಲಾಖೆ ನಿಷ್ಕ್ರಿಯವಾಗಿತ್ತು ಅಂದರೆ ಒಪ್ಪಿಕೊಳ್ಳುತ್ತೀರಾ ?

ಶ್ರೀ ಧರ್ಮಸಿಂಗ್.—ಆ ಎಸ್. ಪಿ. ಜನರ ಎದುರಿಗೆ ನಿಂತುಕೊಂಡೇ ಬೇರೆಯವರ ತಲೆ ಒಡೆಯಿರಿ ಅಂತ ಹೇಳ್ತಿದ್ದ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ರೀತಿ ಏನಾದರೂ ಹೇಳಿದ್ದರೆ ಆತನನ್ನು ಗಲ್ಲಿಗೆ ಹಾಕುವುದಕ್ಕೆ ರೆಕಮೆಂಡ್ ಮಾಡುತ್ತೇನೆ. ಈ ದೇಶದಲ್ಲಿ ಯಾವುದೇ ಎಸ್. ಪಿ. ಎಂಥಾ ನಾಲಾಯಖ್ ಇದ್ದರೂ ಜನರ ಎದುರು ನೀತು ಗುಂಡು ಹಾಕಿ ಎಂದು ಹೇಳುತ್ತಾನೆ ಎಂದರೆ, ನೀವು ಇದನ್ನು ಜವಾಬ್ದಾರಿಯಿಂದ ಹೇಳುತ್ತಿದ್ದೀರಿ ತಾನೇ ? ಆದ್ದರಿಂದ ಎಸ್. ಪಿ. ಇರಲಿ ಅಥವಾ ಇನ್ಯಾರೇ ಇರಲಿ, ವರದಿ ಬಂದ ಮೇಲೆ ಅವರ ವಿರುದ್ಧ ಶಿಸ್ತಿನ ಕ್ರಮತೆಗೆದುಕೊಳ್ಳುತ್ತೇನೆ.

ಶ್ರೀ ವೀರಪ್ಪ ಮೊಯಿಲಿ.—ಇಷ್ಟು ಗಂಭೀರ ಘಟನೆಯಾಗಿದ್ದರೂ ಸಹ ಕ್ರಮ ತೆಗೆದುಕೊಳ್ಳಲು ಇಷ್ಟು ಸಮಯ ಬೇಕೇ ? ಘಟನೆ ನಡೆದದ್ದು ೧೪ನೇ ತಾರೀಖು. ಇವತ್ತು ೩ನೇ ತಾರೀಖು. ಅಂದರೆ ಇಲ್ಲಿಗೆ ೧೫, ೧೬ ದಿವಸ ಆಗಿದ್ದರೂ ಸಿ. ಓ. ಡಿ. ವರದಿ ಎಂದು ಹೇಳುತ್ತಿದ್ದೀರಲ್ಲ, ಸಿ. ಓ. ಡಿ. ಒಂದೇನೆ ನಿಮ್ಮ ಹತ್ತಿರ ಇರುವುದು? ಇಂಟೆಲಿಜೆನ್ಸಿ ಏಜೆನ್ಸಿ ಇಲ್ಲವೇ ? ಕ್ರಮ ತೆಗೆದುಕೊಳ್ಳಲು ಇಷ್ಟು ದಿವಸ ತೆಗೆದುಕೊಳ್ಳುವುದಾದರೆ ಏಕೆ ಸರ್ಕಾರ ನಡೆಸುತ್ತಿದ್ದೀರಿ, ಅಧಿಕಾರ ಬಿಟ್ಟು ಹೋಗಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ರಾಜಕೀಯವಾಗಿ ಉತ್ತರ ಹೇಳಬೇಕೆಂದರೆ ಉತ್ತರ ಹೇಳಬಹುದು, ಇಂತಹ ಘಟನೆಯ ಬಗ್ಗೆ ನಮ್ಮ ಸರಕಾರ ಯಾವ ರೀತಿ ನಡೆದುಕೊಳ್ಳುತ್ತದೆ, ಕೇಂದ್ರ ಸರಕಾರ ಯಾವ ರೀತಿ ನಡೆದುಕೊಳ್ಳುತ್ತದೆ ಎಂದು ಹೇಳಬೇಕಾಗಿದೆ. ಶ್ರೀಮತಿ ಇಂದಿರಾಗಾಂಧಿಯವರ ಕೊಲೆ ಬಗ್ಗೆ ವರದಿ ೪ ವರ್ಷದ ನಂತರ ಬಂದರೂ ಏನೂ ಮಾಡಲಿಲ್ಲ. ಜ್ಯುಡಿಷಿಯಲ್ ಎನ್‌ಕ್ವೈರಿಯಾಗಿದೆ, ಅದನ್ನು ಮುಚ್ಚುತ್ತಿದ್ದೀರಿ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಮೊದಲು ನಿಮ್ಮದು ನೋಡಿಕೊಳ್ಳಿ, ಸುಮ್ಮನೆ ಮಾತನಾಡಬೇಡಿ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೈತಿಕ ಬಲ ನಿಮಗೆ ಇದೆಯೋ ನಮಗೆ ಇದೆಯೋ ಗೊತ್ತಾಗುತ್ತದೆ.

(ಗೊಂದಲ)

ಪ್ರೊ|| ಎ. ಲಕ್ಷ್ಮೀಸಾಗರ್.—ನೀವೇನೂ ನಮಗೆ ಹೇಳಬೇಕಾಗಿಲ್ಲ. ಔರಂಗಾಬಾದಿನಲ್ಲಿ ಏನಾಯಿತು ? ಅಲ್ಲಿ ಏನು ಮಾಡಿದ್ದೀರಿ ಎಂಬುದನ್ನು ನೀವು ಮೊದಲು ಕೊಳ್ಳಿ. ಸುಮ್ಮನೆ ನೀವು ಹೇಳುವುದನ್ನು ಕೇಳಿಕೊಂಡು ಹೋಗುವುದಕ್ಕಲ್ಲ ನಾವು ಇಲ್ಲಿ ಇರುವುದು.

(ಗೊಂದಲ)

ಅಧ್ಯಕ್ಷರು.—ನಿಮ್ಮ ಹೇಳಿಕೆ ಮುಗಿಯಿತೇ ? ಮುಗಿಯದಿದ್ದರೆ ತಾವು ಮುಗಿಸಿ ನಂತರ ಬೇರೆಯವರಿಗೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನೂ ಇಲ್ಲ. ರಿಪೋರ್ಟ್ ಬರುವುದರಲ್ಲಿ ಒಂದೆರಡು ದಿವಸ ತಡವಾಗಿರಬಹುದು ಅಷ್ಟೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಔರಂಗಾಬಾದ್‌ನಲ್ಲಿ ಏನು ನಡೆಯಿತು ?

(ಗೊಂದಲ)

ಪ್ರೊ॥ ಎ. ಲಕ್ಷ್ಮೀಸಾಗರ್.—ಪಾಟ್ನಾದಲ್ಲಿ ಏನು ಆಯಿತು ಪಂಜಾಬಿನಲ್ಲಿ ಏನಾಯಿತು ಎಂಬುದನ್ನು ನೋಡಿ......

(೪–೫ ಜನ ಕಾಂಗ್ರೆಸ್ ಪಕ್ಷದ ಸದಸ್ಯರು ಒಟ್ಟಿಗೆ ಎದ್ದುನಿಂತು ಮಾತನಾಡತೊಡಗಿದರು.)

ಅಧ್ಯಕ್ಷರು.—ಧರ್ಮಸಿಂಗ್‌ರವರೇ, ತಾವು ಕುಳಿತುಕೊಳ್ಳಿ. ಅವರು ಹೇಳುವುದನ್ನು ಹೇಳಲಿ, ನಂತರ ಕ್ಲಾರಿಫಿಕೇಷನ್ ಕೇಳುವುದಕ್ಕೆ ತಮಗೆ ಅವಕಾಶ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು —ಅವರು ಪ್ರಚೋದನೆ ಮಾಡಿದರೂ ತಾವು ಅದಕ್ಕೆ ಒಳಗಾಗಬೇಡಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಕಾಲು ಕೆರೆದು ಜಗಳ ಮಾಡಲಿಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಹೆಗಡೆಯವರು ಹೋದ ಮೇಲೆ ನೀವೂ ಕೂಡ ಅದೇ ಕ್ಯೂನಲ್ಲಿ ಇದ್ದೀರಿ.

(ಗೊಂದಲ)

ಪ್ರೊ॥ ಎ. ಲಕ್ಷ್ಮೀಸಾಗರ್.—ಮಧ್ಯ ರಾತ್ರಿಯಲ್ಲಿ ನೀವು ಲೆಜಿಸ್ಲೇಚರ್ ಪಾರ್ಟಿ ಮೀಟಿಂಗ್ ಮಾಡುತ್ತೀರಿ. ಜನ ಬಂದಿರಲೀ ಬಂದಿಲ್ಲದೇ ಇರಲಿ ಮಧ್ಯ ರಾತ್ರಿಯಲ್ಲಿ ಮೀಟಿಂಗ್ ಮಾಡುತ್ತೀರಿ. ನಮ್ಮಲ್ಲಿ ಆ ರೀತಿ ಮಾಡುವುದಿಲ್ಲ, ನಾವು ಹಗಲು ಹೊತ್ತಿನಲ್ಲಿ ರಾಜಾರೋಷವಾಗಿ ಮಾಡುತ್ತೇವೆ, ನಿಮಗೆ ಆ ರೀತಿಯ ಧೈರ್ಯವಿದೆಯೇ ? ಬಿಹಾರ, ಯು. ಪಿ. ಯಲ್ಲಿ ಏನಾಯಿತು ಎಂದು ನೋಡಿದರೆ ಗೊತ್ತಾಗುತ್ತದೆ.

(ಗೊಂದಲ)

ಪ್ರೊ॥ ಎ. ಲಕ್ಷ್ಮೀಸಾಗರ್.—ಬಿಹಾರ, ಯು. ಪಿ. ಯಲ್ಲಿ ಮಧ್ಯ ರಾತ್ರಿಯಲ್ಲಿ ಮುಖ್ಯಮಂತ್ರಿ ಚುನಾವಣೆ........

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಮ್ಮ ಪಕ್ಷದಲ್ಲಿ ರಾತ್ರಿ ೧೨ ಗಂಟೆಗೆ ಮೀಟಿಂಗ್ ಮಾಡುತ್ತೇವೆ....

(ಗೊಂದಲ)

ಪ್ರೊ॥ ಎ. ಲಕ್ಷ್ಮೀಸಾಗರ್.—ನಮ್ಮ ಕೆಲಸವೆಲ್ಲ ಹಗಲು ಹೊತ್ತಿನಲ್ಲಿ ಆಗುವುದು ರಾತ್ರಿ ಹೊತ್ತು ಆಗುವುದಿಲ್ಲ. ನಿಮ್ಮ ಕೆಲಸಗಳೆಲ್ಲಾ ನಿಶಾಚರರು ಮಾಡುವ ಕೆಲಸ. ರಾಜಕೀಯದಲ್ಲಿರತಕ್ಕಂತಹ ನಾಯಕರುಗಳು ಮಾಡುವಂತಹ ಕೆಲಸ ಅಲ್ಲ ಅದು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಮ್ಮದಂತೂ ನಿಶಾಚರರ ಕೆಲಸ, ರಾತ್ರಿ ೧೨ ಗಂಟೆಗೆ ಮೀಟಿಂಗ್ ಮಾಡುತ್ತೇವೆ. ನೀವು ಬೆಳಗಿನ ತನಕ ನಿದ್ದೆ ಮಾಡುವ ಹಾಗಿಲ್ಲ, ಆ ಪರಿಸ್ಥಿಗೆ ಬಂದು ನಿಂತಿದೆ. ಅಂಥ ಪರಿಸ್ಥಿತಿ ನಿಮಗೆ ಬಂದು ಕೂತಿದೆಯಲ್ಲಾ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ನಿಮ್ಮ ಹಾಗೆ ನಿರ್ಣಯಗಳನ್ನು ಮಧ್ಯರಾತ್ರಿಯಲ್ಲಿ ನಾವು ತೆಗೆದುಕೊಳ್ಳುವುದಿಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಎಸ್. ಜೆ. ಡಿ. ವಿಷಯದ ಬಗ್ಗೆ ನೀವುಗಳು ಬೆಳಿಗ್ಗೆ ತನಕವೂ ನಿದ್ದೆಯನ್ನೇ ಮಾಡುವುದಿಲ್ಲವಲ್ಲ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಎಸ್. ಜೆ. ಡಿ. ಅಂದರೆ ನಿಮಗೆ ಏಕೆ ನಡುಕ. ನಿಮ್ಮ ಕಾಲಲ್ಲಿ ಶಕ್ತಿಯೇ ಹೊರಟುಹೋಗಿದೆಯಲ್ಲ.

ಶ್ರೀ ಎಸ್. ಬಂಗಾರಪ್ಪ.—ಬೊಮ್ಮಾಯಿಯವರೇ, ನೀವು ಲಕ್ಷ್ಮೀಸಾಗರ್‌ರವರ ಬಗ್ಗೆ ಎಚ್ಚರಿಕೆಯಿಂದ ಇರುವುದು ಒಳ್ಳೆಯದು. ಏಕೆಂದರೆ ರಾಮಕೃಷ್ಣ ಹೆಗಡೆಯವರ ಪರವಾಗಿ ವಾದ ಮಾಡಿ ಮಾಡಿ ಅವರನ್ನು ತೆಗೆದರು. ಆದ್ದರಿಂದ ನೀವು ಎಚ್ಚರಿಕೆಯಿಂದ ಇರುವುದು ಒಳ್ಳೆಯದು.

ಶ್ರೀ ಎ. ಲಕ್ಷ್ಮೀಸಾಗರ್.— ಬಂಗಾರಪ್ಪನವರ ಮಾತನ್ನು ಕೇಳಿಬಿಟ್ಟರೆ ಖಂಡಿತ ಒಂದು ಹನಿ ನೀರು ಕೂಡಾ ಸಿಗುವುದಿಲ್ಲ. ನಾನು ನೋಡಿದ್ದೇನೆ, ನಾನು ವಿರೋಧಪಕ್ಷದಲ್ಲಿದ್ದಾಗ ನೋಡಿದ್ದೇನೆ, ಮಂತ್ರಿಯಾಗಿ ನೋಡಿದ್ದೇನೆ. ಅವರನ್ನು ನಂಬಿಕೊಂಡು ರಾಜಕೀಯ ಮಾಡಿದರೆ ಮುಗಿದು ಹೋಯಿತು, ತಲೆಮೇಲೆ ಚಪ್ಪಡಿ ಕಲ್ಲು ಬೀಳುತ್ತದೆ. ನಾವಾದರೆ ರಾಜಕೀಯ ಮಾಡುತ್ತೇವೆ, ರಾಜಾರೋಷವಾಗಿ ರಾಜಕೀಯ ಮಾಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಒಂದು ತೊಟ್ಟು ನೀರು ಸಿಗುವುದಿಲ್ಲ ಎಂದು ಹೇಳಿದರು, ಇನ್ನೇನು ಸಿಗುತ್ತದೆ ?

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—ಇನ್ನೊಂದು ಮಹತ್ವದ ವಿಚಾರವನ್ನು ಹೇಳಬಯಸುತ್ತಿದ್ದೇನೆ. ಈ. ಸಿ. ಒ. ಡಿ. ಎನ್‌ಕ್ವೈರಿಯಲ್ಲಿ ಈ ಕೊಲೆ ಮಾಡಿದವರ ಸುಳಿವು ಸಿಕ್ಕಿದೆ. ಈ ವಿಚಾರದಲ್ಲಿ ಆ ವ್ಯಕ್ತಿಗಳು ಕಣ್ಮರೆಯಾಗಿದ್ದಾರೆ. ಕೆಲವೇ ದಿನಗಳಲ್ಲಿ ಆರು ಜನರನ್ನು ಕೊಲೆ ಮಾಡಿದಂಥ ಆರೋಪಿಗಳು ಪತ್ತೆಯಾಗತಕ್ಕಂಥ ಒಂದು ಆಸೆಯನ್ನು ನಾನು ಹೊಂದಿದ್ದೇನೆ. Intensive investigation is going on. ಈ ರಿಯಲ್ ಕಲ್‌ಪ್ರಿಟ್ಸ್ ಏನು ಇದ್ದಾರೆ, ಅದನ್ನು ಐಡೆಂಟಿಫೈ ಮಾಡತಕ್ಕಂಥ ಕೆಲಸ ನಡೆದಿದೆ. ಆ ಬಗ್ಗೆ ನಮ್ಮ ಸಿ.ಓ.ಡಿ. ಅವರು ತನಿಖೆಯನ್ನು ಮಾಡುತ್ತಿದ್ದಾರೆ. ಈ ಬಗ್ಗೆ ಹೆಚ್ಚು ವಿಚಾರಗಳನ್ನು ಇಲ್ಲಿ ನಾನು ವ್ಯಕ್ತ ಮಾಡುವುದಿಲ್ಲ. ತಮ್ಮಲ್ಲಿ ಅತ್ಯಂತ ಕಳಕಳಿಯ ಮನವಿಯನ್ನು ಮಾಡಿಕೊಳ್ಳುತ್ತೇನೆ. ಈಗ ನಮ್ಮ ಮುಂದೆ ಇರತಕ್ಕಂಥ ಕೆಲಸ ಎಂದರೆ ಪುನಃ ಸಿಖ್ ಮತ್ತು ಉಳಿದವರ ನಡುವೆ ಮೊದಲಿದ್ದ ಸದ್ಭಾವನೆಯನ್ನು ವಿಶ್ವಾಸವನ್ನು ಮೂಡಿಸುವುದು. ಅದರ ಕಡೆಗೆ ಗಮನವನ್ನು ಕೊಡೋಣ. ಈ ಬಗ್ಗೆ ಅಲ್ಲಿನ ಜನರಲ್ಲಿ ಸದ್ಭಾವನೆಯನ್ನು ಮಾಡತಕ್ಕಂಥದ್ದರಲ್ಲಿ ಬೀದರ್ ಜಿಲ್ಲೆಯ ಎಲ್ಲಾ ಶಾಸಕರನ್ನು ನಾನು ಅಭಿನಂದಿಸುತ್ತೇನೆ. ನಾನು ಹೋದಾಗ ಆಗಲಿ ಹೋಗುವುದಕ್ಕೆ ಮೊದಲೇ ಆಗಲೀ ಪಕ್ಷಭೇದ ಇಲ್ಲದೇ ಎಲ್ಲರೂ ಈ ಬಗ್ಗೆ ಒಟ್ಟಾಗಿ ಸಹಕರಿಸುತ್ತಿದ್ದಾರೆ, ಒಟ್ಟಾಗಿ ಪ್ರಯತ್ನವನ್ನು ಮಾಡುತ್ತಿದ್ದಾರೆ. ಬೀದರ್ ಶಾಸಕರು ಮಾಡಿದ ಒಂದು ಸಲಹೆ ಇದೆ. ಅವರು ಏನು ಹೇಳಿದ್ದಾರೆ ಎಂದರೆ ಶಾಸಕರು ಮಾತ್ರವಲ್ಲ, ಬೀದರ್‌ನಲ್ಲಿರತಕ್ಕಂಥ ಎಲ್ಲಾ ವಿದ್ಯಾಸಂಸ್ಥೆಗಳ ಪ್ರಮುಖರು, ಧರ್ಮಪೀಠಗಳ ಪ್ರಮುಖರು, ನಾವೆಲ್ಲಾ ಜೊತೆಗೆ ಸೇರಿ ಸಿಕ್ ಜನಾಂಗದ ನಾಯಕರ ಜೊತೆ ಮಾತನಾಡತಕ್ಕಂಥ ಒಂದು ವಾತಾವರಣವನ್ನು ನಿರ್ಮಾಣ ಮಾಡಿಕೊಡಿ ಎಂದು ಹೇಳಿದ್ದಾರೆ. ಶಾಂತಿ ಸಮಿತಿ ಮತ್ತು ಬೇರೆ ರೀತಿಯ ಪರಸ್ಪರ ವಿಶ್ವಾಸವನ್ನು ಮೂಡಿಸತಕ್ಕಂಥ ಒಂದು ಪ್ರಯತ್ನವನ್ನು ಮಾಡುತ್ತಿದ್ದೇವೆ. ಇನ್ನೊಂದು ವಿಚಾರ ನಮ್ಮ ಮುಂದೆ ಬಂತು. ಅದೇನೆಂದರೆ, ವಿದ್ಯಾರ್ಥಿಗಳ ಪರೀಕ್ಷೆಯ ವಿಚಾರ. ಅದನ್ನು ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರ್ ಅವರಿಗೆ ಹೇಳಿದ್ದೇನೆ. ಅವರಿಗೆ ಸಾಕಷ್ಟು ಅವಕಾಶವನ್ನು ಕೊಡಬೇಕು, ಅವರಿಗೆ ಪ್ರಾಕ್ಟಿಕಲ್ಸ್ ಮುಗಿಸಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕು, ಪರೀಕ್ಷೆಗಳನ್ನು ಮುಂದಕ್ಕೆ ಹಾಕಬೇಕು ಎಂದು ಹೇಳಿದ್ದೇನೆ. ಇನ್ನು ಮುಖ್ಯವಾದ ಕೆಲಸ ಏನೆಂದರೆ, ವಿದ್ಯಾರ್ಥಿಗಳು ಮರಳಿ ಬೀದರ್‌ಗೆ ಬರಬೇಕು. ಅವರು ವಾಪಸ್ ಬಂದು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸತಕ್ಕಂಥ ಒಂದು ವ್ಯವಸ್ಥೆ ಆಗಬೇಕು. ಆ ಬಗ್ಗೆ ನಾನು ಸಿಖ್ ನಾಯಕರ ಜೊತೆಯಲ್ಲಿ ಮಾತನಾಡುತ್ತಿದ್ದೇನೆ. ಬೀದರ್ ಸಿಖ್ ನಾಯಕರ ಜೊತೆ ಮಾತನಾಡುತ್ತಿದ್ದೇನೆ. ದೆಹಲಿಯಲ್ಲಿ ಅನೇಕ ಮುಖಂಡರ ಜೊತೆ ಮಾತನಾಡಿದ್ದೇನೆ. ಅವರು ವಾಪಸ್ ಬರಬೇಕು, ಅವರು ಬಂದಮೇಲೆ ಆ ಕಾಲೇಜಿನ ಆವರಣದಲ್ಲಿ ಒಂದು ಹಾಸ್ಟೆಲ್‌ನ್ನು ಕಟ್ಟುತಕ್ಕಂಥದ್ದರ

ಬಗ್ಗೆ ಕೆಲವು ಬೇಡಿಕೆಗಳನ್ನು ಇಟ್ಟಿದ್ದಾರೆ, ನಾನು ಅದನ್ನು ಒಪ್ಪಿದ್ದೇನೆ. ಈಗ ಬಹಳ ಜನ ವಿದ್ಯಾರ್ಥಿಗಳು ಹಾಸ್ಟೆಲ್ ಬಿಟ್ಟು ಹೊರಗಡೆ ಊರಿಗೆ ಹೋಗಿದ್ದಾರೆ. ಬೇರೆ ಮನೆಯಲ್ಲಿ ಅವರು ಇದ್ದಾಗ ಇಂತಹ ಘಟನೆಗಳು ನಡೆಯುವುದಕ್ಕೆ ಅವಕಾಶ ಇದೆ. ಹಾಸ್ಟೆಲ್ ಕಟ್ಟತಕ್ಕ ವಿಚಾರದಲ್ಲಿ ಅವರ ಡಿಮ್ಯಾಂಡ್ಸ್ ಏನು ಇದೆ, ಅದನ್ನು ನಾನು ಒಪ್ಪಿಕೊಂಡಿದ್ದೇನೆ. ಅಲ್ಲಿನ ವಿದ್ಯಾರ್ಥಿಗಳು ಅವರ ಇನ್ಸ್ಟ್ರುಮೆಂಟ್ಸ್ ಇರಬಹುದು ಅಥವಾ ಪುಸ್ತಕಗಳು ಇರಬಹುದು, ಏನೇನು ಕಳೆದುಕೊಂಡಿದ್ದಾರೆ ಅದನ್ನೆಲ್ಲಾ ಸರ್ಕಾರ ಭರಿಸುತ್ತದೆ. ಈ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ನಾನು ಒಂದು ವಿಷಯ ಹೇಳಬೇಕೆಂದರೆ, ಆ ದಿನ ನಡೆದ ಘಟನೆ ಬಗ್ಗೆ ತಪ್ಪಿತಸ್ಥರು ಯಾರು ಇದ್ದಾರೆ ಅವರನ್ನು ವಿಚಾರಣೆಗೆ ಗುರಿ ಮಾಡತಕ್ಕದ್ದು. ವಿಚಾರಣೆ ಆಗುವವರೆಗೆ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳತಕ್ಕದ್ದು ಮತ್ತು ನ್ಯಾಯಾಂಗ ವಿಚಾರಣೆ ಶೀಘ್ರತರವಾಗಿ ಆಗಬೇಕು, ಎಂಬುದು ಮುಖ್ಯ. ವಿಚಾರಣೆ ನಿರ್ದಿಷ್ಟ ಸಮಯದಲ್ಲಿ ಆಗಬೇಕು. ವಿಚಾರಣೆಗೆ ಟರ್ಮ್ಸ್ ಆಫ್ ರೆಫರೆನ್ಸ್ ಒಳಗೊಂಡಿರಬೇಕು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗೂ ಮಾನ್ಯ ಮೊಯಿಲಿಯವರು ಏನು ಹೇಳಿದ್ದಾರೆ detailed terms of reference ಇರಬೇಕು ಎಂದು, ಅದನ್ನು ನಾನು ಒಪ್ಪುತ್ತೇನೆ. ಅದನ್ನು ಮಾಡತಕ್ಕದ್ದು ಬಹಳ ಅವಶ್ಯಕ ಎಂದು ನಾನು ಈ ಮನೆಗೆ ಭರವಸೆ ಕೊಡುತ್ತೇನೆ. Terms of reference ಎಷ್ಟು wide ಆಗಿರಬೇಕು, ಯಾವ ಯಾವ ವಿಚಾರಗಳಿಗೆ ಹೆಚ್ಚು ಗಮನ ಕೊಡಬೇಕೆಂಬ ಬಗ್ಗೆಯೂ ಆಲೋಚನೆ ಮಾಡುತ್ತೇನೆ. ನಾನು ಮುಖ್ಯ ನ್ಯಾಯಾಧೀಶರನ್ನು ಆದಷ್ಟು ಬೇಗ ಒಬ್ಬ ನ್ಯಾಯಾಧೀಶರ ಹೆಸರನ್ನು ಕೊಡಬೇಕೆಂದು ಕೇಳಿಕೊಂಡಿದ್ದೇನೆ. ಇನ್ನು ಕೇಂದ್ರದ ಟೀಮ್‌ಗಳು ಬೀದರ್‌ಗೆ ಬಂದಿದ್ದವು. ಕೇಂದ್ರದ ಟೀಮ್‌ಗಳು ಬರಬೇಕೇ ಅಥವಾ ಬರಬೇಡವೇ ಎಂಬ ವಿಚಾರ ಮುಖ್ಯವಲ್ಲ. ಕೇಂದ್ರದ ಟೀಮ್‌ಗಳು ಬರುವುದು ಅವಶ್ಯಕವೇ ಅಥವಾ ಇಲ್ಲವೇ ಎಂಬುದನ್ನೂ ನಾನು ಹೇಳುವುದಿಲ್ಲ. ಕೇಂದ್ರದ ಟೀಮ್ ಬಂದರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅವರು ಬಂದರೆ ಅವರ ವಿಚಾರಗಳನ್ನು ತಿಳಿದುಕೊಳ್ಳಲಿಕ್ಕೆ ನಮಗೆ ಅವಕಾಶವಾಗುತ್ತದೆ. ಅವರು ನಮಗೆ ಸಲಹೆ ಸೂಚನೆಗಳನ್ನು ಕೊಡುತ್ತಾರೆ, ನಾವು ಸಹ ಅವರಿಗೆ ಸಲಹೆ ಹಾಗೂ ಸೂಚನೆಗಳನ್ನು ಕೊಡುವುದಕ್ಕೆ ಅವಕಾಶವಿರುತ್ತದೆ. ಈ ಬಗ್ಗೆ ನನ್ನ ಆಕ್ಷೇಪ ಇಲ್ಲ. ಕೆಲವರು ಹೇಳುತ್ತಾರೆ, ಕೇಂದ್ರದ ಟೀಮ್ ಬೇರೆ ಕಡೆ ಹೋಗಿಲ್ಲ ಇಲ್ಲಿಗೆ ಬಂದಿದ್ದಾರೆ ಎಂದು, ಆ ವಿಚಾರ ಬೇರೆ. ಆದರೆ ಅವರು ಬಂದರೆ ನಾನು ಸ್ವಾಗತ ಮಾಡುತ್ತೇನೆ. "that has nothing to do with me". ಅವರು ನಮ್ಮ ರಾಜ್ಯಕ್ಕೆ ಬಂದಿದ್ದಾಗ ಅವರನ್ನು ಸ್ವಾಗತ ಮಾಡಿ ಅವರಿಗೆ ಬೇಕಾದ ಸೌಲಭ್ಯವನ್ನು ಒದಗಿಸಿಕೊಟ್ಟಿದ್ದೇವೆ. ಅವರು ಬಂದು ಹೋದನಂತರ ಪತ್ರಿಕೆಗಳಲ್ಲಿ ಏನು ಹೇಳಿಕೆ ಬಂದಿತ್ತು ಅಂದರೆ "We are completely satisfied with all arrangements" ಎಂದು ಕೇಂದ್ರದ ಟೀಮ್ ಬರುವ ಬಗ್ಗೆ ಎರಡು ಅಭಿಪ್ರಾಯವಿದೆ. ಬೇರೆ ಕಡೆ ಘಟನೆ ನಡೆದಿರುವ ಕಡೆ ಕೇಂದ್ರದ ಟೀಮ್ ಹೋಗಿಲ್ಲ, ಇಲ್ಲಿ ಬಂದಿದ್ದಾರೆ ಎನ್ನುವ ಅಭಿಪ್ರಾಯ ಕೂಡ ಇದೆ. ಆದರೆ ಆ ವಿಷಯ ಬೇಡ, ಇಲ್ಲಿಗೆ ಬಂದಿದ್ದಾರೆ. ಅವರನ್ನು ಸ್ವಾಗತ ಮಾಡಿದ್ದೇವೆ. ಸಿ.ಆರ್.ಪಿ. ಸಹಾಯ ಬೇಕಾದರೆ ಕೊಡುತ್ತೇನೆ ಎಂದು ಹೇಳಿದ್ದಾರೆ. ಅವಶ್ಯ ಬಿದ್ದರೆ ತೆಗೆದುಕೊಳ್ಳುತ್ತೇನೆ. ಕಾರಣ ಇಷ್ಟೇ, ನಮ್ಮ ರಾಜ್ಯದ ಪೋಲೀಸರು ಏನು ಇದ್ದಾರೆ, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಏನಿದ್ದಾರೆ ಅವರಿಗೆ ಪರಿಸ್ಥಿತಿಯನ್ನು ಹತೋಟಿಗೆ ಇಟ್ಟುಕೊಳ್ಳತಕ್ಕ ಶಕ್ತಿ ಇದೆ. ಸಿ.ಆರ್.ಪಿ. ಫೋರ್ಸ್ ಅನ್ನು ಕರೆಸುವುದಿಲ್ಲ. ಈ ರೀತಿ ಕರೆಸಿದರೆ that will be admitting inefficiency of the police force of this State. I am not ready to accept it. ಸಿ.ಆರ್.ಪಿ. ಫೋರ್ಸ್ ಬಂದರೆ ಅವರ ಸೇವೆಯನ್ನು ನಮ್ಮ ಸ್ಥಳೀಯ ಪೋಲೀಸರ ಮುಖಾಂತರವೇ ಬಳಸಿಕೊಳ್ಳಬೇಕಾಗುತ್ತದೆ. ಆಗ our police will feel sledged. ಆದುದರಿಂದ ಕರೆಸುವುದಿಲ್ಲ, ಅವಶ್ಯ ಇದ್ದರೆ ಕರೆಸುತ್ತೇನೆ. ನಮ್ಮ ಪೋಲೀಸರು day to day law & order maintain ಮಾಡುತ್ತಾರೆ. ನಮ್ಮ ರಾಜ್ಯದ ಪೋಲೀಸ್ ವ್ಯವಸ್ಥೆ ರಾಷ್ಟ್ರದಲ್ಲಿಯೇ ಉತ್ತಮವಾಗಿದೆ. ತಪ್ಪು ಇಲ್ಲವೆಂದು ಹೇಳುವುದಿಲ್ಲ. ತಪ್ಪು ಮಾಡುತ್ತಾರೆ. ತಪ್ಪು ಇದ್ದದ್ದನ್ನು ಸರಿಪಡಿಸುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.—ಅದಕ್ಕೇ ಡಿ. ಸಿ. ಪಿ. ನಾರಾಯಣ್ ಹೋಗಿದ್ದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲ ಅಧಿಕಾರಿಗಳನ್ನು ಈ ರೀತಿ ತೆಗೆದುಹಾಕಲಿಕ್ಕೆ ಆಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನೀವು ದಕ್ಷತೆ ಬಗ್ಗೆ ಸರ್ಟಿಫಿಕೇಟ್ ಕೊಡಿ, ಆದರೆ ನಿಮ್ಮ ಆಡಳಿತದಲ್ಲಿ ನಡೆಯುತಕ್ಕ ಆಡಳಿತದ ವೈಖರಿ ಬಗ್ಗೆ......

ಶ್ರೀ ಎಸ್. ಆರ್. ಬೊಮ್ಮಾಯಿ.—ಪೋಲೀಸ್ ಡಿಮ್ಯಾಂಡ್ ಬಂದಾಗ ಅದರ ಬಗ್ಗೆ ಚರ್ಚೆ ಮಾಡೋಣ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ. ರಾಮಪ್ಪ.—ಮಾನ್ಯ ಜಯಕುಮಾರ್ ಅವರು ನಮ್ಮನ್ನು ಇಲ್ಲಿ ಕೂತಿರಬೇಡಿ ಎಂದು ಹೆದರಿಸುತ್ತಿದ್ದಾರೆ.

ಅಧ್ಯಕ್ಷರು.—ನಿಮ್ಮನ್ನು ಆ ರೀತಿಯೆಲ್ಲಾ ಹೆದರಿಸಬೇಡಿ ಎಂದು ನಾನು ಅವರಿಗೆ ಹೇಳಿದ್ದೇನೆ. ತಾವು ಕುಳಿತುಕೊಳ್ಳಿ.

ಶ್ರೀ ಎಂ. ರಾಮಪ್ಪ.—ಮಾನ್ಯ ಜಯಕುಮಾರ್ ಅವರನ್ನು ಮತ್ತು ಮಾನ್ಯ ಮಲ್ಲಪ್ಪನವರನ್ನು ಬೇಕಾದರೆ ಮಂತ್ರಿಗಳನ್ನಾಗಿ ಮಾಡಲಿ.

ಶ್ರೀ ಆರ್. ಎನ್. ನಾಯಕ್.—ಇವರು ಹೇಳುತ್ತಾರೆಂದು ಅವರುಗಳನ್ನು ಮಂತ್ರಿಗಳನ್ನಾಗಿ ಮಾಡಿಬಿಡಬೇಡಿ. ಅದು ಮಂತ್ರಿ ಪದವಿಗೆ ಅವಮಾನ ಮಾಡಿದಂತೆ ಆಗುತ್ತದೆ.

ಅಧ್ಯಕ್ಷರು.—ಈಗ ತಾವು ಕುಳಿತುಕೊಳ್ಳಿ.

ಶ್ರೀ ಆರ್. ಎನ್. ನಾಯಕ್.—ನಾವು ಇಲ್ಲಿ ಮುಖ್ಯಮಂತ್ರಿಗಳ ಉತ್ತರವನ್ನು ಕೇಳಲು ಕುಳಿತ್ತಿದ್ದೇವೆಯೇ ಹೊರತು ಅವರುಗಳ ಮಾತನ್ನು ಕೇಳಲು ಕುಳಿತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ನಮ್ಮ ಅಧಿಕಾರಿಗಳು ಜನತಾ ಸರ್ಕಾರ ಬಂದಮೇಲೆ ಕೆಲಸಕ್ಕೆ ಸೇರಿಲ್ಲ. ಅವರು ಮೊದಲಿನಿಂದಲೂ ಇದ್ದಾರೆ. ನಮ್ಮ ರಾಜ್ಯದ ಅಧಿಕಾರಿಗಳಲ್ಲಿ ಉತ್ತಮವಾದ ಟ್ರೆಡಿಷನ್ ಇದೆ. ನಮ್ಮಲ್ಲಿ ಉತ್ತಮರಾದಂಥ ಅಧಿಕಾರಿಗಳಿದ್ದಾರೆ. ಯಾರಾದರು ತಪ್ಪು ಮಾಡಿದ್ದರೆ ಅವರಿಗೆ ಶಿಕ್ಷೆ ವಿಧಿಸೋಣ. ಈ ಸಂದರ್ಭದಲ್ಲಿ ನಾನು ಆಂಧ್ರದ ಮುಖ್ಯಮಂತ್ರಿಗಳಿಗೆ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ, ಬೀದರ್‌ನಲ್ಲಿ ಬಿಸಿ ವಾತಾವರಣವಿರುವುದರಿಂದ ಅಲ್ಲಿ ನಡೆಯುವಂತಹ ಭೋಗ್ ಆಚರಣೆಗೆ ತಮ್ಮ ತಮ್ಮ ರಾಜ್ಯಗಳಿಂದ ಬರುವ ಜನರನ್ನು ಸ್ಕ್ರೀನ್ ಮಾಡಿ ನಮ್ಮ ರಾಜ್ಯದ ಬಾರ್ಡರ್‌ಗೆ ಕಳುಹಿಸಿಕೊಡಿ ಎಂದು ಅವರಲ್ಲಿ ಕೇಳಿಕೊಂಡೆ. ಇದಕ್ಕೆ ಈ ಎರಡು ರಾಜ್ಯಗಳ ಮುಖ್ಯಮಂತ್ರಿಗಳು ಸಂಪೂರ್ಣವಾದ ಸಹಕಾರವನ್ನು ಕೊಟ್ಟರು. ಜೊತೆಗೆ ಕೇಂದ್ರದ ಮಂತ್ರಿಗಳು ಸಹ ಇದಕ್ಕೆ ಒಪ್ಪಿಕೊಂಡರು. ಅದಕ್ಕಾಗಿ ನಾನು ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಕೊನೆಯದಾಗಿ ನಾನು ಇಷ್ಟು ಮಾತ್ರ ಹೇಳುತ್ತೇನೆ. ಈ ಘಟನೆಗೆ ಕಾರಣರಾದಂಥ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮವನ್ನು ವರದಿ ಬಂದಕೂಡಲೇ ಕೈಕೊಳ್ಳುತ್ತೇನೆ, ಜಾಗ್ರತೆ ವರದಿ ಕೊಡಿ ಎಂದು ಹೇಳುತ್ತೇನೆ. ಈ ಘಟನೆಯ ಬಗ್ಗೆ ನ್ಯಾಯಾಂಗ ವಿಚಾರಣೆಗೆ ಆಜ್ಞೆ ಮಾಡಿದ್ದೇನೆ. ನ್ಯಾಯಾಂಗ ವಿಚಾರಣೆ ನಡೆದು ಅದರ ವರದಿ ಬಂದ ಕೂಡಲೇ, ತಪ್ಪು ಮಾಡಿದವರು ಯಾರೇ ಇರಲಿ, ಅವರು ಎಷ್ಟೇ ದೊಡ್ಡವರಾಗಿರಲೀ ಅಥವಾ ಸಣ್ಣವರಾಗಿರಲೀ, ಅಧಿಕಾರಿಗಳಾಗಿರಲಿ, ಅಧಿಕಾರೇತರರಾಗಿರಲಿ, ಎಲ್ಲರ ಮೇಲೂ ಕ್ರಮ ಕೈಕೊಳ್ಳುತ್ತೇವೆ. ಅದಕ್ಕಿಂತ ಮೊದಲು ಅಲ್ಲಿ ಶಾಂತಿ ಪರಿಪಾಲನೆಗೆ ಅಡ್ಡಿ ಬಂದವರ ಮೇಲೂ ಸಹ ನಾವು ಉಗ್ರ ಕ್ರಮ ಕೈಕೊಳ್ಳುತ್ತೇವೆ.. ಅಧಿಕಾರಿಗಳ ಮೇಲೆ ಟೀಕೆಗಳೂ ಬಂದಿವೆ ಮತ್ತು ಒಳ್ಳೆಯ ಅಭಿಪ್ರಾಯಗಳೂ ಸಹ ಬಂದಿವೆ. ಈ ಎರಡೂ ಅಭಿಪ್ರಾಯಗಳನ್ನು ನಾನು ತಲೆಗೆ ಹಚ್ಚಿಕೊಳ್ಳುವುದಿಲ್ಲ. ತನಿಖೆ ನಡೆದು ವರದಿ ಬರಲಿ. ಅಧಿಕಾರಿಗಳು ಏನಾದರು ತಪ್ಪಿತಸ್ಥರಿದ್ದರೆ ಅವರನ್ನು ಸಸ್ಪೆಂಡ್ ಮಾಡಲು ನಾನು ಹಿಂದೆ ಮುಂದೆ ನೋಡುವುದಿಲ್ಲ. ವರದಿ ಬರುವವರೆಗೆ ನಾವು ಕಾಯುತ್ತಿದ್ದೇವೆ. ಮುಖ್ಯವಾಗಿ ಅಲ್ಲಿ ಶಾಂತಿ ನೆಲೆಸಬೇಕು. ಇದಕ್ಕೆ ತಮ್ಮ ಸಹಕಾರವನ್ನು ಕೇಳುತ್ತಿದ್ದೇನೆ.

† ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೇ, ಈ ಅಸೆಂಬ್ಲಿಯಲ್ಲಿ ನಾವು ಮಾತನಾಡಿದ್ದಕ್ಕೆ ಒಂದು ಪರಂಪರೆ ಇದೆ. ಅದೇನೆಂದರೆ, ನಾವು ಇಲ್ಲಿ ಮಾತನಾಡಿದ ವಿಷಯಗಳಿಗೆ ಸಂಬಂಧಪಟ್ಟಂತೆ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಉತ್ತರಗಳು ನಮಗೆ ಒಂದು ತಿಂಗಳಾದ ಮೇಲೆ ಬರುವುದು ಇದೆ. ಕೆಲವುಸಲ ವರ್ಷಗಟ್ಟಲೆ ಯಾದರೂ ಉತ್ತರ ಬರುವುದಿಲ್ಲ. ಇಲ್ಲಿ ಮಾನ್ಯ ಲಕ್ಷ್ಮೀಸಾಗರ್ ಅವರು ಯಾವಾಗಲೂ ನಮ್ಮ ಪ್ರಶ್ನೆ ಗಳಿಗೆ ಪರಿಶೀಲಿಸಲಾಗುವುದು, ಪರಿಶೀಲನೆ ಮಾಡುತ್ತಿದ್ದೇವೆ ಎಂದು ಉತ್ತರ ಕೊಡುತ್ತಾರೆ. ಇದಕ್ಕೆ ಬದಲು ಇಂತಹ ವಿಚಾರಗಳು ಬಂದಾಗ, ಕ್ರಮ ಕೈಕೊಳ್ಳುವ ಬಗ್ಗೆ ಒಂದು ಸಮಯವನ್ನು ಗೊತ್ತು ಮಾಡುವುದು ಒಳ್ಳೆಯದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಬೇಗ ವರದಿ ಕೊಡಬೇಕೆಂದು ನಾನು ಈಗಲೇ ಅಧಿಕಾರಿ ಗಳಿಗೆ ಹೇಳುತ್ತೇನೆ. ಮುಖ್ಯವಾಗಿ ಬೀದರ್‌ನಲ್ಲಿ ಶಾಂತಿ ನೆಲೆಸಲು ತಮ್ಮೆಲ್ಲರ ಸಹಕಾರ ಬಹಳ ಅವಶ್ಯಕ. ನಮ್ಮ ಕರ್ನಾಟಕ ರಾಜ್ಯಕ್ಕೆ ಬಂದ ಈ ಕಳಂಕ ಹೋಗಬೇಕು. ಕಪ್ಪು ಚುಕ್ಕೆ ಬಂದಿದೆ. ಇದನ್ನು ಅಳಿಸಿಹಾಕಲು ನಾವೆಲ್ಲರೂ ಸೇರಿ ಪ್ರಯತ್ನ ಮಾಡೋಣ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತಮ್ಮ ಹೇಳಿಕೆಯ ಮೊದಲನೆಯ ವಾಕ್ಯದಲ್ಲಿ ''ದಿವಂಗತ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ ಕೊಲೆ ಆದಾಗಲೂ ಸಹ ಬೀದರ್ ಅಹಿತಕರ ಘಟನೆಗಳಿಂದ ಮುಕ್ತವಾಗಿತ್ತು'' ಎಂದು ಹೇಳಿದ್ದೀರಿ. ಆದರೆ ಆ ಸಂದರ್ಭದಲ್ಲಿ ಕೆಲವರು ಸಿಹಿ ಹಂಚಿಕೆ ಮಾಡಿದರು ಮತ್ತು ಪಟಾಕಿ ಹಚ್ಚಿದರು. ಆದರೂ ನಮ್ಮ ಜನರು ಶಾಂತಿಪ್ರಿಯ ಜನರಾದ ಕಾರಣ ಯಾವುದೇ ಅಹಿತಕರ ಘಟನೆಗಳು ಆ ಸಂದರ್ಭದಲ್ಲಿ ನಡೆಯಲಿಲ್ಲ. ಇದೇ ಕಾರಣದಿಂದ ನಾನು ನನ್ನ ಭಾಷಣದಲ್ಲಿ ನಮ್ಮ ಜನರು ಶಾಂತಿಪ್ರಿಯ ಜನರು ಎಂದು ಹೇಳಿದ್ದೆ. ಆರು ಜನ ವಿದ್ಯಾರ್ಥಿಗಳನ್ನು ಹೊಡೆದು ಹಾಕಿದವರನ್ನು ಇನ್ನೂ ಉಳಿಸಬೇಕು, ಜೀವದಾನ ಮಾಡಬೇಕು ಎಂದು ಓಡಾಡತಕ್ಕ ಜನರಿಗೆ ನೈತಿಕ ಬಲ ಇಲ್ಲ ಎನ್ನುವುದನ್ನು ಯಾರು ಹೇಳಬೇಕು. ಅಲ್ಲಿ ನಾನು ಖುದ್ದು ಹೋದಾಗ ಹೆಂಗಸರು ತಲೆ ಚಚ್ಚಿಕೊಂಡು ಬಡಿದುಕೊಂಡು, ಹಿಂಸೆ ಪಡುತ್ತಿರುವುದನ್ನು ನೋಡಿದೆ. ಆಗ ನಿಮ್ಮ ಅಧಿಕಾರಿ ಎಲ್ಲಿ ಹೋಗಿದ್ದ. ಅವನನ್ನು ಅಲ್ಲಿಂದ ಟ್ರಾನ್ಸ್‌ಫರ್ ಮಾಡಿದರೆ ಕೆಲಸ ಮುಗಿದು ಹೋಯಿತೇ? ಅಷ್ಟರವರೆಗೆ ಅವನು ಬಾಯಲ್ಲಿ ಬೆಟ್ಟು ಇಟ್ಟುಕೊಂಡು ಚೀಪುತ್ತಾ ಕುಳಿತುಕೊಂಡಿದ್ದನೇ, ಏನು ಮಾಡುತ್ತಿದ್ದ. ಹೆಂಗಸರು, ಮಕ್ಕಳಿಗೆ ತೊಂದರೆಯಾದ ತಕ್ಷಣ ಹೋಗಿ ಆ ತೊಂದರೆಯನ್ನು ತಪ್ಪಿಸುವುದಕ್ಕೆ ಆಗುತ್ತಾ ಇರಲಿಲ್ಲವೇ? ಇಷ್ಟೊಂದು ಗಲಭೆ ಆಗುವವರೆಗೆ ತಮಾಷೆ ನೋಡಿಕೊಂಡು ನಿಂತುಕೊಳ್ಳಬೇಕಾಗಿತ್ತೇ. ಇದು ನಿಮ್ಮ ಅಡ್ಮಿನಿಸ್ಟ್ರೇಷನ್ ಮಟ್ಟ ಎಷ್ಟರಮಟ್ಟಿಗೆ ಇದೆ ಎನ್ನುವುದನ್ನು ತೋರಿಸುತ್ತದೆ. ಈ ಗಲಭೆ ಬಗ್ಗೆ ಜುಡಿಶಿಯಲ್ ಎನ್‌ಕ್ವೈರಿ ಮಾಡಿಸುತ್ತೇವೆ ಎಂದು ಹೇಳಿದ್ದೀರಿ, ಇದಕ್ಕೆ ನೋಟಿಫಿಕೇಷನ್ ಇಷ್ಯೂ ಮಾಡಿದ್ದೀರಾ? ಟರ್ಮ್ಸ್ ಆಫ್ ರೆಫರೆನ್ಸ್ ಕೊಟ್ಟಿದ್ದೀರ? ಜುಡಿಶಿಯಲ್ ಎನ್‌ಕ್ವೈರಿ ಮಾಡಿಸುತ್ತೇವೆ, ಮಾಡಿಸುತ್ತೇವೆ ಎಂದು ಹೇಳಿಕೊಂಡಿದ್ದೀರಿ. ಆದರೆ ಏನೂ ಆಗಿಲ್ಲ. ಇನ್ನು ಪರಿಹಾರ ಕೊಡತಕ್ಕ ವಿಚಾರ. ಪರಿಹಾರ ಕೊಡುತ್ತೇವೆ ಎಂದು ಹೇಳಿದ್ದೀರಿ. ಒಬ್ಬ ಹುಡುಗನ ಬೆಲೆ ಎಷ್ಟು ೫೦ ರೂಪಾಯಿಯೋ, ೫೦೦ ರೂಪಾಯಿಯೋ, ೫೦೦೦ ರೂಪಾಯಿಯೋ, ೨೦ ಸಾವಿರ ರೂಪಾಯಿಯೋ, ೫೦ ಸಾವಿರ ರೂಪಾಯಿಯೋ. ಒಂದು ಮಗುವಿನ ಜೀವದ ಬೆಲೆ ಎಷ್ಟು ಸಾವಿರ ರೂಪಾಯಿಗಳು?

ಶ್ರೀ ಬಿ. ಎ. ಜೀವಿಜಯ.—ಪಂಜಾಬಿನಲ್ಲಿ ಎಷ್ಟು ಬೆಲೆ ಕೊಟ್ಟಿದ್ದೀರಾ?

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀವು ನಮ್ಮನ್ನು ಕೇಳಬೇಕಾದ ಅವಶ್ಯಕತೆ ಇಲ್ಲ. ನಾನು ಮುಖ್ಯ ಮಂತ್ರಿಗಳನ್ನು ಕೇಳುತ್ತಾ ಇದ್ದೇನೆ. ನಿಮಗೆ ಏಕೆ ಹೊಟ್ಟೆನೋವು.

(ಗೊಂದಲ)

ಶ್ರೀ ಕೆ. ಮಲ್ಲಪ್ಪ.—ಪಂಜಾಬಿನಲ್ಲಿ ತಾವು ಎಷ್ಟು ಕೊಟ್ಟಿರಿ ಎಂದು ನಾವು ಕೇಳುತ್ತಾ ಇದ್ದೇವೆ

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಒಂದು ಜೀವದ ಬೆಲೆ ಎಷ್ಟು ಎಂದು ಮಾನ್ಯ ಮುಖ್ಯ ಮಂತ್ರಿಗಳನ್ನು ಇವರು ಕೇಳುತ್ತಾ ಇದ್ದಾರೆ....

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಮುಖ್ಯ ಮಂತ್ರಿಗಳನ್ನು ಕೇಳುತ್ತಾ ಇದ್ದೇನೆ. (ಆಡಳಿತ ಪಕ್ಷದ ಸದಸ್ಯರನ್ನು ಕುರಿತು) ನಿಮ್ಮ ಛಾನ್ಸ್ ಹೊರಟು ಹೋಯಿತು. ನಿಮಗೆ ಛಾನ್ಸ್ ಇಲ್ಲ, ನೀವು ಏಕೆ ಕಷ್ಟ ಪಡುತ್ತೀರಿ. ಆಮೇಲೆ ಕಾಂಪನ್ಸೇಷನ್ ಕೊಡತಕ್ಕ ವಿಚಾರ. ಸೆಂಟ್ರಲ್

ಮಿನಿಸ್ಟರ್ ಬಂದಿದ್ದಕ್ಕೆ ಅವರು ಏಕೆ ಬಂದರು ಎಂದು ಆ ಕಡೆಯವರು ಕೇಳುತ್ತಾ ಇದ್ದರು. ನಾವು ಪ್ರಧಾನ ಮಂತ್ರಿಗಳ ಹತ್ತಿರ ಹೋಗಿದ್ದಾಗ ಒಂದು ಟೀಮನ್ನು ಕಳಿಸಿಕೊಡಿ, ಪ್ರಧಾನ ಮಂತ್ರಿಗಳ ಫಂಡ್‌ನಿಂದ ಏನಾದರೂ ಕೊಡುವುದಿದ್ದರೆ ಅದನ್ನೂ ಬೇಗನೆ ಕಳಿಸಿಕೊಡಿ ಎಂದು ನಾವು ರಿಕ್ವೆಸ್ಟ್ ಮಾಡಿಕೊಂಡಿದ್ದೆವು. ಆದುದರಿಂದ ಅವರು ಟೀಮನ್ನು ಕಳಿಸಿದ್ದಾರೆ, ಅವರು ಮುಖ್ಯ ಮಂತ್ರಿಗಳ ಹತ್ತಿರ ಮಾತನಾಡಿದ್ದಾರೆ, ಹೊಗಳಿಬಿಟ್ಟು ಹೋಗಿದ್ದಾರೆ. ಆದರೆ ಇವರು ಇಲ್ಲಿ ಪಡಕ ಪಡಕ ಅಂತ ಏಕೆ ಕುಣಿಯುತ್ತಾ ಇದ್ದಾರೋ ನನಗಂತೂ ಗೊತ್ತಿಲ್ಲ.

ಅಧ್ಯಕ್ಷರು.—ಅವರು ನಿಮ್ಮ ಮಕ್ಕಳು ಇದ್ದಹಾಗೆ ಇದ್ದಾರೆ, ತಾವು ಕೇಳಿರಿ.

ಶ್ರೀ ಆರ್. ವೆಂಕಟರಾಮಯ್ಯ.—ಇವರು ಡೆಲ್ಲಿಗೆ ಹೋಗಿದ್ದಾರೆ, ಕೇಳಿದ್ದಾರೆ. ಆದರೆ ಪಾಪ ಇವರಿಗೆ ಏನೂ ಮಾಡುವುದಕ್ಕಾಗುವುದಿಲ್ಲ. ಅದು ಇವರಿಗೆ ಅರ್ಥವಾಗುವುದಿಲ್ಲ.

೪–೩೦ ಪಿ. ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿರೋಧ ಪಕ್ಷದ ನಾಯಕರು ಬೀದರ್ ನಗರದಲ್ಲಿ ಕಳೆದ ನಾಲ್ಕಾರು ವರ್ಷಗಳಿಂದ ಕೆಲವು ವಿದ್ಯಮಾನಗಳು ನಡೆಯುತ್ತಿರುವುದರ ಬಗ್ಗೆ ಅಲ್ಲಿನ ಮಹಿಳೆಯರು ಹೇಳಿದ ವಿಚಾರಗಳನ್ನು ಹೇಳಿದರು. ಇದರ ಬಗ್ಗೆ ನನಗೂ ಕೂಡ ಒಂದು ರೀತಿಯ ವೇದನೆಯಾಗಿದೆ. ಈ ವಿಚಾರದಲ್ಲಿ ಪೋಲೀಸ್ ಇಂಟೆಲಿಜೆನ್ಸ್ ಮುಂಚಿತವಾಗಿ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಸ್ಥಳೀಯ ಪೋಲೀಸ್ ಅಧಿಕಾರಿಗಳು ಕೂಡ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಇದನ್ನು ನಾನು ಒಪ್ಪುತ್ತೇನೆ. ನಾನು ಭೇಟಿ ನೀಡಿದಾಗ ಅನೇಕ ಜನ ಮಹಿಳೆಯರು ನಮ್ಮನ್ನು ಪಕ್ಕಕ್ಕೆ ಕರೆದು, ನಮಗೆ ವಯಸ್ಸಿಗೆ ಬಂದಂಥ ಹೆಣ್ಣು ಮಕ್ಕಳಿದ್ದು, ಪೋಲೀಸಿನವರಿಗೆ ದೂರು ಕೊಟ್ಟರೆ, ನಮ್ಮ ಮನೆಯ ಹೆಸರು ಕೆಡುತ್ತದೆಂದು, ನಾವು ದೂರು ಕೊಟ್ಟಿಲ್ಲ. ನಮಗೆ ಆಗಿರುವ ಅನ್ಯಾಯಗಳನ್ನು ಹೇಳುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಇಂಟೆಲಿಜೆನ್ಸ್ ಇಲಾಖೆಯನ್ನು ಬಲಪಡಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಇದರಲ್ಲಿ ಒಪ್ಪಿಕೊಳ್ಳುವುದೇನಿದೆ? ಆಕ್ಷನ್ ತೆಗೆದುಕೊಳ್ಳಿ.

ಅಧ್ಯಕ್ಷರು.—ನೀವು ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದು ಜೀವದ ಬೆಲೆ ಏನು ಎಂದು ಕೇಳಿದರು. ಇದಕ್ಕೆ ಬೆಲೆ ಕಟ್ಟುವುದಕ್ಕಾಗುವುದಿಲ್ಲ. ಇದು ಅಗಣಿತವಾದದ್ದು. ಗಲಭೆಗಳಲ್ಲಿ ಮೃತರಾದವರಿಗೆ ಎಷ್ಟು ಹಣ ಕೊಡಬೇಕೆಂದು ಸರ್ಕಾರದ ನಿಯಮಾವಳಿಗಳು ಇವೆ. ಬೀದರ್‌ನಲ್ಲಿ ಒಂದು ರೀತಿ, ಮತ್ತೊಂದು ಕಡೆ ಒಂದು ರೀತಿ ಕೊಡುವುದಕ್ಕೆ ಬರುವುದಿಲ್ಲ. ಈಗ ನಿಯಮಾವಳಿ ಪ್ರಕಾರ ಕೊಟ್ಟಿದ್ದೇವೆ. ಹೆಚ್ಚಿನ ಸಹಾಯ ಕೊಡುವುದರ ಬಗ್ಗೆ ಆಲೋಚನೆ ಮಾಡಲಾಗುವುದು.

ಶ್ರೀ ಕೆ. ಹೆಚ್. ಪಾಟೀಲ್.—ತಾವು ಕೊಟ್ಟ ಹೇಳಿಕೆಯನ್ನು ಬಹಳ ಆಸ್ಥೆಯಿಂದ ಕೇಳಿದೆ. ನಮ್ಮ ಮಾಜಿ ಎಂ. ಪಿ. ಗಳಾದ ವೀರಶೆಟ್ಟಿ ಕುಸನೂರ್ ಅವರ ಮಗಳು ವೈದ್ಯೆಯಾಗಿದ್ದು, ಅಲ್ಲಿನ ಭೀಕರವಾದಂಥ ವಾತಾವರಣದಲ್ಲಿಯೂ ಕೂಡ ಸುಮಾರು ೪೮ ಮಂದಿ ಗಾಯಾಳುಗಳಿಗೆ ಚಿಕಿತ್ಸೆ ನೀಡಿದ್ದಾರೆ. ಅದರ ಬಗ್ಗೆ ತಮ್ಮ ಹೇಳಿಕೆಯಲ್ಲಿ ಒಂದು ಉಲ್ಲೇಖವೂ ಇಲ್ಲ. ಸಮಾಜ ಕಾರ್ಯಕರ್ತರು ಇಂಥ ಸೇವೆಯನ್ನು ಮಾಡಿದಾಗ ಅವರ ಬಗ್ಗೆ ಒಂದು ಒಳ್ಳೆಯ ಮಾತನ್ನು ಹೇಳಿದರೆ, ಕೀರ್ತಿ ಕೊಟ್ಟರೆ ಒಳ್ಳೆಯದಲ್ಲವೇ? ನಿಮ್ಮ ವೈದ್ಯರು ಯಾರೂ ಅಲ್ಲಿ ಇರಲಿಲ್ಲ. ಅವರು ಯಾವ ಕಡೆ ಹೋಗಿದ್ದಾರೋ ಗೊತ್ತಿಲ್ಲ. ಇಲ್ಲಿ ಪಕ್ಷದ ವಿಚಾರ ಇಲ್ಲ. ನಮ್ಮ ಪ್ರಧಾನಿಗಳು ಕಾಂಗ್ರೆಸ್‌ನವರು ಇಂಥ ವಿಚಾರಗಳಲ್ಲಿ ಯಾವುದೇ ತರಹದ ಪ್ರಚೋದನೆಗೆ ಅವಕಾಶ ಕೊಡದಂತೆ ವರ್ತಿಸಬೇಕೆಂದು ತಿಳಿಸಿದ್ದಾರೆ. ಸೆಂಟ್ರಲ್ ಟೀಂ ಕಳುಹಿಸಿದ್ದು, ನಿಮ್ಮ ವಿರುದ್ಧ ಅಲ್ಲ. ಕೇಂದ್ರ ಸರ್ಕಾರದಿಂದಲೂ ಸಹಾಯ ಮಾಡುವ ದೃಷ್ಟಿಯಿಂದ ಕಳುಹಿಸಿದ್ದರು. You must compliment the Central Government rather than taking suspiction about it. ವೀರಶೆಟ್ಟಿ ಕುಸನೂರು ಅವರ ಮಗಳು ಮಾಡಿದಂಥ ಕಾರ್ಯವನ್ನು ಮೆಚ್ಚಿ, ಅವರಿಗೆ ಯೋಗ್ಯವಾದಂಥ ಪ್ರಶಸ್ತಿಯನ್ನು ತಾವು ಕೊಡಬೇಕು. ಅದೇ ರೀತಿ ಮಾನ್ಯ ಖಂಡ್ರೆಯವರು ತಮ್ಮ ವಾಹನದಲ್ಲಿ ಸುಮಾರು ೬೦ ಮಂದಿಯನ್ನು ಸುರಕ್ಷಿತವಾಗಿ ಹೊರಗಡೆ ಕಳುಹಿಸಿಕೊಟ್ಟಿದ್ದಾರೆ. ಇದರ ಬಗ್ಗೆ ಕೂಡ ಒಂದು ಮಾತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಭಾಪತಿಗಳೇ, ವೀರಶೆಟ್ಟಿ ಕುಸನೂರು ಅವರ ಮಾಗಳು ಮಾಡಿದಂಥ ಸೇವೆಗೆ ಯೋಗ್ಯ ಪ್ರಶಸ್ತಿಯನ್ನು ಕೊಡಲಾಗುವುದು. ಕೇಂದ್ರದ ಟೀಮಿನ ಬಗ್ಗೆ ಈಗಾಗಲೇ ಹೇಳಿದ್ದೇನೆ. ನಾನು ಅದನ್ನು ವೆಲ್‌ಕಂ ಮಾಡಿದ್ದೇನೆ. ಇದರ ಬಗ್ಗೆ ಸಹ ಎರಡು ಅಭಿಪ್ರಾಯಗಳು ಇವೆ.

† ಶ್ರೀ ಎಸ್. ಬಂಗಾರಪ್ಪ.—ಸನ್ಮಾನ್ಯ ಸಭಾಧ್ಯಕ್ಷರೆ, ಈಗ ಘಟನೆಯ ವಿಚಾರವನ್ನು ಮಾತನಾಡಿದ್ದು ಆಗಿದೆ. ಅಲ್ಲಿ ಶಾಂತಿಯನ್ನು ಕಾಪಾಡತಕ್ಕ ಜವಾಬ್ದಾರಿ ಎಲ್ಲರ ಮೇಲೂ ಇದೆ ಎಂದು ತಾವು ಹೇಳಿದ್ದೀರಿ. ಈಗ ಒಂದು ಸಮಿತಿಯನ್ನು ಕೂಡ ನೇಮಕ ಮಾಡಲಾಗಿದೆ, ಅವರಲ್ಲಿ ಎಸ್. ಎಸ್. ಬರ್ನಾಲ ಇದ್ದಾರೆಂದು ಹೇಳಿದ್ದೀರಿ. ಆ ಸಮಿತಿಯ ಸದಸ್ಯರನ್ನು ನೋಡಿದರೆ ನನಗನ್ನಿಸುತ್ತದೆ, ಪಂಜಾಬಿನ ಬೇರೆ ಬೇರೆ ಪಕ್ಷಗಳಿಗೆ ಸೇರಿರತಕ್ಕ ಪ್ರಮುಖರು ಸಹ ಅದರಲ್ಲಿ ಇದ್ದಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ನನ್ನ ಭಾವನೆ, ಇದು ನನ್ನ ಸಲಹೆ, ಅವರ ಬಗ್ಗೆ ವಿಚಾರ ಮಾಡಿ. ಬರೀ ಒಂದೇ ಹೆಸರು ಸೇರಿಸಿದರೆ. ಬೇರೆ ವರ್ಗದವರು ಮತ್ತೊಂದು ಅಭಿಪ್ರಾಯ ಇಟ್ಟುಕೊಂಡು ಅವರು ಬೇರೆ ಅಭಿಪ್ರಾಯಕ್ಕೆ ಬರಲಿಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ. ಇದರಬಗ್ಗೆ ವಿಚಾರ ಮಾಡುವುದು ಒಳ್ಳೆಯದು. ಇವೊತ್ತು ಮತ್ತೊಂದು ವಿಚಾರ ಹೇಳಬೇಕೆಂದರೆ. ಆಡಳಿತದಲ್ಲಿ ಇವೊತ್ತು ತಾವು ಇರಬಹುದು, ಅಥವಾ ಯಾರೋ ಇರಬಹುದು, ಇಂಟಲಿಜೆನ್ಸ್ ವಿಂಗ್ ಆಫ್ ದಿ ಪೋಲೀಸ್ ಡಿಪಾರ್ಟ್‌ಮೆಂಟ್ ಏನಿದೆ, ಅದರಬಗ್ಗೆ You-are also not satisfied with them. I appreciate that atleast you have come out with the trtuh. ನಾವು ಆ ವಿಚಾರವನ್ನು ಹೇಳಬೇಕಾದರೆ, ಮಾನ್ಯ ಸದಸ್ಯರು ಯಾರು ಯಾರು ಮಾತನಾಡಿದ್ದಾರೆ ಅವರು ಆ ವಿಚಾರವನ್ನು ಹೇಳಿದ್ದಾರೆ. ಇಂಟೆಲಿಜೆನ್ಸ್ ವಿಂಗ್ ಅವರು ಮೊದಲೇ ಈ ವಿಚಾರವನ್ನು ಮೇಲಿನ ಅಧಿಕಾರಿಗಳಿಗೆ, ಸರ್ಕಾರಕ್ಕೆ ಫೀಡ್ ಮಾಡತಕ್ಕದ್ದು ಮಾಡಿದ್ದಾರೆ, ಈ ಘಟನೆ ನಡೆಯುತ್ತಾ ಇರಲಿಲ್ಲ, ಎಂದುನನ್ನ ಅಭಿಪ್ರಾಯ. ಈಗ ತಾವು ಅದನ್ನು ಇಂಪ್ರೂವ್ ಮಾಡಲಿಕ್ಕೆ ಸ್ಟೆಫ್ ತೆಗೆದುಕೊಳ್ಳುತ್ತೇನೆಂದು ಹೇಳುವುದು ಸರಿಯಾದಂಥ ಉತ್ತರ ಅಲ್ಲ. ಇಂಟಲಿಜೆನ್ಸ್ ವಿಂಗ್ ಏನಿದೆ, ಅದಕ್ಕೆ ಒಂದು ಕಾನೂನು ಇದೆ, ಗೈಡ್‌ಲೈನ್ಸ್ ಇದೆ. ಅಂಥಾದರಲ್ಲಿ ಇವೊತ್ತು ಅವರು ಫೈಲ್ ಆಗಿದ್ದಾರೆ ಅಂದರೆ ಏನರ್ಥ ? The officer incharge and the concerned have not acted as per the guidelines given under that code or Law, Therefore, it is visible that they have gone against those guidelines ಈ ಸಂದರ್ಭದಲ್ಲಿ ಆಕ್ಷನ್ ತೆಗೆದುಕೊಳ್ಳಬೇಕೋ ಬೇಡವೋ. ತಾವು ಇಂಪ್ರೂವ್ ಮಾಡುತ್ತೇವೆ ಎಂದು ಹೇಳುವುದು ಬೇರೆ ಪ್ರಶ್ನೆ. ಅಲ್ಲಿ ಕೆಲವರನ್ನು ಷಿಫ್ಟ್ ಮಾಡತಕ್ಕದ್ದು ನಂಬರ್ ಒನ್. ಬೇರೆಯವರನ್ನು ಅಲ್ಲಿಗೆ ಪೋಸ್ಟ್ ಮಾಡಬೇಕು ಏಕೆಂದರೆ. ಅಲ್ಲಿ ಬಡ್ಡಿಂಗ್ ಸ್ಟೇಜ್‌ನಲ್ಲಿಯೇ ನಿಪ್ ಮಾಡಬೇಕು. ದೊಡ್ಡದಾಗಿ ಬೆಳೆದಮೇಲೆ ಏನಾಗುತ್ತದೆಂದು ತಮಗೆ ಅನುಭವದಲ್ಲಿ ತಿಳಿದು ಬಂದಿದೆ. ದೊಡ್ಡದಾಗಿ ಬೆಳೆದಮೇಲೆ ಕಂಟ್ರೋಲ್ ಮಾಡಲಿಕ್ಕೆ ಕಷ್ಟವಾಗುತ್ತದೆ. ನೀವು ಮುಂದೆ ರಿಪೇರಿ ಮಾಡುವುದನ್ನು ಹೇಳುತ್ತಿದ್ದೀರಿ, ಅದು ಸರಿಯಲ್ಲ. ಮಾನ್ಯ ಮೊಯಿಲಿಯವರು ಮಾತನಾಡುತ್ತಾ ಕೆಲವೊಂದು ವಿಚಾರಗಳನ್ನು ಹೇಳಿದರು, ಕೆಲವು Lapses on the part of the Government including the Intelligence wing and the suspicion on SP and the concerned officers. ತಾವು ಅದರ ಬಗ್ಗೆ ಏನು ಹೇಳುತ್ತಿದ್ದೀರಿ, ಆದಷ್ಟು ಶೀಘ್ರವಾಗಿ ವರದಿಯನ್ನು ತೆಗೆದುಕೊಂಡು ನೋಡುತ್ತೇನೆ ಎಂದು ಹೇಳುತ್ತಿದ್ದೀರಿ. ಸರ್ಕಾರ ಎಷ್ಟೋ ಸಾರಿ ನಿಮ್ಮ ಪಕ್ಷದ ಸರ್ಕಾರ ಇರಬಹುದು. ನಮ್ಮ ಪಕ್ಷದ ಸರ್ಕಾರ ಇರಬಹುದು, ಅಧಿಕಾರಿಗಳನ್ನು ಸಸ್‌ಪೆನ್‌ಷನ್‌ನಲ್ಲಿಟ್ಟು ಅನಂತರ ವರದಿಯನ್ನು ತರಿಸಿಕೊಂಡು ತಪ್ಪು ಮಾಡಿದ್ದು ಕಂಡುಬಂದರೂ ಸಸ್‌ಪೆನ್‌ಷನ್ ರಿವೋಕ್ ಮಾಡಿರುವ ಉದಾಹರಣೆಗಳಿವೆ. ನೀವು ವರದಿಯನ್ನು ತರಿಸಿಕೊಳ್ಳುವುದಕ್ಕಿಂತಲೂ ಮುಂಚೆಯೇ ಕ್ರಮ ತೆಗೆದುಕೊಳ್ಳಬೇಕಾಗಿತ್ತು. You are admitting the failure of the Intelligence wing and in a way, admitting the fault of the Government. You are admitting that local police have failed. However, you have not taken any action except transferring the Superintendent of Police. ಅವನ್ನು

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬಿಟ್ಟು ಬೇರೆ ಹೇಳಲಿಲ್ಲ. What about the other officers of different grades below the rank of the S. P. ಇದು ಎಲ್ಲಿದೆ ಸ್ವಾಮಿ, ತಮ್ಮ ಉತ್ತರದಲ್ಲಿ ? ಇನ್ನು ಎರಡನೆಯದು ಅಂದರೆ ನಾವು ಇನ್ನೂ ಕೂಡ ವಿವರಗಳನ್ನು ಹೇಳಬಾರದು ಅಂದರೆ, ನಾವು ಯಾವುದೇ ಅಸೋಷಿಯೇಷನ್ ಮತ್ತು ಪಕ್ಷದ ವಿಚಾರವನ್ನು ಹೇಳಲಿಲ್ಲ, ಕಾಂಗ್ರೆಸ್, ಬಿ. ಜೆ. ಪಿ. ಜನತಾ ಸಿಪಿಎಂ, ಪಕ್ಷಗಳದ್ದು ಯಾರು ಎತ್ತಿಲ್ಲ, ಯಾರುಸಹ ಎತ್ತುವುದು ಬೇಡ. ಈಬಗ್ಗೆ ಖಚಿತವಾದ ವಿಚಾರ ಅಂದರೆ, ಸಿಪಿಎಂ ಅವರ ಒಂದು ಪತ್ರಿಕಾ ಹೇಳಿಕೆ ಬಂದಿದೆ. ಏನೆಂದರೆ, For the first time, we also did not allege anything againt the Janata Party not the Janata party alleged anything against the Congress. In the press it has appeared that the CPM State level Committee have said that there is a hand of the Congress (I) in the Bidar incident. ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಅದು ತಮ್ಮ ಮನಸ್ಸಿಗೆ ಒಪ್ಪಿಗೆಯಾಗುತ್ತದೆಯೆ ಎಂದುಕೇಳಲಿಕ್ಕೆ ಇಚ್ಚಿಪಡುತ್ತೇನೆ, ಇವತ್ತು ಅವರದ್ದು ಕೂಡ ಒಂದುಪೊಲಿಟಿಕಲ್ ಪಾರ್ಟಿ ಆಪಾರ್ಟಿಯ ಬಗ್ಗೆ ನನಗೆ ಗೌರವ ಇದೆ. ಆದರೆ ಹೇಳಬೇಕಾದ ವಿಚಾರವನ್ನು ಸ್ಪಷ್ಟವಾಗಿ ಹೇಳದಿದ್ದರೆ ನಾವು ಅದನ್ನೆಲ್ಲಾ ಒಪ್ಪಿಕೊಳ್ಳಬಹುದೇ ? ಇವತ್ತು ಪ್ರೆಸ್‌ನಲ್ಲಿ ಬರುತ್ತದೆ, ನಾಳೆ ಪಬ್ಲಿಕ್‌ಮುಂದೆ ಹೇಳಬಹುದು, ಆಮೇಲೆ ಇನ್ನೊಂದುಕಡೆ ಹೇಳಬಹುದು. ಇವತ್ತು ತಾವು ಆ ಖಾತೆಯ ಇನ್‌ಛಾರ್ಜ್ ಮಂತ್ರಿಗಳಾಗಿದ್ದೀರಿ. ಇದರ ಹಿಂದೆ ಯಾವುದೇ ಪೊಲಿಟಿಕಲ್ ಪಾರ್ಟಿ ಮತ್ತೊಂದು ಇಲ್ಲವೆಂದು ತಾವೇ ಹೇಳಿದ್ದೀರಿ. Hon'ble Chief Minister is in-charge of Home portfolio ಬೇರೆ ಯಾವುವೂ ಇಲ್ಲವೆಂದು ತಾವೇ ಹೇಳಿದಮೇಲೆ ಸಿ. ಪಿ. ಎಂ. ನವರು ಈಗಲಾದರೂ ತಮ್ಮ ಹೇಳಿಕೆಯನ್ನು ತಿದ್ದಿಕೊಂಡು ಯಾವ ಸದಸ್ಯರು ಆರೋಪ ಮಾಡಿದ್ದಾರೆ ಅವರು ಇದನ್ನು ಯೋಚನೆ ಮಾಡಬೇಕು. ಇದು ನಿಜ ಎಂದು ತಮ್ಮ ಮನಸ್ಸಿಗೆ ತಿಳಿದುಬಂದರೆ you come out with the facts. ಇಂಥ ಒಂದು ಸ್ಟೇಟ್‌ಮೆಂಟನ್ನು ಕೊಟ್ಟು ಸುಮ್ಮನೆ ಕೂತುಬಿಡುವುದು ಈರೀತಿಯೆಲ್ಲಾ ಮಾಡುವುದು ಬೇಡ. ಈರೀತಿ ನಮ್ಮ ಮಾನ್ಯ ಮಿತ್ರರು ಮಾಡಿರತಕ್ಕದ್ದು ಒಳ್ಳೆಯದಲ್ಲ. ನಮ್ಮ ಪಕ್ಷದವರು ಮಾತ್ರವಲ್ಲ, ಬೇರೆಯವರೂ ಕೂಡ ಸಿ. ಪಿ. ಎಂ.ನವರ ವರ್ತನೆಯನ್ನು ಖಂಡಿಸಬೇಕು.

ಇನ್ನು ಎರಡನೆಯದಾಗಿ ತಾವು ಎನ್‌ಕ್ವೈರಿ ಮಾಡಿ ಸಿ. ಪಿ. ಎಂ. ನವರು ಹೇಳಿರುವುದು ನಿಜವಾಗಿದ್ದರೆ ಅವರು ಹೇಳುವುದು ಸತ್ಯವಾಗಿದ್ದರೆ ಅದು ಸತ್ಯ ಎಂದು ತಾವು ಹೇಳಬೇಕು. ಬೇರೆ ವಿಷಯಗಳಿಗೆ ನಾವು ಈ ಸಂದರ್ಭದಲ್ಲಿ ಹೋಗಬಹುದು. ಆದರೆ ಹೋಗಬಾರದು ನಾನು ಹೇಳುತ್ತಿದ್ದೇನೆ. ಈ ವಿಷಯದಲ್ಲಿ ಚರ್ಚೆ ಪಕ್ಷತೀತವಾಗಿ ನಡೆಯಬೇಕು, ಶಾಂತಿಯನ್ನು ಕಾಪಾಡುವ ದೃಷ್ಟಿಯಿಂದ ಸಿಖ್ ಬಾಂಧವರು, ಮುಸ್ಲಿಂ ಬಾಂಧವರು, ಹಿಂದೂ ಮತಬಾಂಧವರು ಏನಿದ್ದಾರೆ ಅವರೆಲ್ಲರೂ ಬಹಳವಾಗಿ ಹೋರಾಟ ಮಾಡಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಿಖ್ಖರ ಸಿಖ್ಖರು ದೇಶಕ್ಕಾಗಿ ಬಹಳವಾಗಿ ಹೋರಾಟ ಮಾಡಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಿಖ್ಖ ಕೊಡುಗೆ ದೇಶಕ್ಕೆ ಸಣ್ಣದೇನೂ ಅಲ್ಲ. ಪ್ರತಾಪ ಸಿಂಗ್ ಖೈರಾನ್ ಇನ್ನೂ ಮುಂತಾದವರು ಮಹಾನ್ ನಾಯಕರಾಗಿದ್ದರು. ಅವರು ಮಹಾನ್ ಹೋರಾಟಗಾರರಾಗಿದ್ದರೆಂಬುದು ತಮಗೂ ಗೊತ್ತಿದೆ. ಹಿಂದೂಗಳು ಎಷ್ಟು ಹೋರಾಟಗಾರರೋ, ಮುಸ್ಲಿಮರು ಎಷ್ಟು ಹೋರಾಟಗಾರರೋ ಅದೇರೀತಿ ಸಿಖ್ಖರೂ ಕೂಡ ಬಹಳ ದೊಡ್ಡ ಹೋರಾಟಗಾರರಾಗಿದ್ದರು ಎಂಬುದನ್ನು ಯಾರೂ ಮರೆಯುವಂಥದ್ದಲ್ಲ. ಈ ದೃಷ್ಟಿಯಿಂದ ನಾನು ಇಲ್ಲಿ ಕೆಲವು ವಿಷಯಗಳನ್ನು ಹೇಳತಕ್ಕದ್ದು ಅಗತ್ಯವಿದೆ. ಇಲ್ಲಿ ಪಕ್ಷ, ಪಂಗಡಕ್ಕೆ, ಧರ್ಮ-ಧರ್ಮಕ್ಕೆ ಭಿನ್ನಭಾವ ಹುಟ್ಟಿಸತಕ್ಕಂಥ ಮಾತನ್ನು ಯಾರೂ ಆಡಬಾರದು. ಆದರೆ ಈ ಘಟನೆ ಹಿಂದೆ ಯಾರಿದ್ದಾರೆ ಎಂಬುದನ್ನು ಹೇಳಬೇಕೆಂದು ಸರ್ಕಾರಕ್ಕೆ ಒತ್ತಾಯಮಾಡುತ್ತೇನೆ. ಇದನ್ನು ನೀವು ಒಂದು ರೀತಿಯ ಚರ್ಚೆ ಎಂದು ತೆಗೆದುಕೊಂಡಿರಿ. ಅಧ್ಯಕ್ಷರು ನಿಳುವಳಿ ಸೂಚನೆಯನ್ನು ಅಡ್ಮಿಟ್ ಮಾಡುವುದಕ್ಕೆ ಮುಂಚೆತಾವು ಒಂದು ಹೇಳಿಕೆಯನ್ನು ಮಾಡಿದಿರಿ. ತಾವು ಅಡ್ಜರ್ನ್‌ಮೆಂಟ್ ಮೋಷನ್‌ಗೆ ಒಪ್ಪಿಗೆ ಕೊಡುತ್ತೀರೆಂದು ನಾವು ತಿಳಿದುಕೊಂಡಿದ್ದೆವು. ಆದರೆ ನೀವು ಕೊಡಲಿಲ್ಲ. ಪ್ರಿಲಿಮಿನರಿ ಸಬ್ಮಿಷನ್‌ಗೆ ಸಂಬಂಧಪಟ್ಟಂತೆ ಒಪ್ಪಿಗೆ ಕೊಟ್ಟಿದ್ದೇನೆಂದು ತಾವು ಈಗ ಹೇಳುತ್ತಿದ್ದೀರಿ.

ಮಾನ್ಯ ಅಧ್ಯಕ್ಷರೆ. ತಮ್ಮ ಮುಖಾಂತರ ನಾನು ಮಾನ್ಯ ಮುಖ್ಯಮಂತ್ರಿಗಳಾದ ಬೊಮ್ಮಾಯಿಯವರಿಗೆ ಹೇಳುತ್ತೇನೆ, ಈ ಘಟನೆಯ ವಿಚಾರದಲ್ಲಿ ಸಂಪೂರ್ಣವಾದ, ವಿವರವಾದ ಚರ್ಚೆಗೆ ಹೋಗುವುದಕ್ಕೆ ಅವಕಾಶವನ್ನು ತಾವುಮಾಡಿಕೊಡಬೇಕು, ಇದಕ್ಕೆ ತಾವು ಅನುಮತಿಯನ್ನು ದಯಪಾಲಿಸಬೇಕು. ತಾವು ಇಷ್ಟು ಮಾಡಿದರೆ ಇದರ ಬಗ್ಗೆ ಇನ್ನೂ ಅನೇಕ ವಿಷಯಗಳು ಹೊರಗೆ ಬರುತ್ತವೆ.

Mr. Speaker.—I have already heard you.

ಶ್ರೀ ಎಸ್. ಬಂಗಾರಪ್ಪ.—ಇನ್ನೂ ಕೂಡ there are so many lapses on the part of the Government. ಇದೂ ಅಲ್ಲದೆ ಹೇಳುವುದು ಇನ್ನೂ ಬಹಳ ಇದೆ. ಆದ್ದರಿಂದ ಈ ವಿಷಯದ ಮುಕ್ತ ಚರ್ಚೆಗೆ ತಾವು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು.—ನಾನು ಆಮೇಲೆ ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಚಿಕ್ಕವಯಸ್ಸಿನಲ್ಲಿದ್ದಾಗ ಹೋಂ ಮಿನಿಸ್ಟರ್ ಆಗಿ ಕೆಲಸಮಾಡಿದ್ದೆ. ಈಗ ಇವರು ಹೋಂ ಮಿನಿಸ್ಟರ್ ಆಗಿದ್ದಾರೆ. ಇವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ ಈ ಹೇಳಿಕೆ ೧೪ನೇ ತಾರೀಖಿನಿಂದ ಪ್ರಾರಂಭವಾಗುತ್ತದೆ. ಪೋಲೀಸರು ಏನು ಬರೆದುಕೊಟ್ಟಿದ್ದಾರೆ, ಅದನ್ನೇ ಇವರು ಓದಿದ್ದಾರೆ. ಆದರೆ ಇದರಹಿಂದೆ ಏನು ಆಗಬೇಕಾಗಿತ್ತು ಎಂಬುದನ್ನು ಇವರು ಯೋಚನೆ ಮಾಡಬೇಕಾಗಿತ್ತು. ೧೪ನೇ ತಾರೀಖು ಈ ಘಟನೆ ಆಗಿದೆ. ಅನಂತರ ಮೂರುದಿವಸಗಳು ನಡೆದ ಘಟನೆಯೂ ನನಗೆ ಗೊತ್ತಿದೆ. ೧೪ನೇ ತಾರೀಖಿನವರೆಗೂ ಕೂಡ ಕಾಯಿದೆಯನ್ನು ನೋಡತಕ್ಕಂಥ ಪೋಲೀಸ್ ಇಲಾಖೆ ನಮ್ಮಲ್ಲಿ ಇದೆ. ಅವರಿಗೆ ಬಹಳ ಶಹಬಾಸ್‌ಗಿರಿ ಕೊಟ್ಟಿದ್ದೀರಿ. ಬಹಳ ಸಂತೋಷ. ಆದರೆ ಇಂಥ ಒಂದು ಗಲಭೆ ಆಗುತ್ತದೆ ಎನ್ನುವ ನಿರೀಕ್ಷಣೆ ಅವರಿಗೆ ಇರಲಿಲ್ಲವೇ ? ವಿವೇಚನೆ ಇರಲಿಲ್ಲವೇ ? ಮುಖ್ಯವಾಗಿ ಯಾರು ಅಧಿಕಾರಿಗಳು ಇದ್ದಾರೆ ಅವರು ಇಂಥ ಒಂದು ಮುನ್ಸೂಚನೆಯನ್ನು ಕಂಡು ಹಿಡಿದು ಸರಿಯಾಗಿ ವರ್ತನೆ ಮಾಡತಕ್ಕಥದ್ದು ಅವರ ಕರ್ತವ್ಯವಾಗಿತ್ತೆಂದು ನಾನು ಹೇಳುತ್ತೇನೆ. ೧೪ನೇ ತಾರೀಖು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ ಆದರ ಹಿನ್ನೆಲೆಯಲ್ಲಿ ಯಾರೂ ಪೋಲೀಸ್ ಅಧಿಕಾರಿಗಳು ಇದ್ದಾರೆ ಅವರು ಮುನ್ಸೂಚನೆಯನ್ನು ತೆಗೆದುಕೊಂಡು ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿತ್ತೋ ಆ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಬೇಕಾಗಿತ್ತು. ಜನರಿಂದ ಅವರಬಗ್ಗೆ ಯಾವರೀತಿ ಮಾತುಗಳು ಬರುತ್ತದೆ ಎನ್ನುವುದನ್ನು ಕಂಡುಹಿಡಿಯಲು ಅವರು ಪ್ರಯತ್ನ ಪಡಬೇಕಾಗಿತ್ತು. ಆದರೆ ಅವರು ಪಟ್ಟಿಲ್ಲದ್ದರಿಂದ ಇಂಥ ಘಟನೆ ನಡೆಯಲಿಕ್ಕೆ ಉತ್ತೇಜನ ಕೊಟ್ಟಿದ್ದಾರೆ, ಸಹಾಯಕರಾಗಿದ್ದಾರೆಂದು ಹೇಳಬೇಕಾಗುತ್ತದೆ. ಜವಾಬ್ದಾರಿಯುತರಾದ ಡಿ.ಐ.ಜಿ ಯವರಾಗಲಿ, ಅಥವಾ ಐ. ಜಿ. ಪಿ. ಅವರಾಗಲಿ ಯಾರು ಇಂಥ ಒಂದು ಸಣ್ಣ ರಾಜ್ಯದಲ್ಲಿ ಯಾವರೀತಿ ಇದನ್ನು ತಡೆಗಟ್ಟಬೇಕೆನ್ನುವ ವಿವೇಚನೆ ಇಲ್ಲವಾಗಿದೆ. ಇಂಥ ಮನಸ್ಸಿಲ್ಲದ ಅಧಿಕಾರಿಗಳು ಏನು ಇದ್ದಾರೆ, ಅಂಥ ಅಧಿಕಾರಿಗಳಮೇಲೆ ಕ್ರಮತೆಗೆದುಕೊಳ್ಳದಿದ್ದರೆ ಯಾವರೀತಿ ಸರ್ಕಾರ ನಡೆಸುತ್ತೀರಿ ಎನ್ನುವುದು ಒಂದು ಪ್ರಶ್ನೆ.

ಎರಡನೆಯದಾಗಿ ಸೌಹಾರ್ದ ಸಮಿತಿಗಳನ್ನು ನೇಮಿಸತಕ್ಕಂಥ ಯೋಜನೆ ಮಾಡಿದ್ದೇವೆಂದು ಹೇಳಿದ್ದೀರಿ. ಇದನ್ನು ಏತಕ್ಕೆ ನೇಮಕ ಮಾಡಬೇಕೆನ್ನುವುದು ಮತ್ತೊಂದು ಪ್ರಶ್ನೆ. ತಮ್ಮ ಹೇಳಿಕೆಯನ್ನು ನೋಡಿದರೆ ಸಮಾಧಾನಕರವಾದ ಎಲ್ಲ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ಆದರೆ ಅಸಮಾಧಾನರಾಗಿರತಕ್ಕಂಥ ಪಂಜಾಬಿನ ಜನರನ್ನು ಕರೆದುಕೊಂಡುಬಂದು ಬುದ್ಧಿಹೇಳುವುದಕ್ಕೆ ಹೊರಟಿದ್ದೀರಿ. ನಮ್ಮ ಕರ್ನಾಟಕ ರಾಜ್ಯ ಶಾಂತವಾಗಿರತಕ್ಕಂಥ ರಾಜ್ಯ, ಬೇರೆ ಯಾವರು ಒಂದು ಹೇಳುವ ಅವರ ಬುದ್ಧಿವಾದ ನಮಗೆ ಬೇಕಾಗಿಲ್ಲ. ತಾವು ಯಾರನ್ನು ಕರೆಸಿದ್ದೀರಿ ಎಂದರೆ ಯಾವಪ್ರದೇಶದಲ್ಲಿ ಬಹಳಜನ ವಾಸವಾಗಿದ್ದಾರೆ ಮತ್ತು ಆ ಪ್ರದೇಶದಲ್ಲಿ ನೂರಾರುಜನರು ಕೊಲೆಯಾಗುತ್ತಿದ್ದರೂ ಅದನ್ನು ಅವರಕೈಯಲ್ಲಿ ನಿಲ್ಲಿಸುವುದಕ್ಕೆ ಸಾಧ್ಯವಾಗಿಲ್ಲವೋ ಅಂತಹವರನ್ನು ಕರೆಸಿದ್ದೀರಿ. ಕೇಂದ್ರ ಸರ್ಕಾರದವರು ಅವರ ಪೋಲೀಸ್ ಪಡೆಯನ್ನು ಕಳುಹಿಸುತ್ತೇವೆಂದು ಹೇಳಿದರೆ ನೀವು ಬೇಡ ಎಂದು ಹೇಳಿ ಅದಕ್ಕೆ ಏನುಕಾರಣ ಕೊಟ್ಟಿದ್ದೀರೆಂದರೆ, ನಮ್ಮ ಪೋಲೀಸ್ ಪಡೆಗೆ ದಕ್ಷತೆ ಇದೆ, ಇಂಥ ಗಲಭೆಗಳನ್ನು ತಡೆಯಲಿಕ್ಕೆ ಶಕ್ತಿ ಸಾಮರ್ಥ್ಯವಿದೆ. ಆದ್ದರಿಂದ ನಿಮ್ಮ ಸಹಾಯ ಬೇಡವೆಂದು ಹೇಳಿದ್ದೀರಿ. ಈಗ ನೀವು ಮುಖ್ಯಮಂತ್ರಿಗಳಾದಮೇಲೆ ನೀವು ಹೊಸದಾಗಿ ಹಾಕಿದ್ದೀರಲ್ಲ, ಅವರಿಗೆ ಶಕ್ತಿ ಇಲ್ಲವೇ ? ನಿಮಗೆ ಶಕ್ತಿ ಇಲ್ಲವೇ, ನಿಮ್ಮ ಸರ್ಕಾರಕ್ಕೆ ಶಕ್ತಿ ಇಲ್ಲವೇ ? ಇಂಥ ಒಂದು ಸಣ್ಣ ಗಲಭೆಯನ್ನು ನಿಯಂತ್ರಣ ಮಾಡಲಿಕ್ಕೆ ಬೇರೆಯವರನ್ನು ಕರೆಸಿದ್ದೀರಿ. ಅದು ಬೇಡ ಇದು ಬೇಕೆಂದು ಕರೆಸುತ್ತಿದ್ದೀರಿ. ಅವರು ಶಕ್ತಿ ಸಾಮರ್ಥರು ಇರಬಹುದು. ನಿಮಗೆ ದೊಡ್ಡವರು ಇರಬಹುದು. ಹತ್ತಾರುಪಾರ್ಟಿಯವರನ್ನು ಸೇರಿಸಿಬಿಟ್ಟು ಒಂದು ಸಮಿತಿಯನ್ನು ಮಾಡಿ ಅಂಥವರ ಬೆಂಬಲವನ್ನು ತಾವು ಪಡೆಯುವುದು ಸೂಕ್ತವಿದ್ದರೂ ಅವರು ನಮಗೆಲ್ಲಾ ಬುದ್ಧಿವಾದ ಹೇಳುವುದಕ್ಕೆ ಯೋಗ್ಯರಲ್ಲ. ಅಂಥವರಿಂದ ಬುದ್ಧಿವಾದ ಕೇಳುವುದು ಅನವಾಶ್ಯಕ. ದಯವಿಟ್ಟು ಇದನ್ನು ನಿಲ್ಲಿಸಬೇಕು. ಅವರು ಇಲ್ಲಿಗೆ ಬರುವುದು ಅನಾವಶ್ಯಕ, ತಾವು ಈ ಕೆಲಸಕ್ಕೆ ಪ್ರಯತ್ನ

ಮಾಡಬಾರದು. ನಮಗೆ ಸಾಕಷ್ಟು ಸಾಮರ್ಥ್ಯವಿದೆ. ತಮಗೆ ಒಂದು ವಿಚಾರವನ್ನು ಹೇಳುವುದೇನೆಂದರೆ ೬೦೦–೭೦೦ಜನ ಸಿಖ್ಖರು ಕರ್ನಾಟಕ ರಾಜ್ಯದಲ್ಲಿ ಒಂದು ಅಲ್ಲೋಲಕಲ್ಲೋಲ ಮಾಡಿ ಇಂಥ ಒಂದು ಪರಿಸ್ಥಿತಿ ಉದ್ಭವವಾಗಲಿಕ್ಕೆ ಪ್ರಯತ್ನ ಮಾಡಿದ್ದಾರೆ. ತಾವು ಬಹಳವಾಗಿ ಯೋಚನೆ ಮಾಡಬೇಕಾಗಿದೆ. ಸಿಕ್ಕರು ಡೆಮಾಕ್ರಸಿ ಇದ್ದಾರೆ. ಅಲ್ಲಿ ಶಾಂತಿನೆಲೆಸಲು ತಾವು ಸೂಕ್ಷ್ಮವಾದ ದೃಷ್ಟಿಯನ್ನು ಇಟ್ಟು, ಇಂಥ ಒಂದು ಘಟನೆ ಮತ್ತೆ ನಡೆಯದಿರಲು ಅವಕಾಶವಾಗದಿರುವಂತಹ ವ್ಯವಸ್ಥೆಯನ್ನು ಮಾಡಬೇಕು. ನಾನು ದೆಹಲಿಯಲ್ಲಿದ್ದಾಗ್ಯೆ ಸಿಕ್ಕರು ಕರ್ನಾಟಕ ಭವನವನ್ನು ಸುಟ್ಟುಹಾಕುತ್ತೇವೆ, ಎಲ್ಲೆಲ್ಲಿ ಕರ್ನಾಟಕದ ಆಫೀಸುಗಳಿವೆ ಅವುಗಳನ್ನು ಕಿತ್ತುಹಾಕುತ್ತೇವೆಂದು ಕಾಗದ ಬರೆಯುತ್ತಿದ್ದರು. ಕರ್ನಾಟಕ ರಾಜ್ಯದ ಘನತೆ ಗೌರವವನ್ನು ಉಳಿಸಿಕೊಳ್ಳಬೇಕಾದರೆ ಅವರಿಗೆ ಸಾಕಷ್ಟು ಬುದ್ಧಿವಾದವನ್ನು ಹೇಳಬೇಕು. ಬೀದರ್ ಜಿಲ್ಲೆಗೂ ಅಲ್ಲಿರತಕ್ಕ ಸಿಖ್‌ರಿಗೂ ಏನು ಸಂಬಂಧ ? ಆದ್ದರಿಂದ ಅಖಾಲಿದಳದವರಿಗಾಗಲಿ, ಅವರ ಜಾತಿಯವರಿಗಾಗಲಿ ಇಲ್ಲಿ ಶಾಶ್ವತವಾದ ಹಿತವನ್ನು ಇಟ್ಟುಕೊಳ್ಳುವುದಕ್ಕೆ ತಾವು ಅವಕಾಶ ಮಾಡಿಕೊಡಕೂಡದು. ಎಷ್ಟು ರೀತಿಯಿಂದ ಅವರನ್ನು ತಡೆಯಿಡಿಯಬೇಕೋ ಅಷ್ಟು ತಡೆಹಿಡಿದರೆ ನಮಗೂ ನಿಮಗೂ ಹಾಗೂ ಎಲ್ಲರಿಗೂ ಒಳ್ಳೆಯದು. ಇದುವರೆಗೆ ಪೋಲೀಸರಿಗೆ ಕೆಲಸವೇ ಇರಲಿಲ್ಲ. ಕೆಲವು ಪೋಲೀಸರಿಗಂತೂ ಕೆಲಸವೇ ಇರುವುದಿಲ್ಲ. ಈಗ ನೀವು ಕೈಗೊಂಡಿರತಕ್ಕ ಕೆಲಸಕಾರ್ಯಗಳು ಸರ್ಕಾರಕ್ಕೆ ಶೋಭಿಸುವುದಿಲ್ಲ. ಇಂಥ ಘಟನೆಗಳನ್ನು ನಿರ್ಬಂಧ ಮಾಡಲಿಕ್ಕೆ ಸರಿಯಾದ ಶಕ್ತಿ ಸಾಮರ್ಥ್ಯ ನಿಮ್ಮಲ್ಲಿ ಇಲ್ಲವೆಂದು ನಾವು ಒಂದು ನಿರ್ಧಾರಕ್ಕೆ ಬರಲೇಬೇಕಾಗುತ್ತದೆ. ನಾವು ಈ ನಿಲುವಳಿ ಸೂಚನೆಗೆ ಅನುಮತಿ ಕೊಡಬೇಕೆಂದು ಕೇಳಿದ್ದೇವೆ. ಅದಕ್ಕೆ ತಾವು ಅಪ್ಪಣೆ ಕೊಡಬೇಕು. ಮುಂದೆ ಸರ್ಕಾರಕ್ಕೆ ಕರ್ನಾಟಕ ರಾಜ್ಯಕ್ಕೆ ಬೇಕಾಗಿರತಕ್ಕ ವ್ಯವಸ್ಥೆ ಆಗಬೇಕಾಗಿದೆ. ರಾಜ್ಯದಲ್ಲಿ ಶಾಶ್ವತವಾಗಿ ಶಾಂತಿ ಸ್ಥಾಪನೆ ಮಾಡಲಿಕ್ಕೆ ಶೀಘ್ರವಾಗಿ ಚರ್ಚೆ ಬೇಕಾಗುತ್ತದೆ. ಆದ್ದರಿಂದ ನಾವು ಏನು ಕೇಳುತ್ತಿದ್ದೇವೆ ಅದಕ್ಕೆ ತಾವು ಒಪ್ಪಿಗೆ ಕೊಡಬೇಕು ಮತ್ತು ನಾವು ಕೆಲವು ವಿಷಯಗಳನ್ನು ಏನು ಹೇಳಿದ್ದೇವೆ ಅದಕ್ಕೆ ಮಾನ್ಯ ಬೊಮ್ಮಾಯಿಯವರು ಉತ್ತರಿಸುತ್ತಾರೆಂದು ಭಾವಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಒಂದು ಪ್ರಿವಿಲೇಜ್ ಮೋಷನ್ ಅನ್ನು ಕಳುಹಿಸಿದ್ದೆ, ಅದು ಏನಾಯಿತು ?

ಅಧ್ಯಕ್ಷರು.—ಇದುಆದ ಕೂಡಲೇ ನಿಮ್ಮ ಪ್ರಿವಿಲೇಜ್ ಮೋಷನ್ ತೆಗೆದುಕೊಳ್ಳೋಣ. ಇವತ್ತು ಅಥವಾ ನಾಳೆ.

ಶ್ರೀ ಎಂ. ಎಸ್. ಕೃಷ್ಣನ್.—ನಾಳೆ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ಇದು ಮುಗಿದ ಮೇಲೆ, ಇವತ್ತು ಇಲ್ಲದಿದ್ದರೆ ನಾಳೆ ನೋಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮುಖ್ಯ ಮಂತ್ರಿಗಳು ಉತ್ತರಕೊಡುತ್ತಾ ನಾವು ಇಲ್ಲಿ ಸಿ.ಆರ್.ಪಿ. ತಂದರೆ ನಮ್ಮ ಪೋಲೀಸರ ಪ್ರತಿಷ್ಠೆಗೆ ಧಕ್ಕೆ ಬರುತ್ತದೆ ಎಂದು ಹೇಳಿದರು. ಬಹುಶಃ ಆ ಅರ್ಥವನ್ನು ಕಲ್ಪಿಸಬಾರದು. ತಾವು ಈ ಬಗ್ಗೆ ವಿಚಾರ ಮಾಡಿ ನೋಡಿ. ಈಗಲೇ ಉತ್ತರಿಸ ಬೇಕೆಂದು ನಾವು ನಿರೀಕ್ಷಿಸುವುದಿಲ್ಲ. ಇದನ್ನು ಗಂಭೀರವಾಗಿ ಆಲೋಚಿಸಬೇಕು. ತಮಗೆ ಗೊತ್ತಿದ್ದ ಪ್ರಕಾರ ಸಿಖ್ಖರಿಗೆ ಅಮೃತಸರ, ಗುರುದ್ವಾರ ಮತ್ತು ಬೀದರ್ ಈ ಮೂರು ಅತ್ಯಂತ ಪವಿತ್ರವಾದ ತೀರ್ಥಯಾತ್ರಾ ಸ್ಥಳಗಳು. ಇಲ್ಲಿಗೆ ಸಾವಿರಾರು ಮಂದಿ ಯಾತ್ರಿಕರು ಬರುತ್ತಾರೆ. ಅವರ ವಿದ್ಯಾ ಸಂಸ್ಥೆಗಳು ಅಲ್ಲಿವೆ. ಆದ್ದರಿಂದ ಅವರಿಗೆ ಒಂದು ವಿಶ್ವಾಸ ಹುಟ್ಟಬೇಕಾಗುತ್ತದೆ, ನಾರ್ಮಲ್ ಸಿಚುಯೇಷನ್ ರೆಸ್ಟೋರ್ ಆಗಬೇಕಾಗುತ್ತದೆ. ಲೋಕಲ್ ಪೋಲೀಸ್ ಏನಿದ್ದಾರೆ, ಅವರಿಂದ ಸರಿಯಾದ ವ್ಯವಸ್ಥೆ ಆಗಲಿಕ್ಕಿಲ್ಲ ಎಂಬ ಶಂಕೆ, ಭಯ ಅವರಲ್ಲಿ ಬಂದಿರಬಹುದು. ಆದರೆ ತಾವು ಹೇಳಿದ ಪ್ರಕಾರ ನಾನು ಒಪ್ಪುತ್ತೇನೆ. ಕರ್ನಾಟಕ ರಾಜ್ಯದ ಪೋಲೀಸರಲ್ಲಿ ಅತ್ಯಂತ ದಕ್ಷತೆ ಇದೆ ಎಂಬುದರಲ್ಲಿ ಅನುಮಾನ ಇಲ್ಲ ಆದರೆ ಅವರಲ್ಲಿರತಕ್ಕ ಒಂದು ಸಂಶಯವನ್ನು ಪರಿಹಾರ ಮಾಡಬೇಕಾಗಿದೆ. You think of getting the CRP not to put down this man or that man or to find out and identify the culprit but to restor confidence so that the pilgrims' flow can be restored and the educational institutions can start. ಇಂಥ ಒಂದು ಶಂಕೆಯ ವಾತಾವರಣವನ್ನು ಹೋಗಲಾಡಿಸುವ ದೃಷ್ಟಿಯಿಂದ ಸಿ. ಆರ್. ಪಿ. ಯನ್ನು ತಂದರೆ ಒಳ್ಳೆಯದು. ಇದರಲ್ಲಿ ಪೋಲೀಸರ ಪ್ರತಿಷ್ಠೆ ಹಾಗೂ ತಮ್ಮ ಪ್ರತಿಷ್ಠೆಯನ್ನು ಪ್ರಶ್ನೆಯನ್ನು ನೋಡಬಾರದು, ಇದು ಬಹಳ ಗಂಭೀರವಾಗಿ

ವಿಚಾರ ಮಾಡತಕ್ಕ ಪ್ರಶ್ನೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎರಡನೆಯ ವಿಚಾರ ಎಂದರೆ, It has been reported in a section of the press. ಅವರು ಏನು ಹೇಳಿದ್ದಾರೆಂದರೆ ಸೆಂಟ್ರಲ್ ಇಂಟಲಿಜೆನ್ಸ್‌ನವರು ಹಿಂದೆಯೇ ವಾರ್ನಿಂಗ್ ಕೊಟ್ಟಿದ್ದರು ಎಂದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಂಥ ಸೂಚನೆಯನ್ನೇನು ಕೊಟ್ಟಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಂಥ ವಾರ್ನಿಂಗ್ ಕೊಟ್ಟಿದ್ದರೂ ಏತಕ್ಕೆ ಆ ರೀತಿ ಆ್ಯಕ್ಟ್ ಮಾಡಲಿಲ್ಲವೆಂಬ ಪ್ರಶ್ನೆ ಬರುತ್ತದೆ. ಅದನ್ನು ಆಲೋಚನೆ ಮಾಡಿ. ಈ ಒಂದು ಘಟನೆ ಬಗ್ಗೆ ರಾಷ್ಟ್ರದ ಒಂದು ಹಿನ್ನೆಲೆಯಲ್ಲಿ ವಿಚಾರ ಮಾಡಿ. ಈ ಸದನ ಒಂದು ನಿರ್ಣಯ ಮಾಡುವುದು ಒಳ್ಳೆಯದು. ಈ ಅವಮಾನಕರವಾದ ಘಟನೆಯನ್ನು ಖಂಡನೆ ಮಾಡಿ ಸದನದಲ್ಲಿ ನಿರ್ಣಯ ಮಾಡಿದರೆ we will be speaking on behalf of the people of Karnataka that we are not for it. ಇದರಿಂದ ರಾಷ್ಟ್ರಮಟ್ಟದಲ್ಲಿ ಕರ್ನಾಟಕದ ಜನತೆ ಬಗ್ಗೆ ಸದ್ಭಾವನೆ ಬರುವುದಕ್ಕೆ ಅವಕಾಶವಾಗುತ್ತದೆ ಇದನ್ನು ಆಲೋಚನೆ ಮಾಡುವುದು ಒಳ್ಳೆಯದು. ಇವತ್ತಲ್ಲ ದಿದ್ದರೂ ನಾಳೆಯಾದರೂ ಯೋಚನೆ ಮಾಡಿ, ಇಂಥ ಒಂದು ನಿರ್ಣಯ ತರುವುದರಿಂದ ಮೋಸ ಮುಸುಕಿದ ರೀತಿಯಲ್ಲಿ ಕರ್ನಾಟಕದ ಮೇಲೆ ಒಂದು ರೀತಿಯ ಅಪವಾದದ ಗೂಬೆಯನ್ನು ಕೂರಿಸುವುದಕ್ಕೆ ಕೆಲವು ಶಕ್ತಿಗಳು ಏನು ಪ್ರಯತ್ನ ಮಾಡಿವೆ ಅದನ್ನು ಹೋಗಲಾಡಿಸಿದಂತಾಗುತ್ತದೆ ಎಂಬುದನ್ನು ಆಲೋಚನೆ ಮಾಡಬೇಕು. ತಾವು ಕೊಟ್ಟ ವರದಿ ನೋಡಿದೆ ಅದರಲ್ಲಿ ಏನಿದೆ ಅಂದರೆ, ಸತ್ತವರ ಕುಟುಂಬಗಳಿಗೆ 10 ಸಾವಿರ ರೂಪಾಯಿ ಪರಿಹಾರ ಎಂದು ಹೇಳಿದೆ. 30 ಲಕ್ಷ ರೂಪಾಯಿ ಆಸ್ತಿಪಾಸ್ತಿ ಲೂಟಿಯಾಗಿದೆ ಎಂದು ವರದಿ ಇದೆ. ಸತ್ತವರ ಕುಟುಂಬದವರಿಗೆ 10 ಸಾವಿರ ಕಾಂಪೆನ್‌ಸೇಷನ್ ಕೊಟ್ಟಿರತಕ್ಕದ್ದು most insignificant. ಇದನ್ನು ಹೆಚ್ಚು ಮಾಡುವ ಬಗ್ಗೆ ತಾವು ಹೇಳಬೇಕಾಗಿತ್ತು. ಹಿಂದೂ ಜನಾಂಗದ್ದು ಮಾತ್ರವಲ್ಲ ಹಿಂದೂಗಳ ಆಸ್ತಿಪಾಸ್ತಿಯೂ ಲೂಟಿಯಾಗಿದೆ. ತಾವು ನೊಂದವರಿಗೆ ಸಾಂತ್ವನ ಕೊಡಬೇಕಲ್ಲ- 15-20 ದಿವಸ ಆದರೂ ಯಾವುದೇ ಸಾಂತ್ವನ ಸ್ವರೂಪದ ಪರಿಹಾರ ಕೊಡದಿದ್ದರೆ how do you expect normalcy to be restored? Normalcy is to be restored not mechanically but spiritually. ಭಾವನಾತ್ಮಕವಾಗಿ ಜನರಿಗೆ ಸಾಂತ್ವನ ಕೊಟ್ಟರೆ ಮಾತ್ರ ಒಳ್ಳೆಯದಾಗುತ್ತದೆ ಎಂಬುದನ್ನು ಆಲೋಚನೆಮಾಡಬೇಕು ಈ ದೃಷ್ಟಿಯಿಂದ ಈ ಬಗ್ಗೆ ತಾವು ಶೀಘ್ರ ನಿರ್ಧಾರ ತೆಗೆದುಕೊಳ್ಳಬೇಕು ಅಧಿಕಾರಿಗಳು ಯಾರು ತಪ್ಪಿತಸ್ಥರು ಎಂಬುದನ್ನೂ ಪರಿಶೀಲನೆ ಮಾಡಬೇಕು. ಕಮ್ಯುನಲ್ ವಿಚಾರ ಬಂದಾಗ ಯಾರನ್ನು ಜವಾಬ್ದಾರಿ ಮಾಡಬೇಕು ಎಂಬ ಬಗ್ಗೆ ಕೋಡ್ ಇದೆ. ಅದರ ಬಗ್ಗೆ ತಾವು ಹೇಳಲಿಲ್ಲ, ಘಟನೆ ಆಗಿ 15 ದಿವಸ ಆಯಿತು. ತಮ್ಮ ಮನಸ್ಸಿನಲ್ಲಿ ಈಗ ಸ್ಪಷ್ಟವಾದ ಚಿತ್ರ ಇರಬೇಕು. ಕೊನೇಪಕ್ಷ ಪ್ರೈಮಾಫೇಸಿ ಯಾರು ತಪ್ಪಿತಸ್ಥರು ಎಂಬುದು ಗೊತ್ತಿರುತ್ತದೆ. ವರದಿ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದರೆ ಅದು ಸಮಾಧಾನಕರವಾದ ಉತ್ತರ ಆಗುವುದಿಲ್ಲ. ಈ ಬಗ್ಗೆ ಈಗ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಬೇಕು. ತಪ್ಪಿತಸ್ಥರಲ್ಲವಿದ್ದರೆ ಹೇಳಿ. ತಪ್ಪಿತಸ್ಥರು ಎಂದು ಸಾಕ್ಷ್ಯಾಧಾರಗಳಿಂದ ಹೇಳಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ತಪ್ಪಿತಸ್ಥರ ಮೇಲೆ ಈಗ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಬೇಕು. ವರ್ಗಾವಣೆ ಮಾಡುತ್ತೇವೆ ಅಂದರೆ ಆ ಉತ್ತರವನ್ನು ನಾವು ಸ್ವೀಕಾರ ಮಾಡುವುದಿಲ್ಲ. because transfer or even suspension is not a punishment. ಅದರ ಬಗ್ಗೆ ಫೇರ್ ಎನ್‌ಕ್ವೈರಿ ಮಾಡಬೇಕು. ಈ ಹಿನ್ನೆಲೆಯಲ್ಲಿ ಇದೊಂದು ಸಾಧಾರಣ ಘಟನೆ ಎಂಬ ರೀತಿಯಲ್ಲಿ ವರದಿ ಕೊಟ್ಟಿದ್ದು ಮಾತ್ರ ಬಹಳ ಬೇಸರದ ಸಂಗತಿ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ

ಶ್ರೀ ಎಂ. ಎಸ್. ಕೃಷ್ಣನ್, (ರಾಜಾಜಿನಗರ).—

ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮಾತುಗಳನ್ನೆಲ್ಲಾ ಕೇಳಿದನಂತರ ಸರಿಯಾದ ಹೇಳಿಕೆಯನ್ನು ಕೊಡುತ್ತಾರೆ ಎಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ಈ ಹೇಳಿ. ನೋಡಿದರೆ ಇಲ್ಲಿ ನಾವೆಲ್ಲಾ ಮಾತನಾಡುವುದಕ್ಕಿಂತ ಮುಂಚೆ ಇದನ್ನು ತಯಾರು ಮಾಡಿದಂತಿದೆ. ವೆಂಕಟರಾಮಯ್ಯನವರ ಕಾಲಿಂಗ್ ಅಟೆನ್‌ಷನ್ ನೋಟೀಸ್‌ನ ಉತ್ತರದ ಮೇಲೆ ಬೇರೆ ಚೀಟಿ ಅಂಟಿಸಿ ನಮಗೆ ಕೊಟ್ಟಿದ್ದಾರೆ. ಇದನ್ನು ನೋಡಿದರೆ ಗೊತ್ತಾಗುತ್ತದೆ. ಮೊದಲೇ ತೀರ್ಮಾನ ಮಾಡಿ

ನಿನ್ನೆ ರಾತ್ರಿ ಅಥವಾ ಮೊನ್ನೆ ಸ್ಟೇಟ್‌ಮೆಂಟ್ ಮಾಡಿ ಈಗ ಕೊಟ್ಟಿದ್ದಾರೆ. ಇಲ್ಲಿ ಬರೆದು ಕೊಟ್ಟಿರುವುದಕ್ಕಿಂತ ಅವರು ಹೇಳಿರುವುದೇ ಹೆಚ್ಚು ಚೆನ್ನಾಗಿದೆ. ಅನೇಕ ವಿಷಯಗಳನ್ನು ಮುಖ್ಯಮಂತ್ರಿಗಳು ಮಾತನಾಡುವಾಗ ಹೇಳಿದರು. ಇದರ ಆಧಾರದ ಮೇಲೆ ಮಾತನಾಡುವುದೇ ಒಳ್ಳೆಯದು. ಈ ಸ್ಟೇಟ್‌ಮೆಂಟ್ ಆಧಾರದ ಮೇಲೆ ಮಾತನಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದು ನನ್ನ ಅಭಿಪ್ರಾಯ. ಇಲ್ಲಿ ಬಹಳ ಮುಖ್ಯವಾದುದು ಎಂದರೆ ಪೋಲೀಸರ ಪಾತ್ರ ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿದಾಗ ಕ್ರಮ ತೆಗೆದು ಕೊಳ್ಳುವ ವಿಚಾರನೋಡೋಣ ಎಂದು ಹೇಳಿದ್ದೀರಿ. ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡ ಬೇಕಾದುದು ನ್ಯಾಯ. ಅದನ್ನು ಒಪ್ಪಿಕೊಳ್ಳುತ್ತೇನೆ, ಆದರೆ ಎಲ್ಲರೂ ಮಾತನಾಡಿದ್ದನ್ನು ತಾವು

೫-೦೦ ಪಿ.ಎಂ.

ಕೇಳಿದ್ದೀರಿ. ಈಗ ಅಲ್ಲಿ ಗಲಭೆ ಏನಾಗಿದೆ, ಅಲ್ಲಿ ಸರ್ಕಾರ ತನ್ನ ವೈಫಲ್ಯತೆಯನ್ನು ಮೊದಲಿನಿಂದಲೂ ತೋರಿಸಿಕೊಂಡು ಬಂದಿದೆ. ಕೆಲವು ಅಧಿಕಾರಿಗಳು ಯಾರು ಇದ್ದಾರೆ, ಅವರ ಮೇಲೆ ಪ್ರೈಮಾಫೇಸಿ ಯಾದರೂ ಸಸ್‌ಪೆನ್ಷನ್ ಪೆಂಡಿಂಗ್ ಎನಕ್ವೈರಿ ತರಹ ಒಂದು ಕ್ರಮವನ್ನಾದರೂ ತೆಗೆದುಕೊಳ್ಳ ಬೇಕಾಗಿತ್ತು. ಅದರ ಬಗ್ಗೆ ಸ್ಪಷ್ಟವಾದ ನಿಲುವುವನ್ನು ತೆಗೆದುಕೊಳ್ಳಬೇಕಾಗಿತ್ತು. ಆದರೆ ನಿಮಗೆ ಅದ್ಯಾಕೋ ಹೆದರಿಕೆ ಅವರ ಮೇಲೆ ಯಾಕಪ್ಪ ಕ್ರಮ ತೆಗೆದುಕೊಳ್ಳುವುದು ಎಂಬ ಅಭಿಪ್ರಾಯ ಇದ್ದ ಹಾಗೆ ಕಾಣುತ್ತದೆ. ಆದರೆ ಯಾರಿಗೂ ರಕ್ಷಣೆ ಕೊಡುವುದಿಲ್ಲ, ತಪ್ಪಿತಸ್ಥರ ಮೇಲೆ ಕ್ರಮ ತೆಗೆದು ಕೊಳ್ಳುತ್ತೇನೆಂದು ಬಹಳ ದೊಡ್ಡದಾಗಿ ಹೇಳಿದಿರಿ. ಆದರೆ ಅದನ್ನು ಕಾರ್ಯಗತ ಮಾಡಬೇಕಾದುದು ಮೊದಲು ಆಗಬೇಕಾಗಿತ್ತು. ಆ ರೀತಿ ಮಾಡಿದ್ದೇ ಆದರೆ, ಅಲ್ಲಿರುವ ಸಿಖ್‌ರಾಗಲಿ, ಅಥವಾ ಹಿಂದೂ ಗಳಾಗಲಿ, ಅವರ ಮಧ್ಯೆ ವಿಶ್ವಾಸ ಮೂಡಿಸುವ ರೀತಿಯಲ್ಲಿ ಸರ್ಕಾರದವರು ನಡೆದುಕೊಂಡಿದ್ದಾರೆಂದು ಹೇಳಬಹುದಾಗಿತ್ತು. ಆದರೆ ಸರ್ಕಾರದವರು ಆ ರೀತಿ ನಡೆದುಕೊಂಡಿದ್ದಾರೆಂದು ಹೇಳುವುದಕ್ಕಾಗು ವುದಿಲ್ಲ. ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕೆಂದು ಮತ್ತೊಮ್ಮೆ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳು ವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ವಿಷಯವನ್ನು ಹೇಳುವುದಾದರೆ, ಮಾನ್ಯ ಬಸವಲಿಂಗಪ್ಪನವರು ಒಂದು ರೀತಿಯಲ್ಲಿ ಹೇಳಿದರು. ನಾನೂ ಆ ರೀತಿ ಹೇಳುವುದಕ್ಕಾಗುವುದಿಲ್ಲ. ಸಮಿತಿಯನ್ನು ಮಾಡಿದ್ದೀರಿ. ಅದರಲ್ಲಿ ಅನೇಕರು ಗೊತ್ತಿರುವವರೆ ಇದ್ದಾರೆ. ನಮ್ಮ ದೇಶದ ಪ್ರಖ್ಯಾತ ವ್ಯಕ್ತಿಗಳು. ಕೆಲವರು ಮಾತ್ರ ನಮಗೆ ಗೊತ್ತಿಲ್ಲದೆ ಇರಬಹುದು. ಸೂರ್ಜಿತ್‌ಸಿಂಗ್ ಬರ್ನಾಲ, ಇವರು ಎಲ್ಲರಿಗೂ ಗೊತ್ತಿರು ವಂತಹವರೆ ಆಗಿದ್ದಾರೆ. ಇಂತಹವರು ಬಹಳಷ್ಟು ಮಂದಿ ಇದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಇವರು ಪಂಜಾಬಿನಲ್ಲಿ ಏನು ಮಾಡಿದ್ದಾರೆಂಬುದನ್ನು ಹೇಳಿ.

ಶ್ರೀ ಎಂ. ಎಸ್. ಕೃಷ್ಣನ್.— ಈ ಸಮಿತಿಯಲ್ಲಿ ಒಟ್ಟು ೮ ಹೆಸರುಗಳು ಇವೆ. ಆದರೆ ಪ್ರಶ್ನೆ ಏನು ಬರುತ್ತದೆಂದರೆ ಇದರಲ್ಲಿ ಎರಡು ತರಹದ ಅಭಿಪ್ರಾಯಗಳು ಬರುತ್ತವೆ. ಒಂದನೆಯದು, ಮೈನಾರಿಟೀಸ್‌ಗೆ ರಕ್ಷಣೆ ಕೊಡುವ ವಿಚಾರದಲ್ಲಿ ಅವರಿಗೆ ರಕ್ಷಣೆಯನ್ನು ಕೊಡಲೇಬೇಕಾಗುತ್ತದೆ. ಅದನ್ನು ಹೇಳಿದ್ದೀರಿ. ಅದೇ ರೀತಿ ಮತ್ತೊಂದು ವಿಚಾರವೇನೆಂದರೆ, ಮೈನಾರಿಟೀಸ್ ಎಂದು ಹೇಳಿ ಕೊಳ್ಳುವಂತಹವರು ನಿರ್ದಿಷ್ಟವಾಗಿ ಈ ಒಂದು ಘಟನೆಯಲ್ಲಿ ಸರಿಯಾಗಿ ನಡೆದುಕೊಂಡಿಲ್ಲ. ಆದ್ದರಿಂದ ನಿಮಗೆ ರಕ್ಷಣೆ ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಉಡಾಫೆಗಿರಿ ಎಂಬುದಾಗಿ ಹೇಳುವುದಕ್ಕೂ ಕೂಡ ಆಗುತ್ತದೆ. ನಾನು ಎರಡನೆಯದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಮೈನಾರಿಟೀಸ್‌ಗೆ ರಕ್ಷಣೆ ಕೊಟ್ಟೇ ಕೊಡಬೇಕು. ಅವರು ತಪ್ಪು ಮಾಡಿರಬಹುದು. ಅದನ್ನು ಕಾನೂನು ಪ್ರಕಾರ ನೋಡಿ ಕ್ರಮ ತೆಗೆದುಕೊಳ್ಳಿ. ಆದರೆ ಈ ಪರಿಸ್ಥಿತಿಯಲ್ಲಿ ಅಲ್ಲ. ಆಸ್ತಿಪಾಸ್ತಿಯನ್ನು ಕಳೆದು ಕೊಂಡಿರುವವರೂ ಅವರೇ. ಸತ್ತಿರುವವರೂ ಅವರೇ. ಆದ್ದರಿಂದ ಮತ್ತೆ ಮತ್ತೆ ಅದರ ಮೂಲವನ್ನು ಹುಡುಕುತ್ತಾ ಹೋಗುವುದು ಸರಿಯಾದುದಲ್ಲ ಎಂಬುದು ನನ್ನ ಅಭಿಪ್ರಾಯ. ಆದ್ದರಿಂದ ಅವರು ಬಂದರೆ ಏನು ಪ್ರಯೋಜನ ? ಈ ಸಮಿತಿ ಬರುವುದು ನನಗಂತೂ ಸಮಂಜಸವಾಗಿ ಕಾಣುವುದಿಲ್ಲ. ಅದರ ಬದಲು ನಮ್ಮ ರಾಜ್ಯದಲ್ಲಿ ಹಲವಾರು ರಾಜಕೀಯ ಪಕ್ಷಗಳು ಇವೆ. ಪ್ರಜಾಪ್ರಭುತ್ವ ಜಾತ್ಯಾತೀತ ಪಕ್ಷಗಳೂ ಕೂಡ ಇವೆ. ಈ ಎಲ್ಲ ಪಕ್ಷಗಳ ಒಂದು ದೊಡ್ಡ ಕ್ಯಾಂಪೈನ್ ಅನ್ನೇ ಅ ಮಾಡೋಣ. ಅದರ ಮೇಲೆ ಕಾರ್ಯಕ್ರಮವನ್ನು ಹಾಕಿ. ಅದಕ್ಕೆ ಅವರಿಂದಲೂ ಸಾಮಗ್ರಿಗಳನು ಬೇಕಾದರೆ ತರಿಸಿಕೊಳ್ಳಿ. ಆಗ ಶಾಂತಿ ನೆಲೆಸುವುದಕ್ಕೆ ಸಾಧ್ಯವಾಗುತ್ತದೆ. ಮತ್ತೆ ಭಾರತದ ಇತ ರಾಜ್ಯಗಳವರಲ್ಲೂ ಕೂಡ ಕರ್ನಾಟಕದ ಜನ ಒಂದಾಗಿದ್ದಾರೆ, ಕರ್ನಾಟಕ ರಾಜ್ಯದ ಚುನಾಯಿತ

ಪ್ರತಿನಿಧಿಗಳೂ ಕೂಡ ಒಂದಾಗಿದ್ದಾರೆ, ಎಂಬ ಅಭಿಪ್ರಾಯ ಅವರಲ್ಲಿ ಮೂಡುತ್ತದೆ. ಇದರಿಂದ ಕೂಡ ಹೆಚ್ಚು ಬೇಗ ಅಲ್ಲಿ ಶಾಂತಿ ನೆಲೆಸುವುದಕ್ಕೆ ಸಹಾಯಕವಾಗುತ್ತದೆ. Interference by people who need not interfere. ಅದೊಂದನ್ನು ಮಾತ್ರ ಮತ್ತೊಮ್ಮೆ ಹೇಳಬೇಕಾಗಿದೆ ಕಡೆಯದಾಗಿ.......

ಶ್ರೀ ಬಿ. ಬಸವಲಿಂಗಪ್ಪ. ತಾವು ಏನು ಅಭಿಪ್ರಾಯ ಪಟ್ಟು ಕೆಲವು ಮಹನೀಯರನ್ನೊಳಗೊಂಡ ಸೌಹಾರ್ದ ಸಮಿತಿಯೆಂಬುದಾಗಿ ಮಾಡಿ ಅವರ ಮೇಲೆ ಏನು ಖರ್ಚು ಮಾಡುತ್ತೀರಿ, ಅದನ್ನೇ ಪಂಜಾಬಿನಲ್ಲಿ ಶಾಂತಿ ಸ್ಥಾಪನೆ ಮಾಡುವುದಕ್ಕೆ ಖರ್ಚು ಮಾಡಲು ಅವರಿಗೆ ಅವಕಾಶಮಾಡಿಕೊಡಿ.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನೊಂದು ವಿಷಯ ಪರಿಹಾರ ಕೊಡುವ ವಿಚಾರ. ಅದನ್ನು ಎಲ್ಲ ಮಾನ್ಯ ಸದಸ್ಯರು ಹೇಳಿದ್ದಾರೆ.

ಅಧ್ಯಕ್ಷರು.—ಬೆಳಿಗ್ಗೆಯೂ ಉದ್ದುದ್ದ ಭಾಷಣ ಮಾಡಿದ್ದೀರಿ. ಈಗಲೂ ವಿವರಣೆಸುಲ್ಲೂ ಉದ್ದುದ್ದ ಭಾಷಣ ಮಾಡಿದರೆ ಹೇಗೆ. ಜಾಗ್ರತೆ ಮುಗಿಸಿ.

ಶ್ರೀ ಎಂ. ಎಸ್. ಕೃಷ್ಣನ್.—ಇವತ್ತು ಏಕೋ ನಮ್ಮ ಮೇಲೆ ನಿಮ್ಮ ಸಹಾನುಭೂತಿ ಇಲ್ಲ.

ಅಧ್ಯಕ್ಷರು.—ಎಲ್ಲರ ಬಗ್ಗೆಯೂ ಸಹಾನುಭೂತಿ ಇದೆ. ಬೇಗ ಮುಗಿಸಿ ಲಾಸ್ಟ್ ಕೇಳಿಬಿಡಿ.

ಶ್ರೀ ಎಂ. ಎಸ್. ಕೃಷ್ಣನ್.—ಪರಿಹಾರವನ್ನು ಏನು ಕೊಟ್ಟಿದ್ದೀರಿ. ಅದರಲ್ಲಿ ಉದಾರತೆಯನ್ನು ತೋರಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಮಿಟಿ ವಿಷಯದಲ್ಲಿ ೨-೩ ಸದಸ್ಯರು ಹೇಳಿದ್ದಾರೆ. ಈ ಕಮಿಟಿ ಮಾಡಿದ ಉದ್ದೇಶ, ಬಹುತೇಕವಾಗಿ ಅಲ್ಲಿ ಓದತಕ್ಕ ವಿದ್ಯಾರ್ಥಿಗಳು ಪಂಜಾಬ್, ಹರಿಯಾಣ, ಡೆಲ್ಲಿಯಿಂದ ಬಂದಿರುವವರು. ಆ ಮಕ್ಕಳ ತಂದೆತಾಯಿಗಳಲ್ಲಿ ಒಂದು ರೀತಿಯ ಭಯ ಅಪನಂಬಿಕೆ ಬಂದಿದೆ. ನಾವ್ಯಾರೂ ಅವರ ಜೊತೆ ಮಾತನಾಡಿ ಮನವೊಲಿಸುವುದಕ್ಕೆ ಕಷ್ಟವಾಗುತ್ತದೆ. ಇವತ್ತು ಬೀದರ್‌ನಲ್ಲಿ ಅಷ್ಟೇ ಅಲ್ಲ, ದೆಹಲಿಯಲ್ಲಿ ಹಾಗೂ ಇನ್ನಿತರ ಕಡೆ ಗುರುದ್ವಾರಗಳಲ್ಲಿ ಸಭೆಗಳು ಚರ್ಚೆಗಳು ಈ ಘಟನೆ ಬಗ್ಗೆ ನಡೆಯುತ್ತಿವೆ.

ಶ್ರೀ ಬಿ. ಬಸವಲಿಂಗಪ್ಪ.—ಈ ದೇಶಕ್ಕೆ ಸಿಕ್ಕಿರುವುದಾದರೂ ಏನು ಹೇಳಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈದೇಶಕ್ಕೆ ಸಿಕ್ಕಿರುವವಿಚಾರ ಹೇಳುವುದಕ್ಕೆ ಹೋದರೆ ಅದು ಬಹಳವಾಗುತ್ತದೆ, ಯಾರು ಏನು ಮಾಡಿದ್ದಾರೆಂಬುದು ಬೇರೆ ವಿಚಾರ. ಗುರುದ್ವಾರದಲ್ಲಿ ಚರ್ಚೆಗಳು ನಡೆಯುತ್ತವೆ. ಅವರಿಗೆ ತಿಳುವಳಿಕೆ ಕೊಡತಕ್ಕ ದೃಷ್ಟಿಯಿಂದ ಈ ಸಮಿತಿಯನ್ನು ಮಾಡಿದ್ದೇವೆ. ಅವರು ಪಂಜಾಬ್‌ನಲ್ಲಿ...

ಶ್ರೀ ಬಿ. ಬಸವಲಿಂಗಪ್ಪ.—ಕೇವಲ ೧೦ ಫ್ಯಾಮಿಲೀಸ್ ಜನರು ಅಲ್ಲಿ ಇದ್ದರು. ಅವರಿಗೆ ಬುದ್ಧಿ ಹೇಳುವುದಕ್ಕೆ ನೀವು ಸಮಿತಿ ಮಾಡುತ್ತೀರಿ. ನಮಗೆ ಇದರಿಂದ ಗೌರವ ಬರುತ್ತದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ರೀತಿ ಹೇಳಿದರೆ ಉತ್ತರವನ್ನು ಬೇರೆ ರೀತಿ ಹೇಳಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಅಲ್ಲಿ ನೀವು ನೋಡಿ ಉತ್ತರ ಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಹಾಗೆ ಹೇಳುವುದಾದರೆ ಪಂಜಾಬ್‌ನಲ್ಲಿ ಶಾಂತಿ ಸ್ಥಾಪನೆ ಮಾಡುವುದಕ್ಕೆ ಕೇಂದ್ರಕ್ಕೆ ಹಕ್ಕು ಇಲ್ಲ ಅಲ್ಲವೇ ? ಈ ರೀತಿ ತಾವು ಹೇಳುವುದಾದರೆ ನಾವೂ ಕೂಡಾ ಹೇಳಬೇಕಾಗುತ್ತದೆ ? ಇವತ್ತು ಉತ್ತರದಲ್ಲಿ ವಿದ್ಯಾರ್ಥಿಗಳ ಮತ್ತು ಅವರ ತಂದೆ ತಾಯಿಗಳ ಭಾವನೆಗಳನ್ನು ಕೆರಳಿಸತಕ್ಕ ಪ್ರಯತ್ನಗಳು ಅಲ್ಲಿ ನಡೆಯುತ್ತಿವೆ. ಅದನ್ನು ತಡೆದು ಹೇಳುವುದಕ್ಕೆ ಇದರ ಅವಶ್ಯಕತೆ ಇದೆ. ಇನ್ನೂ ಒಂದಿಬ್ಬರನ್ನು ಸಮಿತಿಗೆ ಸೇರಿಸಿ ಎಂದು ಮಾನ್ಯ ಬಂಗಾರಪ್ಪನವರು ಹೇಳಿದ್ದಾರೆ. ಇನ್ನೊಂದೆರಡು ಸಲಹೆಗಳನ್ನು ಮಾನ್ಯ ಕೃಷ್ಣನ್ ಅವರು ಹಾಗೂ ಇನ್ನಿತರ ಸದಸ್ಯರು ಕೊಟ್ಟಿದ್ದಾರೆ. ನಮ್ಮ ರಾಜ್ಯದ ರಾಜಕೀಯ ಪಕ್ಷಗಳ ಒಂದು ಸಮಿತಿ ಮಾಡಬೇಕೆಂದು ಹೇಳಿದ್ದಾರೆ.

ಈ ಬಗ್ಗೆ ನಿಮ್ಮ ಜೊತೆ ಚರ್ಚೆ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ಸ್ಥಾನಿಕವಾಗಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇದರಿಂದ ಅನುಕೂಲವಾಗುತ್ತದೆ, ಸರ್ವ ಪಕ್ಷದ ಸಮಿತಿ ರಚನೆ ಮಾಡುವುದಕ್ಕೆ ತಮ್ಮ ಜೊತೆ ಚರ್ಚೆ ಮಾಡುತ್ತೇನೆ.

ಶ್ರೀ ಯು. ಭೂಪತಿ.—ಅವರು ಸರ್ವ ಪಕ್ಷ ಎನ್ನಲಿಲ್ಲ. ಜಾತ್ಯಾತೀತ ಪಕ್ಷಗಳ ಸಮಿತಿ ಎಂದು ಹೇಳಿದರು.

ಶ್ರೀ ಎಸ್. ಆರ್. ಬೊಮ್ಮಾಯಿ.—ನೋಡಿ. ಎಲ್ಲರೂ ಜಾತ್ಯಾತೀತ ಎಂದು ಕರೆದುಕೋತಾರೆ ಆದರೆ ಜಾತೀಯತೆ ಮಾಡುತ್ತಾರೆ. ನಿಮ್ಮ ಪಕ್ಷದ್ದು ಹೇಳಿದರೆ ನಿಮಗೇ ಆಶ್ಚರ್ಯವಾಗುತ್ತದೆ. ಅದು ಈಗ ಬೇಡ. ಹೊರಗಡೆ ನಾನು ಹೇಳುತ್ತೇನೆ.

ಶ್ರೀ ಯು. ಭೂಪತಿ.—ಅಂದರೆ ನಿಮ್ಮ ಪಕ್ಷ ಜಾತೀಯತೆ ಮಾಡುತ್ತದೆಂದು ನೀವು ಈಗ ಒಪ್ಪಿಕೊಂಡಹಾಗೆ ಆಯಿತು. ನಮ್ಮ ಪಕ್ಷದ ಬಗ್ಗೆ ಏನಿದ್ದರೂ ಈಗ ಹೇಳಿ. ಹೊರಗಡೆ ಏಕೆ ?

ಶ್ರೀ ಎಂ. ಎಸ್. ಕೃಷ್ಣನ್.—ಈ ರೀತಿ ಮಾನ್ಯ ಮುಖ್ಯಮಂತ್ರಿಗಳು ಹೇಳಬಾರದು. ಏನಿದ್ದರೂ ಇಲ್ಲೇ ಹೇಳಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲ್ಲಿ ಹೇಳುವುದು ಸರಿಯಲ್ಲ. ಮಾನ್ಯ ಭೂಪತಿಯವರಿಗೆ ಕನ್ವಿನ್ಸ್ ಆಗುವಹಾಗೆ ನಾನು ಹೊರಗೆ ಹೇಳುತ್ತೇನೆ.

ಶ್ರೀ ಯು. ಭೂಪತಿ.—ನೀವು ಕನ್ವಿನ್ಸ್ ಮಾಡಿದರೆ ನಾವು ಒಪ್ಪಿಕೊಳ್ಳುವುದಕ್ಕೆ ತಯಾರು ಇದ್ದೇವೆ. ತಾವು ಇಲ್ಲೇ ಹೇಳಿ.

ಶ್ರೀ ಎಂ. ಎಸ್. ಕೃಷ್ಣನ್.—ಈ ರೀತಿ ತಾವು ಮಾತನಾಡಿದರೆ ಅನುಮಾನಕ್ಕೆ ಆಸ್ಪದ ವಾಗುತ್ತದೆ. ನಮ್ಮಲ್ಲೂ ಕೋಮು ಭಾವನೆ ಇರಬಹುದೇನೋ ಎನ್ನುವ ಭಾವನೆ ಬರುತ್ತದೆ. ಆ ರೀತಿ ನಮ್ಮಲ್ಲಿ ಇಲ್ಲ ಸ್ವಾಮಿ, ತಾವು ಈ ರೀತಿ ಮಾತನಾಡುವುದು ಸರಿಯಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಎಲ್ಲಾ ಪಕ್ಷದವರೂ ಹಾಗೆ ಹೇಳ್ಕೊಳ್ಳೋಕೆ ಇಷ್ಟಪಡುತ್ತಾರೆ ಎಂದು ಅವರು ಹೇಳಿದ್ದಾರೆ

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಪಕ್ಷ ಹಾಗೆ ಹೇಳಿಕೊಳ್ಳುವ ಪಕ್ಷ ಅಲ್ಲ. ಆದರೆ ಬೇರೆ ಪಕ್ಷಗಳಲ್ಲಿ ಆ ರೀತಿ ನಡೆದುಕೊಳ್ಳುತ್ತಾ ಇರಬಹುದು. It is unfair on your part.

SRI S. R. BOMMAI.—There are some persons in all the parties. Even in our party and in your party.

SRI S. BANGARAPPA.—If there are some persons in all parties, tell something about your own party and the party of Mr. Krishnan. But dont tell something about our party.

SRI M. S. KRISHNAN.—When you do good, we say good. If you don't do good, we say 'no'.

ಶ್ರೀ ಎ. ಎಂ. ಹಿಂಡಸಗೇರಿ.—ಅಲ್ಲಿ ಕಲಿಯಲು ವಿದ್ಯಾರ್ಥಿಗಳು ಉತ್ತರಭಾಗದಿಂದ ಬರುತ್ತಾರೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅವರೂ ಕೂಡ ಮಾತನಾಡಲಿಕ್ಕೆ ಏನು ಕಷ್ಟ ? ಅನೇಕ ಪಾರ್ಟಿ ಜನರಿಗೆ ಬಹಳ ತೊಂದರೆಯಾಗಿದೆ, ನೋವು ಆಗಿದೆ. ಕಮಿಟಿಯಲ್ಲಿ ಬೇರೆ ಕಮ್ಯುನಿಟಿ ಯವರನ್ನು ಸೇರಿಸಬೇಕೆಂದು ನನ್ನ ಸಲಹೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲಾ ಪಕ್ಷದವರನ್ನೊಳಗೊಂಡ ಕಮಿಟಿ ರಚನೆ ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಎ. ಎಂ. ಹಿಂಡಸಗೇರಿ.—ಕಲ್ಚರಲ್ ಹೆಡ್ಸ್ ರಿಲೀಜಿಯಸ್ ಹೆಡ್ಸ್‌ಗಳನ್ನು ಕಮಿಟಿಯಲ್ಲಿ ಸೇರಿಸಿ. ಶಾಸಕರ ಸಮಿತಿಯನ್ನು ಮಾಡುವುದು ಬೇರೆ. ಪೊಲಿಟಿಕಲ್ ಹೆಡ್ಸ್ ಸೇರಿಸುವುದರ ಜೊತೆಗೆ ಇನ್ನಿತರ ಜಾತಿಯವರನ್ನು ಸೇರಿಸಿದರೆ ಒಳ್ಳೆಯದಾಗುತ್ತದೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.– ಅದನ್ನು ಪರಿಶೀಲನೆ ಮಾಡುತ್ತೇನೆ. ಅಧಿಕಾರಿಗಳನ್ನು ಅಮಾನತ್ತಿನಲ್ಲಿಡುವ ಬಗ್ಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ನಾನು ಬೀದರ್‌ಗೆ ಭೇಟಿ ಕೊಟ್ಟಾಗ ಎರಡು ರೀತಿಯ ಅಭಿಪ್ರಾಯಗಳು ಬಂತು. ಅದೇರೀತಿ ಸಂತೋಷ್ ಮೋಹನ್‌ದೇವ್ ಭೇಟಿ ಕೊಟ್ಟಾಗ ಎರಡು ಅಭಿಪ್ರಾಯಗಳು ಬಂದವು. ನಾವು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡೆವು. ಈ ಸದನದಲ್ಲೂ ಎರಡು ಅಭಿಪ್ರಾಯಗಳಿವೆ. ಈ ಬಗ್ಗೆ ಸಿ. ಒ. ಡಿ. ತನಿಖೆ ನಡೆಯುತ್ತಿದೆ. ಅಮಾನತ್ತಿನಲ್ಲಿಡಬೇಕಾದರೆ ಕೆಲವು ವಿಚಾರಗಳನ್ನು ಗಮನಕ್ಕೆ ತೆಗೆದುಕೊಂಡು ಮಾಡಬೇಕಾಗುತ್ತದೆ. ಇತ್ತೀಚೆಗೆ ನನಗಂತೂ ಒಂದು ತರಹ ಆಶ್ಚರ್ಯವಾಗುತ್ತಿದೆ. ಅದು ಸರಿಯಿದೆಯೋ ಇಲ್ಲವೋ ಅದು ಬೇರೆ. ಸಸ್ಪೆಂಡ್ ಮಾಡಿದರೆ, ಟ್ರಾನ್ಸ್‌ಫರ್ ಮಾಡಿದರೆ ಕೋರ್ಟಿನಿಂದ ಸ್ಟೇ ಬರುತ್ತದೆ. ಕೆ. ಎ. ಟಿ., ಟ್ರಿಬ್ಯುನಲ್, ಹೈಕೋರ್ಟ್‌ಗಳು ಮಾಡತಕ್ಕ ಅರ್ಡರ್‌ಗಳು ಸರಿಯಾಗಿ ಇವೆಯೋ ಇಲ್ಲವೋ ಎಂಬುದರ ಬಗ್ಗೆ ನಾನು ಹೆಚ್ಚು ಹೇಳುವುದಿಲ್ಲ. ಅದರ ಬಗ್ಗೆ ಉಚ್ಚ ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗಬೇಕೆಂದು ಮಾಡಿದ್ದೇವೆ. ಈ ತರಹ ಆಗಬಾರದು, ಅದರಿಂದ ಮತ್ತೊಂದು ಕೆಟ್ಟ ಪರಿಣಾಮ ಆಗುತ್ತದೆ. ಬೀದರ್ ಘಟನೆಯ ಬಗ್ಗೆ ರಿಪೋರ್ಟ್ ಬಂದ ಮೇಲೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ. ಮಾನ್ಯ ಮೊಯಿಲಿಯವರು ಪ್ರಾಪರ್ಟಿ ಲಾಸ್ ಬಗ್ಗೆ ಹೇಳಿದರು, ಆ ಬಗ್ಗೆ ಜಿಲ್ಲಾಧಿಕಾರಿಗಳವರ ರಿಪೋರ್ಟ್ ಬಂದಿದೆ. ಸತ್ತವರ ಬಗ್ಗೆ ಪರಿಹಾರ ಕೊಟ್ಟಿದ್ದೇವೆ. ಸರ್ಕಾರ ನಿಯಮಕ್ಕನುಗುಣವಾಗಿ ಏನು ಪರಿಹಾರ ಕೊಡಬೇಕೋ ಅದನ್ನು ಕೊಡುತ್ತೇವೆ. ಅದು ಸಾಲದು. ಕೋಟ್ಯಾಂತರ ರೂಪಾಯಿಗಳನ್ನು ಕೊಡಲಿಕ್ಕೆ ಸರ್ಕಾರಕ್ಕೆ ಶಕ್ತಿಯಿಲ್ಲ. ಅವರುಗಳಿಗೆಲ್ಲ ಬ್ಯಾಂಕುಗಳ ಮೂಲಕ ಬಡ್ಡಿ ರಹಿತ ಸಾಲ ಕೊಡಿಸುವ ವ್ಯವಸ್ಥೆ ಮಾಡಿಸಲಾಗುತ್ತದೆ. ಅವಶ್ಯಬಿದ್ದರೆ ಸರ್ಕಾರದ ಮೂಲಕ ಗ್ಯಾರಂಟಿ ನಿಲ್ಲತಕ್ಕ ಯೋಚನೆ ಮಾಡಿದ್ದೇವೆ. ಅನೇಕ ಜನರ ಅಂಗಡಿ ಮುಂಗಟ್ಟುಗಳು ನಾಶವಾಗಿವೆ. ಬ್ಯಾಂಕಿನವರ ಜೊತೆ ಮಾತನಾಡಿದ್ದೇವೆ, ಅವಶ್ಯಬಿದ್ದರೆ ಸಾಲಕ್ಕೆ ಗ್ಯಾರಂಟಿ ಕೊಡತಕ್ಕ ಆಲೋಚನೆ ಮಾಡಿದ್ದೇವೆ. ಆದಷ್ಟು ಬೇಗ ಆಸ್ತಿಪಾಸ್ತಿಗಳ ನಷ್ಟದ ಬಗ್ಗೆ ವಿಚಾರ ಮಾಡಲಾಗುವುದು.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಸದಸ್ಯರುಗಳು ಹೇಳಿದ್ದನ್ನೆಲ್ಲಾ ಕೇಳಿದ ಮೇಲೆ ಈ ನಿಲುವಳಿ ಸೂಚನೆಗೆ ನನ್ನ ಅನುಮತಿಯನ್ನು ನಿರಾಕರಣೆ ಮಾಡಿದ್ದೇನೆ.

ಸಭೆಯನ್ನು ನಾಳೆ ಬೆಳಿಗ್ಗೆ ೧೧-೦೦ಗಂಟೆಗೆ ಮುಂದೂಡಲಾಗಿದೆ.

(ಸದನವು ೫ಗಂಟೆ ೧೪ನಿಮಿಷಗಳಿಗೆ ಮುಕ್ತಾಯವಾಗಿ ಮರುದಿನ ಬೆಳಿಗ್ಗೆ ಮಂಗಳವಾರ ೧೧ ಗಂಟೆಗೆ ಪುನಃ ಸೇರಲು ನಿಶ್ಚಯಿಸಿತು)